ಸಣ್ಣ ಕೈಗಾರಿಕೆಗಳು

ಆರ್. ಎಸ್. ಆರಾಧ್ಯ

ಬೆಂಗಳೂರು ವಿಶ್ವವಿದ್ಯಾಲಯ
ಬೆಂಗಳೂರು

15

ಸಣ್ಣ ಕೈಗಾರಿಕೆಗಳು

ಆರ್. ಎಸ್. ಆರಾಧ್ಯ

ಪ್ರಸಾರಾಂಗ
ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು

SANNA KAIGARIKEGALU By Sri R. S. Aradhya
Published by the Bangalore University, Bangalore
pp 68+viii

ಪ್ರಥಮ ಮುದ್ರಣ 1972
ದ್ವಿತೀಯ ಮುದ್ರಣ 1977

ಪ್ರಕಾಶಕರು :
ಹೆಚ್. ಆರ್. ದಾಸೇಗೌಡ
ಪ್ರಸಾರಾಂಗ
ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು-560056

ಬೆಲೆ : 50 ಪೈಸೆ

ಮುದ್ರಣ
ಪ್ರಸಾರಾಂಗ, ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು

ಮುನ್ನುಡಿ

ವಿಶ್ವವಿದ್ಯಾಲಯಗಳು ಕೇವಲ ತಿಳುವಳಿಕೆಯ ಕೇಂದ್ರಗಳಾದರೆ ಸಾಲದು. ಅವು ಸುತ್ತಮುತ್ತಲಿನ ಜನತೆಯ ಶೈಕ್ಷಣಿಕ–ಸಾಂಸ್ಕೃತಿಕ ಆಗುಹೋಗುಗಳಲ್ಲಿ ಸಕ್ರಿಯವಾಗಿ ಪಾಲ್ಗೊಳ್ಳುವುದು ಅವಶ್ಯಕ. ಪಾಠಪ್ರವಚನ, ಉನ್ನತ ವ್ಯಾಸಂಗ ಮತ್ತು ಸಂಶೋಧನೆಗಳಿಗೆ ಮಾತ್ರ ವಿಶ್ವವಿದ್ಯಾಲಯಗಳ ಕಾರ್ಯವ್ಯಾಪ್ತಿ ಸೀಮಿತವಾಗಿರಬಾರದು. ಸಾಮಾನ್ಯ ಜನತೆಯಲ್ಲಿ ಅರಿವಿನ ಸಿರಿಯನ್ನು ಹಂಚುವ ಹೊಣೆ ಹೊತ್ತು ವಿಶ್ವವಿದ್ಯಾಲಯಗಳು ಜ್ಞಾನ ಪ್ರಸಾರ ಕೇಂದ್ರಗಳಾಗಿ ಮುನ್ನಡೆಯಬೇಕು.

ಬೆಂಗಳೂರು ವಿಶ್ವವಿದ್ಯಾಲಯವು ಕಳೆದ ನಾಲ್ಕೈದು ವರ್ಷಗಳಿಂದ ನಗರದ ನಾನಾ ಸಂಘಸಂಸ್ಥೆಗಳಲ್ಲಿ, ಕಾರ್ಖಾನೆ ಕಾರ್ಮಿಕ ಕೂಟಗಳಲ್ಲಿ ಹಾಗೂ ಗ್ರಾಮಾಂತರ ಪ್ರದೇಶಗಳಲ್ಲಿ ಪ್ರಚಾರೋಪನ್ಯಾಸಗಳನ್ನು ಏರ್ಪಡಿಸುತ್ತ ಬಂದಿದೆ. ಆಯಾ ವಿಷಯಗಳಲ್ಲಿ ಪರಿಣತರಾದವರು ಭಾಷಣಗಳನ್ನು ನೀಡಿ, ಅನಂತರ ಅವುಗಳನ್ನು ಪುಸ್ತಕ ರೂಪದಲ್ಲಿ ಪ್ರಕಟಿಸಲು ನಮ್ಮೊಡನೆ ಸಹಕರಿಸುತ್ತಿರುವುದು ಸಂತಸದ ಸಂಗತಿ. ಅತ್ಯಧಿಕ ಸಂಖ್ಯೆಯಲ್ಲಿ ನಮ್ಮ ಜನತೆಯ ಕೈಸೇರಲೆಂದು ಈ ಕಿರುಹೊತ್ತಿಗೆಗಳನ್ನು ಸುಲಭ ಬೆಲೆಯಲ್ಲಿ ಪ್ರಕಟಿಸುತ್ತಿದ್ದೇವೆ. ಕನ್ನಡ ಸಾಹಿತ್ಯದ ವಿವಿಧ ಪ್ರಕಾರಗಳ ಶ್ರೀಮಂತಿಕೆಯನ್ನು ಹೆಚ್ಚಿಸಿ, ಜನಸಾಮಾನ್ಯರ ತಿಳಿವನ್ನು ಉತ್ತಮಗೊಳಿಸುವ ದಿಸೆಯಲ್ಲಿ ಈ ಹೊತ್ತಿಗೆಗಳು ಸಹಕಾರಿಯಾಗಲೆಂದು ನಾನು ಮನಸಾರೆ ಹಾರೈಸುತ್ತೇನೆ.

ಎಚ್. ನರಸಿಂಹಯ್ಯ
ಉಪಕುಲಪತಿ

ಲೇಖಕರ ಮಾತು

ಭಾರತದಲ್ಲಿ ಸಣ್ಣ ಪ್ರಮಾಣದ ಕೈಗಾರಿಕೆಗಳ ಪ್ರಗತಿ ದೊಡ್ಡ ಪ್ರಮಾಣದಲ್ಲಿ ನಡೆದಿದೆ, ನಡೆಯುತ್ತಿದೆ. ಮೊದಲು ಸಣ್ಣ ಕೈಗಾರಿಕೆ ಎಂದರೆ ಸುಮಾರು 1 ಲಕ್ಷ ರೂ.ನ ಬಂಡವಾಳದಲ್ಲಿ ಆರಂಭವಾಗಿರುವ, ನಡೆಯಿಸಲ್ಪಡುತ್ತಿರುವ ಎಲ್ಲಾ ಕೈಗಾರಿಕೆಗಳನ್ನು ಸಣ್ಣ ಕೈಗಾರಿಕೆಗಳು ಎಂದು ಕರೆಯಲಾಗುತ್ತಿತ್ತು. ಅನಂತರ 5 ಲಕ್ಷ ರೂ. ಬಂಡವಾಳವುಳ್ಳ (ಅಂದರೆ ಯಂತ್ರಗಳು, ಕಟ್ಟಡಗಳು, ಭೂಮಿ, ಮುಂತಾದವುಗಳ ಬೆಲೆಯೂ ಸೇರಿ) ಕೈಗಾರಿಕೆಗಳನ್ನೂ ಸಣ್ಣ ಕೈಗಾರಿಕೆಗಳು ಎಂದು ಕರೆಯಲಾಯಿತು. ಈಗ ಭೂಮಿ, ಕಟ್ಟಡ ಮುಂತಾದವುಗಳನ್ನು ಬಿಟ್ಟು ಯಂತ್ರಗಳು ಮತ್ತು ಇತರ ಸಲಕರಣೆಗಳ ಬೆಲೆ ಏಳುವರೆ ಲಕ್ಷ ರೂ.ಗಳಿಗೆ ಮೀರದೆ ಇದ್ದರೆ ಅಂತಹ ಕೈಗಾರಿಕೆಗಳನ್ನೂ ಸಣ್ಣ ಕೈಗಾರಿಕೆಗಳು ಎಂದು ಪರಿಗಣಿಸಲಾಗುತ್ತಿದೆ.

ಈ ರೀತಿ ಸಣ್ಣ ಕೈಗಾರಿಕೆಗಳು ಎಂದು ಪರಿಗಣಿಸಲ್ಪಟ್ಟವರಿಗೆ ರಾಜ್ಯ ಮತ್ತು ಕೇಂದ್ರ ಸರ್ಕಾರಗಳು ಅನೇಕ ರೀತಿಯ ಸೌಲಭ್ಯ ಮತ್ತು ರಿಯಾಯಿತಿಗಳನ್ನು ಕೊಡುತ್ತಿವೆ. ಕೇಂದ್ರ ಸರ್ಕಾರದವರು ಕೊಡುತ್ತಿರುವ ರಿಯಾಯಿತಿಗಳೇನು ? ರಾಜ್ಯ ಸರ್ಕಾರದವರು ಕೊಡುತ್ತಿರುವ ರಿಯಾಯಿತಿಗಳು ಮತ್ತು ಸೌಲಭ್ಯಗಳು ಏನು ? ಅವುಗಳನ್ನು ಪಡೆಯುವುದು ಹೇಗೆ ? ಎಂಬುದನ್ನು ವಿವರಿಸುವುದೇ ಈ ಪುಸ್ತಕದ ಉದ್ದೇಶ. ಇತ್ತೀಚೆಗೆ ರಿಜರ್ವ್ ಬ್ಯಾಂಕಿನವರ ಸೂಚನೆಯಂತೆ ಸ್ಟೇಟ್

ಬ್ಯಾಂಕ್ ಮತ್ತು ಅದರ ಉಪಶಾಖೆಗಳು, ರಾಷ್ಟ್ರೀಕೃತ ಬ್ಯಾಂಕುಗಳು ಮತ್ತು ಇತರ ಬ್ಯಾಂಕುಗಳು ಹಣದ ಹೆಚ್ಚಿನ ಸೌಲಭ್ಯವನ್ನು ಈ ಸಣ್ಣ ಕೈಗಾರಿಕೆಗಳಿಗೆ ಕೊಡುತ್ತಿದ್ದಾರೆ. ಈ ಸೌಕರ್ಯ ಸೌಲಭ್ಯ ರಿಯಾಯಿತಿಗಳು ಆಗಾಗ್ಗೆ ಬದಲಾವಣೆಗಳಾಗುತ್ತಲೇ ಇರುತ್ತವೆ.

ಸಣ್ಣ ಕೈಗಾರಿಕೆಗಳ ಪ್ರಗತಿಯು ದೇಶದ ಆರ್ಥಿಕಾಭಿವೃದ್ಧಿಗೆ ಮತ್ತು ನಿರುದ್ಯೋಗ ನಿವಾರಣೆಗೆ ಬಹಳ ಮುಖ್ಯವಾದ ಸಾಧನವಾಗಿದೆ. ಆದ್ದರಿಂದಲೇ ಸರ್ಕಾರವು ಇದರ ನೆರವಿಗೆ ಬರುತ್ತಿರುವುದರ ಮುಖ್ಯ ಕಾರಣ. ಆಸಕ್ತಿಯುಳ್ಳ ಜನತೆ ಮತ್ತು ನಿರುದ್ಯೋಗ ಯುವಕರು ಈ ನೆರವನ್ನು ಸದುಪಯೋಗಪಡಿಸಿಕೊಳ್ಳಲೆಂದು ನನ್ನ ಆಶೆ. ಪ್ರಚಾರೋಪನ್ಯಾಸವನ್ನು ಪುಸ್ತಕ ರೂಪದಲ್ಲಿ ಪ್ರಕಟಿಸಲು ನೆರವಾದ ಬೆಂಗಳೂರು ವಿಶ್ವವಿದ್ಯಾಲಯದ ಸಂಬಂಧಪಟ್ಟ ಅಧಿಕಾರಿಗಳಿಗೆ ನನ್ನ ಹೃತ್ಪೂರ್ವಕ ವಂದನೆಗಳು.

ಆರ್. ಎಸ್. ಆರಾಧ್ಯ

ಪರಿವಿಡಿ

1. ಭಾರತದಲ್ಲಿ ಸಣ್ಣ ಕೈಗಾರಿಕೆಗಳು

ಸ್ವಾತಂತ್ರ್ಯಕ್ಕೆ ಮುಂಚೆ ಭಾರತದ ಆರ್ಥಿಕ ವ್ಯವಸ್ಥೆಯಲ್ಲಿ ಸಣ್ಣ ಕೈಗಾರಿಕೆಗಳ ಸ್ಥಾನ ಬಹಳ ಕಿರಿದಾಗಿತ್ತು. ಆಧುನಿಕ ಸಣ್ಣ ಉದ್ಯಮಗಳು ಬಹಳ ಕಡಿಮೆ ಇದ್ದು, ಸಣ್ಣ ಕೈಗಾರಿಕಾ ಕ್ಷೇತ್ರದಲ್ಲಿ ಸರಳವಾದ ಕೈ-ಸಾಧನಗಳಿಂದ ಕುಶಲ ಸಾಮಗ್ರಿಗಳನ್ನು ತಯಾರಿಸುವ ಉದ್ಯಮಗಳೇ ಹೆಚ್ಚಾಗಿದ್ದವು. ಆದರೆ ಇವುಗಳಲ್ಲಿ ಸಂಘಟನೆ ಇರಲಿಲ್ಲ. ಎರಡನೆಯ ಮಹಾಯುದ್ಧ ಕಾಲದಲ್ಲಿ ಕೇಂದ್ರ ಸರ್ಕಾರವು ಈ ಸಣ್ಣ ಕೈಗಾರಿಕೆಗಳ ಅಭಿವೃದ್ಧಿಯಲ್ಲಿ ಆಸಕ್ತಿ ವಹಿಸಲು ಮೊದಲು ಮಾಡಿತು. 1947ರಲ್ಲಿ ಕೈಗಾರಿಕಾ ಪ್ರಗತಿಗಾಗಿ ನಡೆಸಲಾದ ಸಮ್ಮೇಳನವು ಮಾಡಿದ ಶಿಫಾರಸುಗಳನ್ನು ಕಾರ್ಯಗತಗೊಳಿಸಲು "ಗೃಹ ಕೈಗಾರಿಕಾ ಮಂಡಳಿ" ಯೆಂಬ ಸಲಹಾ ಸಮಿತಿಯನ್ನು ರಚಿಸಲಾಯಿತು. ಸಣ್ಣ ಕೈಗಾರಿಕೆಗಳಿಗೆ ಸಂಬಂಧಿಸಿದ ಸಮಸ್ಯೆಗಳ ವೈವಿಧ್ಯವನ್ನು ಮನಗಂಡು 1952-53ರ ಅವಧಿಯಲ್ಲಿ ಕೈಮಗ್ಗ, ಕುಶಲ ಕೈಗಾರಿಕೆ, ನಾರು, ರೇಷ್ಮೆ ಹಾಗೂ ಖಾದಿ ಮತ್ತು ಗ್ರಾಮೋದ್ಯೋಗಗಳಿಗಾಗಿ ಐದು ಪ್ರತ್ಯೇಕ ಮಂಡಳಿಗಳನ್ನು ರಚಿಸಲಾಯಿತು.

ಮೊದಲನೆಯ ಪಂಚವಾರ್ಷಿಕ ಯೋಜನೆಯ ಅವಧಿಯಲ್ಲಿಯೂ ಸಣ್ಣ ಕೈಗಾರಿಕೆಗಳು ದೇಶದ ಕೈಗಾರಿಕಾ ಕ್ಷೇತ್ರದಲ್ಲಿ ಒಂದು ನಿರ್ದಿಷ್ಟ ಸ್ಥಾನವನು ಪಡೆದಿರಲಿಲ್ಲ. ಕೈಮಗ್ಗ,

ಎಣ್ಣೆಗಾಣ ಮುಂತಾದ ಪರಂಪರಾಗತ ಉದ್ಯೋಗಗಳು, ಚರ್ಮದ ಪಾದರಕ್ಷೆಗಳು, ಸೈಕಲ್ ಸಾಮಾನುಗಳು ಮುಂತಾದ ಯಾಂತ್ರಿಕ ಕೈಗಾರಿಕೆಗಳು–ಈ ಎರಡನ್ನೂ ಸಣ್ಣ ಕೈಗಾರಿಕೆಗಳ ಗುಂಪಿಗೇ ಸೇರಿಸಲಾಗಿತ್ತು. ಮುಖ್ಯವಾಗಿ ರಕ್ಷಣಾ ಇಲಾಖೆಯ ಬೇಡಿಕೆಗಳನ್ನು ಪೂರೈಸಲು ಎರಡನೆಯ ಮಹಾಯುದ್ಧದ ಕಾಲ ದಲ್ಲಿ ಸ್ಥಾಪಿಸಲಾದ ಕೈಗಾರಿಕೆಗಳು ಆಧುನಿಕ ಸಣ್ಣ ಕೈಗಾರಿಕೆಗಳ ಅಭಿವೃದ್ಧಿಗೆ ಹೆಚ್ಚು ನೆರವಾದವು.

ಕೇಂದ್ರ ಸಂಸ್ಥೆಗಳು

1953–54ರಲ್ಲಿ ಭಾರತಕ್ಕೆ ಭೇಟಿಕೊಟ್ಟ ಪ್ರಥಮ ಅಂತರರಾಷ್ಟ್ರೀಯ ಯೋಜನಾ ಮಂಡಲಿಯ ಶಿಫಾರಸುಗಳು ಸಣ್ಣ ಕೈಗಾರಿಕೆಗಳ ಕ್ಷೇತ್ರದಲ್ಲಿ ಹೊಸ ಚೈತನ್ಯವನ್ನು ತುಂಬಿ ದುವು. ಈ ನಿಯೋಗದ ಸಲಹೆಯಂತೆ ನಾಲ್ಕು ಪ್ರಾದೇಶಿಕ ಸಣ್ಣ ಕೈಗಾರಿಕಾ ಸೇವಾ ಸಂಸ್ಥೆ (Small Industries Service Institute) ಗಳನ್ನೂ ಮತ್ತು ಒಂದು ಸಣ್ಣ ಕೈಗಾರಿಕಾ ಕಾರ್ಪೊರೇಷನ್ನನ್ನೂ (Small Industries Corporation) ಸ್ಥಾಪಿಸಲಾಯಿತು. ದೇಶದ ಸಣ್ಣ ಕೈಗಾರಿಕೆಗಳ ಸಮಗ್ರ ಯೋಜನೆ, ಅಭಿವೃದ್ಧಿ ಹಾಗೂ ಸಂಘಟನೆಗಾಗಿ "ಅಖಿಲ ಭಾರತ ಸಣ್ಣ ಪ್ರಮಾಣದ ಕೈಗಾರಿಕಾ ಮಂಡಳಿ"ಯನ್ನು (All India Small Scale Industries Board) 1954 ರಲ್ಲಿ ಸ್ಥಾಪಿಸಲಾಯಿತು. ಇದರಲ್ಲಿ ದೇಶಾದ್ಯಂತ ಇರುವ ವಾಣಿಜ್ಯ ಹಾಗೂ ಕೈಗಾರಿಕಾ ಕ್ಷೇತ್ರಗಳು ಸರ್ಕಾರ ಹಾಗೂ ಖಾಸಗೀ ಸಂಸ್ಥೆಗಳು, ರಿಸರ್ವ್ ಬ್ಯಾಂಕ್, ಫೈನಾನ್ಸ್ ಕಾರ್ಪೊರೇಷನ್

ಮತ್ತು ಸಣ್ಣ ಕೈಗಾರಿಕೆಗಳು ಇವುಗಳಿಂದ ಪ್ರತಿನಿಧಿಗಳ ನಾಮ ಕರಣ ಮಾಡಲಾಯಿತು.

ಸಣ್ಣ ಕೈಗಾರಿಕಾ ಸೇವಾ ಸಂಸ್ಥೆಗಳು ರಾಜ್ಯ ಮಟ್ಟದ ವಿಸ್ತರಣಾ ಕೇಂದ್ರಗಳ ಮೂಲಕ ದೇಶಾದ್ಯಂತ ಸಣ್ಣ ಉದ್ಯಮ ಗಳಿಗೆ ತಾಂತ್ರಿಕ ಹಾಗೂ ನಿರ್ವಹಣೆಗೆ ಸಂಬಂಧಿಸಿದ ಸಲಹೆ ಗಳನ್ನು ನೀಡುವುದರ ಮೂಲಕ ಕೇಂದ್ರದ ನೀತಿಗಳನ್ನು ಕಾರ್ಯಗತಗೊಳಿಸಲು ಕೇಂದ್ರದಲ್ಲಿ ಅಭಿವೃದ್ಧಿ ಕಮೀಷನರ್ ಕಚೇರಿಯೊಂದನ್ನು ಸ್ಥಾಪಿಸಲಾಯಿತು. ಸಣ್ಣ ಕೈಗಾರಿಕೆಗಳಿಗೆ, ಯಂತ್ರ-ಸಾಧನೆಗಳನ್ನು ಖರೀದಿಗೆ ಅಥವಾ ಕಂತಿನ ಮೇಲೆ ಕೊಡಿಸಿ ಅವುಗಳ ಬೇಡಿಕೆಗಳನ್ನು ಪೂರೈಸುವಂತೆ ಮಾಡಲು ಕೇಂದ್ರ ಸರ್ಕಾರವು 1955ರಲ್ಲಿ "ರಾಷ್ಟ್ರೀಯ ಸಣ್ಣ ಕೈಗಾರಿಕಾ ಕಾರ್ಪೊರೇಷನ್" (National Small Industries Corporation) ಅನ್ನು ಸ್ಥಾಪಿಸಿತು.

1956ರ ಭಾರತ ಸರ್ಕಾರದ ಕೈಗಾರಿಕಾ ನೀತಿಯ ನಿರೂಪಣೆಯೊಂದಿಗೆ ಸಣ್ಣ ಕೈಗಾರಿಕೆಗಳ ಸುಯೋಜಿತ ಅಭಿ ವೃದ್ಧಿ ಮೊದಲಾಯಿತು. ಹೆಚ್ಚಿನ ವೇಗದಲ್ಲಿ ಆರ್ಥಿಕ ಪ್ರಗತಿ, ಕೈಗಾರಿಕೀಕರಣ, ಸಾರ್ವಜನಿಕ ಕ್ಷೇತ್ರದ ಯೋಜನೆಗಳ ವಿಸ್ತರಣೆ, ಸಹಕಾರೀ ಕ್ಷೇತ್ರದ ಬೆಳವಣಿಗೆ – ಇವುಗಳನ್ನು ಈ ನಿರೂಪಣೆ ಒತ್ತಿ ಹೇಳಿತು. ಈ ದೃಷ್ಟಿಯಲ್ಲಿ ಭಾರೀ ಪ್ರಮಾಣ ದಲ್ಲಿ ಉದ್ಯೋಗಾವಕಾಶವನ್ನು ಕಲ್ಪಿಸುವ, ಧನ, ಜನ, ಬುದ್ಧಿ ಶಕ್ತಿಗಳನ್ನು ಕ್ರೋಢೀಕರಿಸುವ, ರಾಷ್ಟ್ರೀಯ ವರಮಾನದ ಸಮರ್ಪಕ ಹಂಚುವಿಕೆಗೆ ಅನುಮಾಡಿಕೊಡುವ ಸಣ್ಣ ಕೈಗಾರಿಕೆ ಗಳಿಗೆ ಈ ನಿರೂಪಣೆಯು ಹೆಚ್ಚಿನ ಪ್ರಾಮುಖ್ಯವನ್ನು

ಕೊಟ್ಟಿತು. ಈ ಗುರಿಗಳನ್ನು ಸಾಧಿಸಲು ಸರ್ಕಾರವು ಪಂಚ ವಾರ್ಷಿಕ ಯೋಜನೆಗಳಲ್ಲಿ ಹೆಚ್ಚು ಹೆಚ್ಚು ಹಣವನ್ನು ಮೀಸಲಾಗಿಡುವುದರ ಮೂಲಕ ನೆರವಾಗುತ್ತಿದೆ. ಸಣ್ಣ ಕೈಗಾರಿಕೆಗಳಿಗಾಗಿ ಗೊತ್ತುಮಾಡಿದ ಮೊತ್ತ ಪ್ರಥಮ ಪಂಚ ವಾರ್ಷಿಕ ಯೋಜನೆಯಲ್ಲಿ ನೀಡಲಾದ 5 ಕೋಟಿ ರೂಪಾಯಿಗಳಿದ್ದು ಎರಡನೆಯದರಲ್ಲಿ 55 ಕೋಟಿಗೆ ಏರಿ ಮೂರನೆಯದರಲ್ಲಿ 114 ಕೋಟಿ ರೂಪಾಯಿಗಳನ್ನು ಮುಟ್ಟಿದೆ. ಈ ಕ್ಷೇತ್ರಕ್ಕೆ ನಾಲ್ಕನೆಯ ಯೋಜನೆಯಲ್ಲಿ 165 ಕೋಟಿ ರೂಪಾಯಿಗಳ 5 ನೆಯ ಯೋಜನೆಯಲ್ಲಿ 287 ಕೋಟಿ ಖರ್ಚು ಮಾಡಲಾಯಿತು.

ಸಣ್ಣ ಕೈಗಾರಿಕೆಗಳ ಪ್ರಗತಿಯ ಒಂದು ಸ್ಥೂಲ ಚಿತ್ರವನ್ನು ಎರಡನೆಯ ಯೋಜನೆಯ ಅವಧಿಯಲ್ಲಿ ಕೆಲವು ವಸ್ತುಗಳ ತಯಾರಿಕೆಯಲ್ಲಿ ಸಣ್ಣ ಹಾಗೂ ದೊಡ್ಡ ಕೈಗಾರಿಕೆಗಳ ಭಾಗವಹಿಸುವಿಕೆಯಿಂದ ಪಡೆಯಬಹುದು. ಕೇಂದ್ರ ಸಣ್ಣ ಕೈಗಾರಿಕಾ ಸಂಸ್ಥೆಯು ನಡೆಸಿದ ಒಂದು ಅಧ್ಯಯನದ ಮೇರೆಗೆ ವೈದ್ಯಕೀಯ ಉಷ್ಣಮಾಪಕಗಳು, ಸೀಳಿದ ರಿವಿಟ್ಟುಗಳು, ಕಾಗದದ ಪಿನ್ನುಗಳು ಮುಂತಾದ 14 ಕೈಗಾರಿಕೆಗಳಲ್ಲಿ ಎಲ್ಲ ಉತ್ಪಾದನೆಯೂ ಸಣ್ಣ ಪ್ರಮಾಣದ ಉದ್ಯಮಗಳಿಂದಲೇ ನಡೆಯಿತು ; ಪೌಂಟನ್ ಪೆನ್ನುಗಳು ವಿದ್ಯುತ್ ಇಸ್ತ್ರಿಪೆಟ್ಟಿಗೆಗಳು, ತಂತಿ ಜಾಲರಿಗಳು ಮುಂತಾದ 10 ಕೈಗಾರಿಕೆಗಳಲ್ಲಿ ಒಟ್ಟು ಉತ್ಪಾದನೆಯ ಶೇ. 80 ರಷ್ಟು ಸಣ್ಣ ಪ್ರಮಾಣದ ಕೈಗಾರಿಕೆಗಳಿಂದ ಉಂಟಾಯಿತು ; ಕೈಗಾರಿಕಾ ಬ್ರಷ್‌ಗಳು, ಯಂತ್ರದ ಸ್ಕ್ರೂಗಳು, ಪಿನ್ ಹಾಕುವ ಯಂತ್ರಗಳು ಮುಂತಾದ ಎಂಟು ಕೈಗಾರಿಕೆಗಳ ಉತ್ಪಾದನೆಯಲ್ಲಿ ಸಣ್ಣ ಕೈಗಾರಿಕೆಗಳ ಪಾತ್ರ ಶೇ. 62 ರಿಂದ 77 ರಷ್ಟಾಗಿತ್ತು.

ಸಣ್ಣ ಕೈಗಾರಿಕೆ ಎಂದರೇನು ?

ಸಣ್ಣ ಪ್ರಮಾಣದ ಕೈಗಾರಿಕೆಗಳು ಎಂಬ ಹೆಸರು ತನ್ನದೇ ಆದ ವಿಶಿಷ್ಟ ರೀತಿ ನೀತಿಗಳುಳ್ಳ, ವಿವಿಧ ಗುಂಪುಗಳ ಕೈಗಾರಿಕೆಗಳನ್ನು ಸೂಚಿಸುತ್ತದೆ. ಅಖಿಲ ಭಾರತ ಮಂಡಳಿಗಳಾದ ಕೈಮಗ್ಗ, ರೇಷ್ಮೆ, ನಾರು, ಕುಶಲಕೈಗಾರಿಕೆ, ಖಾದಿ ಮತ್ತು ಗ್ರಾಮೋದ್ಯೋಗ... ಈ ಮಂಡಳಿಗಳ ಪರಿವಿಧಿಯೊಳಗೆ ಬಾರದ ಉದ್ಯಮಗಳನ್ನು ಸಣ್ಣ ಕೈಗಾರಿಕೆಗಳೆಂದು ಹೆಸರಿಸಲಾಗಿದೆ. ಆಧುನಿಕ ಸಣ್ಣ ಕೈಗಾರಿಕೆಗಳು ಹೊಸ ತಾಂತ್ರಿಕ ವಿಧಾನಗಳನ್ನು ಅಳವಡಿಸಿಕೊಂಡು, ವಿದ್ಯುಚ್ಛಕ್ತಿಯಿಂದ ನಡೆಸಲ್ಪಡುತ್ತಿದ್ದು, ಕಾರ್ಮಿಕರ ದೈಹಿಕ ಪರಿಶ್ರಮವನ್ನವಲಂಬಿಸಿರುವ ಪರಂಪರಾಗತ ಕೈಗಾರಿಕೆಗಳಿಂದ ತುಂಬಾ ಬೇರೆಯಾಗಿವೆ.

ವಿದ್ಯುಚ್ಛಕ್ತಿಯನ್ನುಪಯೋಗಿಸಿ, ಪ್ರತಿಸರದಿಗೆ 50ಕ್ಕಿಂತ ಕಡಮೆ ಉದ್ಯೋಗಿಗಳನ್ನು ಹೊಂದಿದ, ಒಟ್ಟು ಸ್ಥಿರಬಂಡವಾಳ ಐದು ಲಕ್ಷಕ್ಕಿಂತ ಕಡಿಮೆಯಾದ ಕೈಗಾರಿಕೆಗಳೆಲ್ಲವನ್ನೂ 'ಸಣ್ಣ ಕೈಗಾರಿಕೆ'ಗಳೆಂದು ಪರಿಗಣಿಸಲಾಗುತ್ತಿತ್ತು. ಆದರೆ ಸಣ್ಣ ಕೈಗಾರಿಕೆಗಳ ಮುಖ್ಯಗುರಿಯೇ ಉದ್ಯೋಗಾವಕಾಶವನ್ನು ಒದಗಿಸುವುದಾಗಿರುವುದರಿಂದ ಉದ್ಯೋಗಿಗಳ ಸಂಖ್ಯೆಯ ಮೇಲಿನ ನಿಬಂಧನೆಯನ್ನು ಈಚೆಗೆ ತೆಗೆದುಹಾಕಲಾಯಿತು. ಬದಲಾದ ಸೂತ್ರದಂತೆ ಸಣ್ಣ ಕೈಗಾರಿಕೆಗಳೆಂದರೆ ಕಾರ್ಮಿಕರ ಸಂಖ್ಯೆಯನ್ನು ಗಣನೆಗೆ ತೆಗೆದುಕೊಳ್ಳದೆ. ಮೂಲ ಬಂಡವಾಳ ಐದು ಲಕ್ಷ ರೂಪಾಯಿಗಳನ್ನು ಮೀರದ ಎಲ್ಲಾ ಕೈಗಾರಿಕೆಗಳನ್ನು ಸಣ್ಣ ಪ್ರಮಾಣದ ಕೈಗಾರಿಕೆಗಳೆಂದು ಪರಿಗಣಿಸಲಾಯಿತು.

ಆದರೆ ಇತ್ತೀಚೆಗೆ ನಿವೇಶನ, ಕಟ್ಟಡ, ಹಾಗೂ ಯಂತ್ರಗಳ ಬೆಲೆ ಏರಿರುವ ಈ ಕಾಲದಲ್ಲಿ ಸಣ್ಣಕೈಗಾರಿಕೆಗಳ ಬಗ್ಗೆ ಈ ವಿವರಣೆ ಸಾಲದಾಯಿತು. ಆದ್ದರಿಂದ ಕೇಂದ್ರ ಸಣ್ಣ ಕೈಗಾರಿಕಾ ಮಂಡಳಿಯು ಬೆಂಗಳೂರಿನಲ್ಲಿ ನಡೆದ ಸಭೆಯಲ್ಲಿ ಸ್ಥಿರ ಬಂಡವಾಳದ ಮಿತಿಯನ್ನು ಐದರಿಂದ ಏಳೂವರೆ ಲಕ್ಷಕ್ಕೆ ಏರಿಸಿತು.

ಕೇಂದ್ರಸರಕಾರ ಒಪ್ಪಿಕೊಂಡಿರುವ ಈಗಿನ ಸೂತ್ರದಂತೆ ನಿವೇಶನ ಹಾಗೂ ಕಟ್ಟಡಗಳನ್ನು ಬಿಟ್ಟು ಹತ್ತು ಲಕ್ಷ ರೂ. ಗಳಿಗೆ ಮೀರದ ಯಂತ್ರಗಳನ್ನೊಳಗೊಂಡ ಕೈಗಾರಿಕೆಗಳೆಲ್ಲವೂ ಸಣ್ಣಕೈಗಾರಿಕೆಗಳೆಂದು ಪರಿಗಣಿಸಲಾಗಿದೆ. ಸಹಾಯಕ ಸಣ್ಣ ಕೈಗಾರಿಕೆಗಳ (ancillaries) ವಿಷಯದಲ್ಲಿ ಮಾತ್ರ ಬಂಡವಾಳವು (ನಿವೇಶನ, ಕಟ್ಟಡ ಬಿಟ್ಟು) ರೂ. 15 ಲಕ್ಷದವರೆಗೂ ಇರಬಹುದೆಂದೂ ತೀರ್ಮಾನಿಸಲಾಗಿದೆ. ಇದರಿಂದ ನಿವೇಶನ ಕಟ್ಟಡಗಳ ಬೆಲೆಗಳನ್ನು ಪರಿಗಣಿಸಿದರೆ ಸಣ್ಣ ಕೈಗಾರಿಕೆಗಳ ಬಂಡವಾಳ 25-30 ಲಕ್ಷಕ್ಕೂ ಹೆಚ್ಚಾಗಲು ಅವಕಾಶವಿದೆ.

ಗ್ರಾಮಗಳ ಕೈಗಾರಿಕೀಕರಣ

ಸಣ್ಣಕೈಗಾರಿಕೆಗಳು ಗ್ರಾಮಾಂತರ ಪ್ರದೇಶಗಳಲ್ಲಿರುವ ದೊಡ್ಡ ಹಳ್ಳಿಗಳಲ್ಲಿ ಹಾಗೂ ಚಿಕ್ಕ ಊರುಗಳಲ್ಲಿ ಹರಡುವಂತೆ ನೋಡಿಕೊಳ್ಳಲು, 111 ಜಿಲ್ಲೆಗಳನ್ನು ಈ ಉದ್ದೇಶಕ್ಕೆ ಆರಿಸಲಾಗಿದೆ. ಇದಲ್ಲದೆ ರಾಜ್ಯಸರ್ಕಾರಗಳು ಆರಿಸಿರುವ "ಅಭಿವೃದ್ಧಿ ಕೇಂದ್ರ"ಗಳಲ್ಲಿಯೂ ಸಣ್ಣಕೈಗಾರಿಕೆಗಳಿಗೆ ಪ್ರೋತ್ಸಾಹ ನೀಡಲಾಗಿದೆ. ದೇಶದಲ್ಲಿ ಕೈಗಾರಿಕಾ ವಿಕೇಂದ್ರೀಕರಣದ ದಾರಿಯಲ್ಲಿ ಗ್ರಾಮ ಕೈಗಾರಿಕಾ ಯೋಜನೆಯು

ಸೇವೆ ಹಿರಿದಾಗಿದೆ. ಈ ಯೋಜನೆಯು 1962 ರಿಂದ ಜಾರಿಯಲ್ಲಿದೆ.

ಸಹಾಯಕ ಕೈಗಾರಿಕೆಗಳು

ಬೃಹತ್ ಕೈಗಾರಿಕೆಗಳಿಗೆ ಬೇಕಾಗುವ ಸಣ್ಣ, ಪುಟ್ಟ ಸಾಮಾನುಗಳನ್ನು ತಯಾರಿಸಿ, ಸರಬರಾಜು ಮಾಡಲು ಸಹಾಯಕ ಸಣ್ಣ ಕೈಗಾರಿಕೆಗಳನ್ನು ಸ್ಥಾಪಿಸಲು ಇರಬಹುದಾದ ಸಾಧ್ಯತೆಗಳನ್ನು ಅರಿತು ಕೇಂದ್ರ ಸರಕಾರವು ಸಹಾಯ ಕೈಗಾರಿಕಾ ಅಭಿವೃದ್ಧಿ ಕಾರ್ಯಕ್ರಮವನ್ನು ಜಾರಿಗೆ ತಂದಿದೆ. ಇದರಿಂದಾಗಿ ಬೃಹತ್ ಕೈಗಾರಿಕೆಗಳು ಸಣ್ಣ ಉದ್ಯಮಗಳಿಂದ ಉತ್ಪನ್ನಗಳನ್ನು ಕೊಳ್ಳಲೂ, ಸಣ್ಣ ಕೈಗಾರಿಕೆಗಳು ದೊಡ್ಡ ಉದ್ಯಮಗಳಿಗೆ ತಮ್ಮ ತಯಾರಿಕೆಗಳನ್ನು ಮಾರಲೂ ಸಹಾಯವಾಗಿ ಇವೆರಡೂ ಕ್ಷೇತ್ರಗಳು ಮುಂಬರಲು ಸಾಧ್ಯವಾಗಿದೆ. ಕೇಂದ್ರ ಸಣ್ಣ ಕೈಗಾರಿಕಾ ಸಂಸ್ಥೆ ಹಾಗೂ ರಾಷ್ಟ್ರೀಯ ಸಣ್ಣ ಕೈಗಾರಿಕಾ ಮಂಡಳಿ ಇವೆರಡೂ ಈ ವಿನಿಮಯ ಕಾರ್ಯದಲ್ಲಿ ನೆರವಾಗಿದ್ದು ದೇಶದಲ್ಲಿ ನೂರಾರು ಸಹಾಯಕ ಕೈಗಾರಿಕೆಗಳು ಉತ್ತಮ ಗತಿಯಲ್ಲಿ ಬೆಳೆಯಲು ಸಾಧ್ಯವಾಗಿದೆ.

ಬಂಡವಾಳ ನಿಯೋಜನೆ ಹಾಗೂ ಉತ್ಪಾದನೆ

ಸಣ್ಣ ಕೈಗಾರಿಕೆಗಳಲ್ಲಿ ಬಂಡವಾಳ ನಿಯೋಜನೆ ಹಾಗೂ ಉತ್ಪಾದನೆಯೂ ಸಹ ಏಕರೂಪವಾಗಿ ಏರುತ್ತಿದ್ದು, ಅದರಲ್ಲೂ ಎಲೆಕ್ಟ್ರಿಕಲ್ ಹಾಗೂ ತಾಂತ್ರಿಕ ಕ್ಷೇತ್ರಗಳಲ್ಲಿ ಇವುಗಳ ಪ್ರಗತಿ ಗಣನೀಯವಾಗಿದೆ. ದಾಖಲಾದ ಸಣ್ಣ ಕಾರ್ಖಾನೆಗಳ ಒಟ್ಟು ಉತ್ಪಾದನೆ 1960ರಲ್ಲಿ 635 ಕೋಟಿ ರೂಪಾಯಿಗಳಿದ್ದು

1963ರಲ್ಲಿ 847.5 ಕೋಟಿಗಳಷ್ಟಾಗಿತ್ತು. 1960ರಲ್ಲಿ ಈ ಕಾರ್ಖಾನೆಗಳಲ್ಲಿ 158.7 ಕೋಟಿ ರೂ ಗಳಷ್ಟಿದ್ದ ಬಂಡವಾಳವು ನಿಯೋಜನೆಯ ಅದೇ ಅವಧಿಯಲ್ಲಿ 30 ಕೋಟಿ ರೂ. ಗಳಿಗಿಂತ ಹೆಚ್ಚು ಏರಿಕೆಯನ್ನು ತೋರಿಸಿತು. ಅಲ್ಲದೆ ಈ ಕಾರ್ಖಾನೆಗಳು 14.7 ಲಕ್ಷ ಕಾರ್ಮಿಕರಿಗೆ (ಅಂದರೆ ಒಟ್ಟು ಕಾರ್ಖಾನೆ ಉದ್ಯಮಿಗಳ ಶೇ. 35ರಷ್ಟು) ಉದ್ಯೋಗವನ್ನು ಒದಗಿಸಿದುವು. ಮೂರನೆ ಯೋಜನೆಯ ಅವಧಿಯಲ್ಲಿ ಈ ಕಾರ್ಖಾನೆಗಳು ಸುಮಾರು 18 ಲಕ್ಷ ಜನರಿಗೆ ನೇರವಾಗಿ ಮತ್ತು ಸುಮಾರು 2 ಲಕ್ಷ ಜನರಿಗೆ ಪರೋಕ್ಷವಾಗಿ ಉದ್ಯೋಗವನ್ನು ಒದಗಿಸಿವೆಯೆಂದು ಅಂದಾಜು ಮಾಡಲಾಗಿತ್ತು. ಐದನೆ ಯೋಜನೆಯ ವೇಳೆಗೆ ಅಂದರೆ 1975 ರಲ್ಲಿ ಸಣ್ಣ ಕೈಗಾರಿಕೆಗಳ ಬಂಡವಾಳ 1500 ಕೋಟಿಗೆ ಏರಿ ಸುಮಾರು 55 ಲಕ್ಷ ಜನರಿಗೆ ಉದ್ಯೋಗ ದೊರಕಿಸಿ ಕೊಟ್ಟಿದೆ.

2. ಅಭಿವೃದ್ಧಿ ಕಮೀಷನರ್ ಕಚೇರಿ

ಸಣ್ಣ ಕೈಗಾರಿಕೆಗಳ ಸ್ವಯಂಪೂರ್ಣ ಬೆಳವಣಿಗೆಗಾಗಿ 1956ರ ಕೈಗಾರಿಕಾ ನೀತಿ ನಿರೂಪಣೆಯು ಒತ್ತಿ ಹೇಳಿದ ಕಾರ್ಯಕ್ರಮವನ್ನು ಕಾರ್ಯಗತಗೊಳಿಸಲು ಸಣ್ಣ ಉದ್ಯಮಿಗಳ ಕೈಗಾರಿಕಾ ವಿಧಾನಗಳನ್ನು ಆಧುನಿಕಗೊಳಿಸಿ ಸಣ್ಣ ಕೈಗಾರಿಕೆಗಳ ಮುಖ್ಯ ತೊಂದರೆಗಳಾದ ತಾಂತ್ರಿಕ ಹಾಗೂ ಆರ್ಥಿಕ ಸಹಾಯಗಳ ಕೊರತೆ, ಸಾಧನ ಸಾಮಗ್ರಿಗಳ ಸಹಾಯ ಹಾಗೂ ಪರೀಕ್ಷಣೆಯ ಅನುಕೂಲತೆಗಳು ಇಲ್ಲದಿರುವಿಕೆ, ಕಾರ್ಯಾಗಾರದ ಅಸಮರ್ಪಕತೆ—ಮೊದಲಾದುವುಗಳನ್ನು ನೀಗಿಸುವ ಅಗತ್ಯವನ್ನು ಮನಗಂಡು ಕೇಂದ್ರಸರ್ಕಾರವು 1956ರಲ್ಲಿ ಭಾರತದ ಸಣ್ಣ ಕೈಗಾರಿಕೆಗಳನ್ನು ಕುರಿತು ಫೋರ್ಡ್ ಫೌಂಡೇಷನ್ನಿನ ಅಂತರರಾಷ್ಟ್ರೀಯ ಸಂಸ್ಥೆಯು ಮಾಡಿದ ಶಿಫಾರಸ್ಸಿನಂತೆ ಅಭಿವೃದ್ಧಿ ಕಮಿಷನರ ನೇತೃತ್ವದಲ್ಲಿ ಒಂದು ಕಚೇರಿಯನ್ನು ಸ್ಥಾಪಿಸಿತು. ಇದರ ನಾಲ್ಕು ಪ್ರಾದೇಶಿಕ ಸಂಸ್ಥೆಗಳು ಮುಂಬಯಿ, ಕಲ್ಕತ, ದೆಹಲಿ ಹಾಗೂ ಮದರಾಸಿನಲ್ಲಿ ಸ್ಥಾಪಿಸಲ್ಪಟ್ಟುವು. ಈ ಸಂಸ್ಥೆಯು 1958ರಲ್ಲಿ ಮತ್ತೆ ವಿಶಾಲಗೊಂಡು, ಪ್ರತಿ ರಾಜ್ಯದಲ್ಲಿಯೂ ಒಂದು ಸಣ್ಣ ಕೈಗಾರಿಕಾ ಸೇವಾ ಸಂಸ್ಥೆಯನ್ನು ಸ್ಥಾಪಿಸಲಾಯಿತು. ಈಗ ಒಟ್ಟು 16 ಸೇವಾ ಸಂಸ್ಥೆಗಳೂ, 19 ಶಾಖಾ ಸಂಸ್ಥೆಗಳೂ ಹಾಗೂ 65 ಕೇಂದ್ರಗಳೂ ಮತ್ತು ಉತ್ಪಾದನೆ ಹಾಗೂ ತರಬೇತಿ ಕೇಂದ್ರಗಳೂ ಸಣ್ಣ

ಕೈಗಾರಿಕೆಗಳ ಪ್ರಗತಿಯಲ್ಲಿ ತೊಡಗಿವೆ. ಅಭಿವೃದ್ಧಿ ಕಮೀಷನರ ಕಚೇರಿಯ ಮುಖ್ಯ ಕಾರ್ಯಗಳೆಂದರೆ : (1) ಕೈಗಾರಿಕಾ ವಿಸ್ತರಣ ಸೇವಾ ಯೋಜನೆ, (2) ಸಹಯೋಗ ಮತ್ತು (3) ಸಣ್ಣ ಕೈಗಾರಿಕೆಗಳ ಯೋಜನೆ ಮತ್ತು ಅಭಿವೃದ್ಧಿಗಳು.

ಸಣ್ಣ ಕೈಗಾರಿಕಾ ಸೇವಾಸಂಸ್ಥೆಗಳು

ಅಭಿವೃದ್ಧಿ ಅಧಿಕಾರಿ ಸಂಸ್ಥೆಯು ನಿರ್ವಹಿಸಿರುವ ಕೈಗಾರಿಕಾ ವಿಸ್ತರಣಾ ಯೋಜನೆಯು ಮೇಲೆ ವಿವರಿಸಿದ ಸಂಸ್ಥೆ ಉಪಸಂಸ್ಥೆಗಳ ಮೂಲಕ ತನ್ನ ಯೋಜನೆಗಳನ್ನು ಕಾರ್ಯಗತಗೊಳಿಸುತ್ತದೆ. ಅನೇಕ ಕ್ಷೇತ್ರಾಧಿಕಾರಿಗಳು ಸೇವಾಸಂಸ್ಥೆಗಳಲ್ಲಿ ವಿವಿಧ ಸ್ಥಾನಗಳಿಂದ ಸೇವೆ ಸಲ್ಲಿಸುತ್ತಿದ್ದಾರೆ. ಸಣ್ಣ ಕೈಗಾರಿಕಾ ಸೇವಾ ಸಂಸ್ಥೆಗಳ ಮುಖ್ಯ ಕಾರ್ಯಗಳು ಕೆಳಗೆ ವಿವರಿಸಿರುವಂತೆ ಮುಖ್ಯವಾಗಿ ಏಳು ರೀತಿಯವಾಗಿವೆ :

(1) ತಾಂತ್ರಿಕ ಸಲಹಾ ಯೋಜನೆ

ಸೇವಾ ಸಂಸ್ಥೆಯ ಮತ್ತು ವಿಸ್ತರಣಾ ಕೇಂದ್ರಗಳ ತಾಂತ್ರಿಕ ಅಧಿಕಾರಿಗಳು ಕೈಗಾರಿಕೋದ್ಯಮಿಗಳಿಗೆ ಉತ್ಪಾದನಾ ವಿಧಾನಗಳು, ಕಚ್ಚಾ ಸಾಮಗ್ರಿಗಳ ಬಳಕೆ, ಕಾರ್ಯಾಗಾರದ ಯೋಜನೆ, ಯಂತ್ರ ಸಾಧನಗಳ ಆಯ್ಕೆ ಹಾಗೂ ಗುಣ ನಿಯಂತ್ರಣದಲ್ಲಿ ಸಲಹೆ ನೀಡುತ್ತಾರೆ. ಯಂತ್ರಗಳ ನಿರ್ವಹಣೆಯಲ್ಲಿನ ತೊಂದರೆಗಳು, ಉತ್ಪಾದನೆಯಲ್ಲಿ ವೈವಿಧ್ಯದ ಸಾಧನೆ, ಹೊಸ ಮಾದರಿ ಉತ್ಪಾದನೆಗಳು ಮುಂತಾದುವುಗಳಲ್ಲಿಯೂ ಸಹಕರಿಸುತ್ತಾರೆ. ಈ ಸಲಹಾಯೋಜನೆಯ ವೈಶಿಷ್ಟ್ಯವೆಂದರೆ ತಾಂತ್ರಿಕ ಅಧಿಕಾರಿಗಳು ತಮ್ಮ ಕ್ಷೇತ್ರಗಳ

ಲ್ಲೆಲ್ಲಾ ಸಂಚರಿಸಿ, ಕೈಗಾರಿಕೆಗಳ ಕಾರ್ಯಾಗಾರಕ್ಕೆ ಸ್ವತಃ ಭೇಟಿಕೊಟ್ಟು, ಅಲ್ಲಿಯೇ ನಿಂತು, ಸಲಹೆ ನೀಡುತ್ತಾರೆ.

(2) ಕಾರ್ಯಾಗಾರ ಹಾಗೂ ಪ್ರಯೋಗಶಾಲೆಯ ಸೌಲಭ್ಯಗಳು

ಆಧುನಿಕ ಉತ್ಪಾದನಾ ವಿಧಾನಗಳನ್ನು ಪ್ರಾಯೋಗಿಕ ವಾಗಿ ತೋರಿಸಲು, ಆದರ ಮೂಲಕ ಜ್ಞಾನಪ್ರಸಾರ ಮಾಡಲು, ಕೈಗಾರಿಕೋದ್ಯಮಿಗಳಿಗೆ ಹೊಸ ವಿಧಾನಗಳು, ನೂತನ ಯಂತ್ರ ಗಳನ್ನು ಪರಿಚಯ ಮಾಡಿಕೊಡಲು ಮಾದರಿ ಕಾರ್ಯಾಗಾರ ಗಳನ್ನೂ ಪ್ರಯೋಗಶಾಲೆಗಳನ್ನೂ ಆರಂಭಿಸಿ ನಡೆಯಿಸಲಾಗು ತ್ತಿದೆ.

(3) ಯಂತ್ರಗಳ ಹಾಗೂ ತಯಾರಾದ ಸಾಮಾನುಗಳ ನಕಾಶೆಗಳ ತಯಾರಿಕೆ

ನವದೆಹಲಿಯ ಸಣ್ಣ ಕೈಗಾರಿಕಾ ಸೇವಾಸಂಸ್ಥೆಯಲ್ಲಿರುವ ನಕಾಶೆ ಶಾಖೆಯು ಬಳಕೆದಾರರ ಬೇಡಿಕೆಗಳು, ಕಾರ್ಯಮೌಲ್ಯ ಹಾಗೂ ಕಲಾತ್ಮಕ ಆಕರ್ಷಣೆಯನ್ನು ಪರಿಗಣಿಸಿ ಸಣ್ಣ ಕೈಗಾ ರಿಕೆಗಳ ಉತ್ಪಾದನಾ ಸಾಮರ್ಥ್ಯಕ್ಕೆ ಹೊಂದುವಂತೆ ಆಧುನಿಕ ಪದಾರ್ಥಗಳ ನಕಾಶೆಗಳನ್ನು ಸಿದ್ಧಪಡಿಸುತ್ತದೆ.

(4) ತಾಂತ್ರಿಕ ಹಾಗೂ ನಿರ್ವಾಹಣಾ ತರಬೇತಿ

ಸಣ್ಣ ಕೈಗಾರಿಕೋದ್ಯಮಿಗಳಿಗೆ ಮತ್ತು ಮೇಲ್ವಿಚಾರಣಾ ಅಧಿಕಾರಿಗಳಿಗೆ, ಕೈಗಾರಿಕಾ ನಿರ್ವಹಣೆಗೆ ಸಂಬಂಧಿಸಿದಂತೆ, ಸಣ್ಣ ಕೈಗಾರಿಕಾ ಸೇವಾ ಸಂಸ್ಥೆಗಳು ಅಲ್ಪಾವಧಿ ತರಬೇತಿ ಶಿಬಿರ ಗಳನ್ನು ನಡೆಸುತ್ತವೆ. ನಿರ್ವಹಣೆ ತರಬೇತಿಯೇ ಅಲ್ಲದೆ, ಈ ಸಂಸ್ಥೆಗಳು ಕಾರ್ಮಿಕರಿಗೆ ಮತ್ತು ಮೇಲ್ವಿಚಾರಣಾ ಸಿಬ್ಬಂದಿ

ಯುವರಿಗೆ ತಮ್ಮ ಕ್ಷೇತ್ರದಲ್ಲಿ ಹೆಚ್ಚಿನ ಪ್ರಾವೀಣ್ಯ ಹಾಗೂ ಪ್ರಭುತ್ವವನ್ನು ಪಡೆಯಲು ತರಬೇತಿ ಶಿಬಿರಗಳನ್ನು ನಡೆಸುತ್ತಿವೆ. ಈ ಶಿಬಿರಗಳಲ್ಲಿ ಹೇಳಿಕೊಡುವ ವಿಷಯಗಳಲ್ಲಿ ಮುಖ್ಯವಾದ ಕೆಲವೆಂದರೆ; ಕೈಗಾರಿಕಾ ವಿಧಾನಗಳ ತರಬೇತಿ, ಕೈಗಾರಿಕಾ ಉತ್ಪಾದನಾ ತರಬೇತಿ ಮತ್ತು ಬ್ಲೂಪ್ರಿಂಟ್ (ನಕಾಶೆ) ಓದುವಿಕೆ.

(5) ಆಡಳಿತ ಸಲಹಾ ಯೋಜನೆ

ಸಣ್ಣ ಕೈಗಾರಿಕೋದ್ಯಮಿಗಳು ತಮ್ಮ ಕಾರ್ಖಾನೆಯಲ್ಲಿ ಕಂಡುಬರುವ ಆಡಳಿತಕ್ಕೆ ಸಂಬಂಧಿಸಿದ ಹಾಗೂ ತಾಂತ್ರಿಕ ಕ್ಷೇತ್ರಕ್ಕೆ ಸಂಬಂಧಿಸಿದ ಅನೇಕ ಸಮಸ್ಯೆಗಳನ್ನು ಬಗೆಹರಿಸುವ ವಿಧಾನಗಳನ್ನು ತಿಳಿಸುವುದಕ್ಕಾಗಿ ಸೇವಾ ಸಂಸ್ಥೆಗಳು ಆಡಳಿತ ಸಲಹಾ ಯೋಜನೆಯನ್ನು ಹೊಂದಿವೆ.

(6) ಕೈಗಾರಿಕೆಗಳಲ್ಲಿ ಹಾಗೂ ಪ್ರದೇಶಗಳಲ್ಲಿ ಕೈಗಾರಿಕಾ ಸಮೀಕ್ಷೆ

ಕೆಲವು ಆರಿಸಿದ ಪ್ರದೇಶಗಳಲ್ಲಿನ ಕೈಗಾರಿಕಾ ಸಾಧ್ಯತೆಗಳನ್ನು ಅರಿಯಲು ಹಾಗೂ ಅವುಗಳನ್ನು ಆಧಾರವಾಗಿಟ್ಟುಕೊಂಡು ಕೈಗಾರಿಕಾ ಅಭಿವೃದ್ಧಿ ಕಾರ್ಯಕ್ರಮಗಳನ್ನು ನಿಯೋಜಿಸಲು ಕೇಂದ್ರ ಸಂಸ್ಥೆಯು ತನ್ನ ಉಪಶಾಖೆಗಳ ಮೂಲಕ ಪ್ರಾದೇಶಿಕ ಸಮೀಕ್ಷೆಗಳನ್ನು ನಡೆಸುತ್ತದೆ. ಹಾಗೂ ಸಮೀಕ್ಷಾ ಸಹಾಯವನ್ನು ನೀಡುವುದರ ಮೂಲಕ ಸ್ಟೇಟ್ ಬ್ಯಾಂಕ್ ಸಣ್ಣ ಕೈಗಾರಿಕೋದ್ಯಮಿಗಳಿಗೆ ಸಾಲರೂಪದ ನೆರವು ನೀಡುವುದನ್ನು ತ್ವರಿತಗೊಳಿಸಲು ಸಹಾಯ ಮಾಡುತ್ತದೆ. ಇದಲ್ಲದೆ, ಸಣ್ಣ ಕೈಗಾರಿಕೆಗಳ ಉತ್ಪಾದನೆಗಳ ಮಾರಾಟವನ್ನು ತ್ವರಿತಗೊಳಿಸಲು ಅವುಗಳ ಮಾರಾಟ ಮತ್ತು ಮಾರುಕಟ್ಟೆಗಳ

ಬಗ್ಗೆ ಸಂಶೋಧನೆಗಳನ್ನು ಕೈಗೊಳ್ಳುತ್ತದೆ; ಹಾಗೂ ಹೊಸ ಉದ್ಯಮಗಳಿಗೆ ಉತ್ತಮ ಮಾರಾಟ ಸಾಧ್ಯತೆಗಳಿರುವ ಪ್ರದೇಶಗಳನ್ನು ತೋರಿಸಿಕೊಡುತ್ತದೆ.

(7) ಮಾದರಿ ಯೋಜನೆಗಳ ಕೈಹೊತ್ತಿಗೆಗಳನ್ನು ಸಿದ್ಧಪಡಿಸುವಿಕೆ

ಸಣ್ಣ ಕೈಗಾರಿಕಾ ಅಭಿವೃದ್ಧಿ ಕಮಿಷನರ್ ಅವರ ಕಚೇರಿಯು ತಾಂತ್ರಿಕ ಬುಲೆಟಿನ್‌ಗಳು, ತಾಂತ್ರಿಕ ಕಾರ್ಯಾಗಾರ ಸಲಹಾ ಪತ್ರಗಳು, ಸಾಧ್ಯತಾ ಅಧ್ಯಯನಗಳು ಇತ್ಯಾದಿಗಳನ್ನು ಹೊರಡಿಸುವುದರ ಮೂಲಕ ಸಣ್ಣ ಕೈಗಾರಿಕೋದ್ಯಮಿಗಳಿಗೆ ಅಗತ್ಯವಾದ ಕಚ್ಚಾ ಪದಾರ್ಥ ಹಾಗೂ ಬಂಡವಾಳದ ಅಂದಾಜು, ಉತ್ಪಾದನೆಯ ಪ್ರಮಾಣ, ಕಾರ್ಯಾಗಾರಗಳ ಗಾತ್ರ ಹಾಗೂ ಸಾಮಾನ್ಯ ಲಾಭದ ಸಾಧ್ಯತೆಗಳ ಬಗ್ಗೆ ಮಾಹಿತಿ ನೀಡಿ, ಕೈಗಾರಿಕೆಗಳೂ ನಿಯೋಜನಾ ನಿರ್ಧಾರಗಳನ್ನು ಕೈಗೊಳ್ಳಲು ನೆರವಾಗುತ್ತದೆ.

ಸಣ್ಣ ಕೈಗಾರಿಕೆಗಳಿಗೆ ತಾಂತ್ರಿಕ ಹಾಗೂ ಆಡಳಿತದ ಸಲಹೆ, ತರಬೇತಿಗಳನ್ನು ನೀಡಿ, ಅವುಗಳ ಉತ್ಪಾದನಾಮಟ್ಟವನ್ನು ಏರಿಸಿ, ಅವು ಬೃಹತ್ ಕೈಗಾರಿಕೆಗಳೊಡನೆ ಪೈಪೋಟಿ ನಡೆಸಲು ಸಾಧ್ಯವಾಗುವಂತೆ ಮಾಡುವುದು ಕೇಂದ್ರ ಅಭಿವೃದ್ಧಿ ಕಮೀಷನರ್ ಕಚೇರಿಯ ಮುಖ್ಯ ಗುರಿ.

ಆದರೆ ಈಗ ಸಧ್ಯದಲ್ಲಿ ಕೇಂದ್ರ ಅಭಿವೃದ್ಧಿ ಅಧಿಕಾರಿ ಕಚೇರಿಯು ತನ್ನ ಸೇವಾ ಸಂಸ್ಥೆಗಳು ಹಾಗೂ ವಿಸ್ತರಣ ಕೇಂದ್ರಗಳ ಮೂಲಕ ನೀಡುತ್ತಿರುವ ನೆರವು ಹಳೆಯ ರೀತಿಯದಾಗಿದ್ದು ಈಗಿನ ಸಣ್ಣ ಕೈಗಾರಿಕೆಗಳಲ್ಲಿ ಉದ್ಭವಿಸುವ ಸಮಸ್ಯೆಗಳನ್ನು ಬಗೆಹರಿಸುವುದರಲ್ಲಿ ಅಶಕ್ತವಾಗಿದೆ. ಸಂಸ್ಥೆಯು ಆರಂಭ

ವಾದಾಗ ರೂಪಿಸಲಾದ ಸಹಾಯ ಸಹಕಾರ ವಿಧಾನಗಳನ್ನು ಬದಲಾವಣೆ ಮಾಡಿಲ್ಲ. ಬದಲಾಗುತ್ತಿರುವ ಪರಿಸ್ಥಿತಿಯಲ್ಲಿ ಸಣ್ಣ ಕೈಗಾರಿಕೆಗಳು ಸುಧಾರಿಸಿದ ಹಾಗೆ ಅತಿ ನವೀನ ಸಾಮಗ್ರಿಗಳನ್ನು ತಯಾರಿಸಲು ತೊಡಗಿರುವಾಗ, ಸೇವಾಸಂಸ್ಥೆಗಳಲ್ಲಿರುವ ಅನುಭವಿ ತಂತ್ರಜ್ಞರು, ಮತ್ತಿತರ ಸಿಬ್ಬಂದಿಯವರು ಉತ್ತಮ ಭವಿಷ್ಯವನ್ನರಸಿ ಬೇರೆ ಕಡೆಗಳಿಗೆ ಹೊರಟುಹೋಗಿ, ಅವರ ಸ್ಥಾನದಲ್ಲಿ, ಅನನುಭವಿ ಹಾಗೂ ಅರ್ಹತೆ ಸಾಲದ ಹೊಸ ಸಿಬ್ಬಂದಿ ಬಂದಿರುವ ಪರಿಸ್ಥಿತಿಯಲ್ಲಿ – ಈ ಕಚೇರಿಯು ಎಚ್ಚತ್ತು ತತ್‌ಕ್ಷಣ ಕೈಗೊಳ್ಳಬೇಕಾದ ಅನೇಕ ಕ್ರಮಗಳಿವೆ. ಅವುಗಳಲ್ಲಿ ಮುಖ್ಯವಾದವು ಇವು :

(i) ವಿಶೇಷವಾಗಿ ಆಯ್ಕೆ ಮಾಡಿದ ಕೈಗಾರಿಕೆಗಳ ಉತ್ಪಾದನಾ ಯೋಜನೆಗಳನ್ನು ಮಂಜೂರು ಮಾಡುವುದು ;

(ii) ಸಣ್ಣ ಕೈಗಾರಿಕೆಗಳಿಗೆ ಬೇಕಾಗುವ ದೇಶಿ ಮತ್ತು ಆಮದು ಮಾಡಿಕೊಳ್ಳಲ್ಪಟ್ಟ ಕಚ್ಚಾ ವಸ್ತುಗಳ ಹಾಗೂ ಬಿಡಿಭಾಗಗಳ ಸಮೀಕ್ಷೆ ನಡೆಸಿ ಅವುಗಳ ಸರಬರಾಜಿಗೆ ಏರ್ಪಾಡು ಮಾಡುವುದು ;

(iii) ಕೆಲವು ಉತ್ಪಾದನೆಗಳನ್ನು ಸಣ್ಣ ಕೈಗಾರಿಕೆಗಳಿಗಾಗಿ ಮೀಸಲಾಗಿಡಿಸಲು ಏರ್ಪಾಡು ಮಾಡುವುದು ;

(iv) ತಾಂತ್ರಿಕ ಹಾಗೂ ಆರ್ಥಿಕವಾಗಿ ಸಣ್ಣ ಕೈಗಾರಿಕೆಗಳೊಡನೆ ವಿದೇಶಿ ಸಹಕಾರದ ಯೋಜನೆಗಳನ್ನು ಮಂಜೂರು ಮಾಡುವುದರಲ್ಲಿ ಕೇಂದ್ರ ವಾಣಿಜ್ಯ ಹಾಗೂ ಕೈಗಾರಿಕಾಭಿವೃದ್ಧಿ ಮಂತ್ರಿ ಕಚೇರಿಗೆ ಸಲಹೆ

ಹಾಗೂ ಸಹಕಾರ ನೀಡುವುದು ಮತ್ತು ಅಭಿವೃದ್ಧಿ ಶಾಖೆ (DGID) ಯೊಡನೆ ಸಹಯೋಗದಿಂದ ದೇಶಿ ಉತ್ಪಾದನೆಗಾಗಿ ಕಚ್ಚಾ ಸಾಮಗ್ರಿಗಳ ಹಂಚಿಕೆ ಯನ್ನು ತ್ವರಿತಗೊಳಿಸುವುದು ;

(v) ಕೇಂದ್ರ ಆಮದು ರಫ್ತು ಕಂಟ್ರೋಲರ್ ಅವರಿಗೆ ಆಮದು ಪರವಾನಗಿಗಳನ್ನು ನೀಡುವುದರಲ್ಲಿ ಸಹ ಕರಿಸುವುದು ಹಾಗೂ ಪ್ರದೇಶದಲ್ಲಿ ತಯಾರಾಗು ತ್ತಿರುವ ಸಾಮಗ್ರಿಗಳ ಆಮದಿನಮೇಲೆ ನಿಯಂತ್ರಣ ವಿಧಿಸಲು ಸಲಹೆ ಮಾಡುವುದು ;

(vi) ಆಮದು ಮಾಡಿಕೊಳ್ಳುತ್ತಿರುವ ಬಳಕೆದಾರರ ಪದಾರ್ಥಗಳ ಬಗ್ಗೆ ಮಾಹಿತಿ ಸಂಗ್ರಹಿಸಿ, ಅವುಗಳ ದೇಶಿ ಉತ್ಪಾದನೆಗಾಗಿ ಎಲ್ಲ ಪ್ರೋತ್ಸಾಹವನ್ನು ನೀಡುವುದು ;

(vii) ಆಸಕ್ತರಾದ ಹೊಸ ಉದ್ಯಮಿಗಳಿಗಾಗಿ ಮಾದರಿ ಯೋಜನೆಗಳು, ಯೋಜನಾ ವರದಿಗಳು ಮುಂತಾದ ವಿವರಗಳುಳ್ಳ ತಾಂತ್ರಿಕ ಸಾಹಿತ್ಯವನ್ನು ಸಿದ್ಧ ಪಡಿಸುವುದು.

3. ರಾಷ್ಟ್ರೀಯ ಸಣ್ಣ ಕೈಗಾರಿಕಾ ಕಾರ್ಪೊರೇಷನ್

1955ರಲ್ಲಿ ರಾಷ್ಟ್ರೀಯ ಸಣ್ಣ ಕೈಗಾರಿಕಾ ಕಾರ್ಪೊರೇಷನ್ (National Small Industries Corporation) ಸ್ಥಾಪಿಸಲ್ಪಟ್ಟಿತು. ಸಣ್ಣ ಕೈಗಾರಿಕೆಗಳಿಗೆ ಕಡಿಮೆ ಬಡ್ಡಿ ದರದಲ್ಲಿ ಯಂತ್ರಗಳನ್ನು ಸರಬರಾಜು ಮಾಡಲು "ಕಂತಿನ-ಸರಬರಾಜು" ಯೋಜನೆಗಳನ್ನು 1956ರಲ್ಲಿ ಜಾರಿಗೆ ತರಲಾಯಿತು. ಈ ಯೋಜನೆಯಿಂದ ತಾಂತ್ರಿಕ ಅರ್ಹತೆ ಹೊಂದಿದ್ದು, ಸಾಕಷ್ಟು ಆರ್ಥಿಕ ಬಲವಿಲ್ಲದ ಉತ್ಸಾಹೀ ಉದ್ಯಮಿಗಳು ಹೊಸ ಕೈಗಾರಿಕೆಗಳನ್ನು ಸ್ಥಾಪಿಸಲು ಸಾಧ್ಯವಾಗುತ್ತದೆ. ಸಹಸ್ರಾರು ಕೈಗಾರಿಕೆಗಳಿಗೆ ಈ ಕಂತಿನ ಸರಬರಾಜು ಯೋಜನೆಯು ರಾಷ್ಟ್ರೀಯ ಸಣ್ಣ ಕೈಗಾರಿಕಾ ಕಾರ್ಪೊರೇಷನ್ನಿನಿಂದ ಕೇಂದ್ರೀಕೃತವಾಗಿರುವುದರಿಂದ, ತನ್ನ ಗ್ರಾಹಕರಿಗೆ ಉತ್ತಮ ಯಂತ್ರಗಳ ಆಯ್ಕೆಯಲ್ಲಿ ಹೆಚ್ಚಿನ ಸಲಹೆ, ಸ್ಪರ್ಧಾತ್ಮಕವಾದ ಬೆಲೆಗಳು ಹಾಗೂ ಉತ್ತಮತರ ತಾಂತ್ರಿಕ ಸಲಹೆ ಇವುಗಳನ್ನು ನೀಡಲು ಸಾಧ್ಯವಾಗಿದೆ. ಕಾರ್ಪೊರೇಷನ್ನಿನ ಈ ಕಂತಿನ ಯೋಜನೆಗಳು ದೇಶಾದ್ಯಂತ ಅನೇಕ ಹೊಸ ಕೈಗಾರಿಕೆಗಳನ್ನು ಸ್ಥಾಪಿಸಲು ಕಾರಣವಾಗಿದ್ದು ದೇಶದ ಕೈಗಾರಿಕಾ ಉತ್ಪಾದನೆಯ ವೇಗವನ್ನು ಹೆಚ್ಚಿಸಿವೆ.

ಈ ಕಂತಿನ-ಸರಬರಾಜು (hire-purchase) ಯೋಜನೆಯ ಮುಖ್ಯ ಅನುಕೂಲವೆಂದರೆ ಉದ್ಯಮಿಗಳಿಗೆ ಸಾಲಗಳನ್ನು

ನಗದಿಗೆ ಬದಲಾಗಿ ಯಂತ್ರರೂಪದಲ್ಲಿ ನೀಡಲಾಗುತ್ತದೆ. ಒಪ್ಪಂದದ ಪ್ರಕಾರ ಸಾಲದ ಅವಧಿಯಲ್ಲಿ ಒಂದು ವೇಳೆ ಉದ್ಯಮವು ಸಫಲವಾಗದೆ ಇದ್ದರೆ, ಯಂತ್ರಗಳನ್ನು ಕಾರ್ಪೊರೇಷನ್ನಿಗೆ ವಾಪಸು ಮಾಡುವ ಅವಕಾಶವೂ ಇದೆ. ಈ ಯೋಜನೆಯ ಪ್ರಕಾರ ನೀಡುವ ಯಂತ್ರಗಳನ್ನು ಕಾರ್ಪೊರೇಷನ್ ಕೊಂಡು, ಅವುಗಳಿಗೆ ಸಂಬಂಧಿಸಿದ ವಿದೇಶೀ ವಿನಿಮಯ ಆಯಾತ ಪರವಾನಗಿಗಳನ್ನು ಒದಗಿಸಿ ಗ್ರಾಹಕನಿಗೆ ಸಹಾಯ ಮಾಡುತ್ತದೆ. ಈ ಯೋಜನೆಯ ಮತ್ತೊಂದು ಉಪಯೋಗವೆಂದರೆ, ಗ್ರಾಹಕನು ತನ್ನ ಅಮೂಲ್ಯ ಬಂಡವಾಳದ ಹಣವನ್ನು ಯಂತ್ರಗಳಿಗಾಗಿ ಬಳಸಿ ನಿರ್ಬಲವಾಗುವ ಬದಲು, ಉದ್ಯಮದ ನಿರ್ವಹಣೆಗೆ ಸಂಬಂಧಿಸಿದ ನಿತ್ಯ ಅವಶ್ಯಕತೆಗೆ ಉಪಯೋಗಿಸಿಕೊಳ್ಳಲು ಸಾಧ್ಯವಾಗುತ್ತದೆ.

ಕಂತಿನ ಯೋಜನೆಯ ಕ್ರಮ

ಕೇವಲ ಸಣ್ಣ ಪ್ರಮಾಣದ ಕೈಗಾರಿಕೆಗಳು (ಅಂದರೆ ಯಂತ್ರಸಾಮಗ್ರಿಗಳ ಮೇಲಿನ ಬಂಡವಾಳ ಹತ್ತು ಲಕ್ಷ ರೂಪಾಯಿಗಳಿಗೆ ಮೀರದ ಉದ್ಯಮಗಳು) ಮಾತ್ರ ಈ ಯೋಜನೆಯ ಉಪಯೋಗವನ್ನು ಪಡೆಯಬಹುದು. ಮಧ್ಯಮ ಹಾಗೂ ಬೃಹತ್ ಪ್ರಮಾಣದ ಕೈಗಾರಿಕೆಗಳಿಗೆ ಯಂತ್ರ ಭಾಗಗಳನ್ನು ತಯಾರುಮಾಡಿ ಒದಗಿಸುವ ಸಣ್ಣ ಪ್ರಮಾಣದ ಸಹಾಯಕ ಉದ್ಯಮಗಳ ವಿಷಯದಲ್ಲಿ ಮಾತ್ರ ಬಂಡವಾಳದ ಮಿತಿಯನ್ನು 15 ಲಕ್ಷ ರೂ.ಗಳವರೆಗೆ ಸಡಿಲಿಸಲಾಗಿದೆ.

ನಿಯಮ ನಿಬಂಧನೆಗಳು

ಕಂತಿನ ಬೇಡಿಕೆಗಳನ್ನು ರಾಷ್ಟ್ರೀಯ ಸಣ್ಣ ಕೈಗಾರಿಕಾ ಕಾರ್ಪೊರೇಷನ್ ಅಥವಾ ರಾಜ್ಯದ ಕೈಗಾರಿಕಾ ಡೈರೆಕ್ಟರುಗಳ ಮೂಲಕ ಪಡೆಯಲು ನಿಗದಿಯಾದ ಅರ್ಜಿಗಳಲ್ಲಿ ಸಲ್ಲಿಸಬೇಕು. ಇವುಗಳನ್ನು ಸಂಬಂಧಪಟ್ಟ ಕೈಗಾರಿಕಾ ಡೈರೆಕ್ಟರುಗಳು ರಾಷ್ಟ್ರಿಯ ಕಾರ್ಪೊರೇಷನ್ನಿನ ಕೇಂದ್ರ ಕಚೇರಿಗೆ ತಮ್ಮ ಶಿಫಾರಸು ಹಾಗೂ ಷರಾಗಳೊಂದಿಗೆ ಕಳುಹಿಸುತ್ತಾರೆ. ದೇಶಿ ಅಥವಾ ವಿದೇಶಿ ಯಂತ್ರಗಳಿಗೆ ಸಂಬಂಧಿಸಿದ ಎಲ್ಲ ಅರ್ಜಿಗಳನ್ನು ಮುಖ್ಯ ಆಮದು ನಿಯಂತ್ರಣಾಧಿಕಾರಿ ಮತ್ತು ಸಣ್ಣ ಕೈಗಾರಿಕೆಗಳ (ಡೆವಲಪ್‌ಮೆಂಟ್ ಕಮೀಷನರ್) ಅಭಿವೃದ್ಧಿ ಕಮಿಷನರ್ ಮತ್ತು ಇತರ ಸಂಬಂಧಿಸಿದ ಇಲಾಖೆಗಳ ಪ್ರತಿನಿಧಿಗಳಿರುವ ಎರಡು ಸಮಿತಿಗಳ ಅವಗಾಹನೆಗೆ ಒಪ್ಪಿಸಲಾಗುತ್ತದೆ. ಈ ಸಮಿತಿಗಳು ಮಾಡಿದ ನಿರ್ಧಾರಗಳನ್ನು ಅರ್ಜಿದಾರರಿಗೂ, ಕಾರ್ಪೊರೇಷನ್ನಿನ ಪ್ರಾದೇಶಿಕ ಕಚೇರಿಗಳಿಗೂ ಹಾಗೂ ಕೈಗಾರಿಕಾ ಡೈರೆಕ್ಟರರಿಗೂ ತಿಳಿಸಲಾಗುತ್ತದೆ. ಬೇಡಿಕೆಗಳು ತಿರಸ್ಕೃತವಾದಲ್ಲಿ ಅರ್ಜಿದಾರನು ತನ್ನ ಅರ್ಜಿಯನ್ನು ಉನ್ನತಾಧಿಕಾರದ ಪುನರ್ ಪರಿಶೀಲನಾ ಸಮಿತಿಗೆ ಕಳುಹಿಸುವ ಅವಕಾಶವಿದೆ.

ಅರ್ಜಿಗಳು ಮಂಜೂರಾದ ಮೇಲೆ ಬೇಡಿಕೆಗಳನ್ನು ಅರ್ಜಿದಾರರು ಸೂಚಿಸಿರುವ ಸರಬರಾಜುದಾರರಿಗೆ ಹಾಗೂ ಕಾರ್ಪೊರೇಷನ್ನಿಗೆ ತಿಳಿದಿರುವ ಸರಬರಾಜುದಾರರಿಗೆ ಕಳಿಸಲಾಗುತ್ತದೆ. ಸರಬರಾಜುದಾರರಿಂದ ಚಾಲ್ತಿ ಬೆಲೆಗಳ ಕ್ರಯಪಟ್ಟಿ ಬಂದ ನಂತರ ಅವುಗಳನ್ನು ಅರ್ಜಿದಾರನ ಆಯ್ಕೆಗೆ ಮತ್ತು ಪ್ರಾದೇಶಿಕ ಕಚೇರಿಯಲ್ಲಿ ಮುಂಗಡ ಹಣ ಮಂಜೂರಾತಿಗಾಗಿ

(earnest money deposit) ಕಳಿಸಲಾಗುತ್ತದೆ. ಪ್ರಾದೇಶಿಕ ಕಚೇರಿಯಿಂದ ಈ ಮೊತ್ತ ಮಂಜೂರಾಗಿರುವುದು ತಿಳಿದೊಡನೆ ಕೇಂದ್ರ ಕಚೇರಿಯು ಯಂತ್ರಗಳ ಸರಬರಾಜುದಾರರಿಗೆ ಆದೇಶಗಳನ್ನು ಕಳುಹಿಸುತ್ತದೆ. ಈ ಆದೇಶದ ಪ್ರತಿಗಳನ್ನು ಅರ್ಜಿದಾರನಿಗೂ ಹಾಗೂ ಪ್ರಾದೇಶಿಕ ಕಚೇರಿಗಳಿಗೂ ಕಳಿಸಲಾಗುತ್ತದೆ. ಕೇಳಿರುವ ಯಂತ್ರಗಳು ವಿದೇಶದಿಂದ ಆಮದಾಗಬೇಕಾಗಿದ್ದರೆ, ಆಮದು-ರಫ್ತು ನಿಯಂತ್ರಣ ಅಧಿಕಾರಿಗಳೊಡನೆ ಆಯಾತ-ಪರವಾನಗಿಗಾಗಿ ಈ ಘಟ್ಟದಲ್ಲಿಯೇ ಸಂಪರ್ಕ ಬೆಳೆಸಲಾಗುತ್ತದೆ. ಆಯಾತ ಪರವಾನಗಿ ಕೈಸೇರಿದ ಕೂಡಲೆ ಕೇಂದ್ರ ಕಚೇರಿಯು ಅದನ್ನು ಸಂಬಂಧಪಟ್ಟ ಪ್ರಾದೇಶಿಕ ಕಚೇರಿಗೆ ಕಳುಹಿಸುತ್ತದೆ. ಪ್ರಾದೇಶಿಕ ಕಚೇರಿಯು ಅದಕ್ಕೆ ತಕ್ಕ ಭರವಸಾ ಪತ್ರವನ್ನು ಬ್ಯಾಂಕಿನಲ್ಲಿ ಸಿದ್ಧಪಡಿಸುತ್ತದೆ.

ಸರಬರಾಜು ಆದೇಶದ ಪ್ರತಿ ದೊರೆತ ಅನಂತರ ಪ್ರಾದೇಶಿಕ ಕಚೇರಿಯು ತನ್ನ ಮುಂಗಡ ಇನ್ವಾಯ್ಸನ್ನು ಕಳಿಸುವಂತೆ ಸರಬರಾಜುದಾರನನ್ನು ಕೇಳುತ್ತದೆ. ಇದರ ಆಧಾರದ ಮೇಲೆ ಅರ್ಜಿದಾರನು (ಬಾಡಿಗೆದಾರನು) ಬರೆದುಕೊಡಬೇಕಾಗುವ ಕಂತಿನ ಕರಾರು ಪತ್ರವನ್ನು ಅವನ ಸಹಿಗಾಗಿ ಸಿದ್ಧಪಡಿಸಲಾಗುತ್ತದೆ. ಇದೇ ಘಟ್ಟದಲ್ಲಿಯೇ ಬಾಡಿಗೆದಾರನು ಯಂತ್ರಗಳ ಮೇಲಿನ ವಿಮೆ, ಸರಬರಾಜುದಾರರಿಗೆ ಕೊಡಬೇಕಾದ ಖರ್ಚುಗಳು, ಠೇವಣಿ ಬಾಕಿ ಮೊತ್ತದ ಪಾವತಿ, ಮತ್ತಿತರ ಕ್ರಮಗಳನ್ನು ಪೂರೈಸಬೇಕಾಗುತ್ತದೆ.

ಈ ಕ್ರಮಗಳೆಲ್ಲ ಪೂರೈಸಿದ ಮೇಲೆ ಬಾಡಿಗೆದಾರನಿಗೆ ಯಂತ್ರಗಳನ್ನು ಸರಬರಾಜು ಮಾಡುವಂತೆಯೂ, ಅದಕ್ಕೆ

ಸಂಬಂಧಿಸಿದ ರೈಲ್ವೆ ರಸೀತಿಯನ್ನು ಪ್ರಾದೇಶಿಕ ಕಚೇರಿಗೆ ಕಳುಹಿಸುವಂತೆಯೂ, ಸರಬರಾಜುದಾರರಿಗೆ ಸೂಚನೆ ಕೊಡಲಾಗುತ್ತದೆ. ಬಾಡಿಗೆದಾರನಿಂದ ಕಾರ್ಪೊರೇಷನ್ನಿಗೆ ಸಲ್ಲಬೇಕಾದ ಎಲ್ಲವೂ ಸಂದಾಯವಾಗಿರುವುದನ್ನು ದೃಢಪಡಿಸಿಕೊಂಡು, ಯಂತ್ರಗಳ ರೈಲ್ವೆ ರಸೀತಿಯನ್ನು ಅವನಿಗೆ ಕೊಡಲಾಗುವುದು. ಒಂದುವೇಳೆ ಯಂತ್ರಗಳು ಆಮದಾಗಬೇಕಾಗಿದ್ದರೆ, ಬಾಡಿಗೆದಾರನು ಕಂತಿನ ಕರಾರಿಗೆ ಸಂಬಂಧಪಟ್ಟ ಕ್ರಮಗಳೆಲ್ಲವನ್ನೂ ಪೂರೈಸಿದ ಮೇಲೆ ಕಾರ್ಪೊರೇಷನ್ ಆಯಾತ ದಾಖಲೆಗಳನ್ನು ರೇವು ಬಂದರಿನ ದಳ್ಳಾಳಿಗಳಿಗೆ ಕಸ್ಟಮ್ಸ್ ಕ್ರಮಗಳ ಪೂರೈಕೆಗಾಗಿ ಕಳಿಸಿ ಆಯಾತವಾದ ಯಂತ್ರಗಳನ್ನು ಬಾಡಿಗೆದಾರನಿಗೆ ರೈಲ್ವೆ ಮೂಲಕ (ರಸ್ತೆ ಸಾರಿಗೆ ಮೂಲಕ) ಕಳಿಸುವಂತೆ ಸೂಚಿಸಲಾಗುತ್ತದೆ.

ಮುಂಗಡ ಹಣ ಮತ್ತು ಬಡ್ಡಿದರ ಇತ್ಯಾದಿ

ಕಂತಿನ ಸರಬರಾಜಿಗೆ ಪರಿಗಣಿಸಿದ ಪ್ರತಿ ಕೈಗಾರಿಕೋದ್ಯಮವೂ (ಬಾಡಿಗೆದಾರನೂ) ಬೇಡಿದ ಯಂತ್ರದ ಬೆಲೆಯ ಶೇ.20ರಷ್ಟು ಹಣವನ್ನು ಮುಂಗಡವಾಗಿ ಖಾತ್ರಿ ಮೊತ್ತವಾಗಿ ಕಾರ್ಪೊರೇಷನ್ ಸರಬರಾಜುದಾರರಿಗೆ ಆದೇಶವನ್ನು ನೀಡುವುದಕ್ಕೆ ಮುಂಚೆಯೇ ಸಲ್ಲಿಸಬೇಕು. ಖಾತ್ರಿ ಮೊತ್ತವು ಸಂದಾಯವಾಗುವವರೆಗೂ ಕಾರ್ಪೊರೇಷನ್ ಸರಬರಾಜಿಗೆ ಆದೇಶ ನೀಡುವುದಿಲ್ಲ. ಕುಲುಮೆ ಇತ್ಯಾದಿ ಕೆಲವು ಯಂತ್ರಗಳ ಸಜ್ಜುಗೆಗಳ ವಿಷಯದಲ್ಲಿ ಖಾತ್ರಿ ಮೊತ್ತವು ಒಟ್ಟು ಬೆಲೆಯ ಶೇ. 30 ರಷ್ಟಾಗಿರುತ್ತದೆ.

ಈ ಯೋಜನೆಯಲ್ಲಿ ಪಡೆಯಲಾದ ಯಂತ್ರಗಳ ಮೌಲ್ಯದ ಮೇಲೆ ವರ್ಷಕ್ಕೆ ಶೇ. 13% ರಂತೆ ಈಗ ಬಡ್ಡಿಯನ್ನು ವಿಧಿಸಲಾಗುತ್ತಿದೆ. ಪಾವತಿಯಾದ ಖಾತ್ರಿ ಮೊತ್ತವನ್ನು ಕಳೆದು ಉಳಿದ ಮೌಲ್ಯದ ಮೇಲೆ ಬಡ್ಡಿ ಲೆಕ್ಕ ಹಾಕಲಾಗುತ್ತದೆ.

ಯಂತ್ರಗಳ ಒಟ್ಟು ಬೆಲೆಯ ಮೇಲೆ ಶೇ. 6 ರಂತೆ ಆಡಳಿತ ಶುಲ್ಕವನ್ನು ಸಾಲದ ಅವಧಿಯಲ್ಲಿ ಬಾಡಿಗೆದಾರನು ಕೊಡಬೇಕಾಗುತ್ತದೆ.

ಸಾಲ ತೀರಿಸಲು ಕಾಲಾವಧಿ

ಆಯಾತ ಮಾಡಿಕೊಂಡ ಮತ್ತು ಗ್ರೇಡೆಡ್ ಆಗಿದ್ದ ಯಂತ್ರಗಳಾಗಿದ್ದಲ್ಲಿ ಖಾತ್ರಿ ಹಣವನ್ನು ಕಳೆದು ಉಳಿದ ಮೊತ್ತವನ್ನು ಬಡ್ಡಿ ಮತ್ತು ಆಡಳಿತ ಶುಲ್ಕ ಸೇರಿ, ಏಳು ವರ್ಷಗಳಲ್ಲಿಯೂ ಗ್ರೇಡೆಡ್ ಅಲ್ಲದ ಯಂತ್ರಗಳಾಗಿದ್ದಲ್ಲಿ ಐದು ವರ್ಷಗಳಲ್ಲಿಯೂ ವಾಪಸು ಕೊಡಬೇಕಾಗುತ್ತದೆ. ಮೊದಲನೆಯ ಕಂತನ್ನು ಯಂತ್ರಗಳು ತಲುಪಿದ ಒಂದು ವರುಷದ ಅನಂತರವೂ ಎರಡನೆಯ ಮತ್ತು ತರುವಾಯದ ಕಂತುಗಳನ್ನು ಆರು ತಿಂಗಳಿಗೊಮ್ಮೆಯೂ ಕಟ್ಟಬೇಕಾಗುತ್ತದೆ.

ಅರ್ಜಿ ಸಲ್ಲಿಸುವ ವಿಧಾನ

ಅರ್ಜಿಯನ್ನು ನಾಲ್ಕು ಪ್ರತಿಗಳಲ್ಲಿ ಸಲ್ಲಿಸಬೇಕು. ಐದು ರೂಪಾಯಿ ಮೌಲ್ಯದ ಅಂಚೆ ಆರ್ಡರನ್ನು ರಾಷ್ಟ್ರದ ಸಣ್ಣ ಕೈಗಾರಿಕಾ ಕಾರ್ಪೊರೇಷನ್ನಿನ ಹೆಸರಿನಲ್ಲಿ ಪಡೆದು ಅದನ್ನು ಕ್ರಾಸ್ ಮಾಡಿ, ಮೂಲ ಅರ್ಜಿ ಮತ್ತು ಅದರ ಎರಡು ಪ್ರತಿಗಳೊಂದಿಗೆ ರಾಜ್ಯದ ಕೈಗಾರಿಕಾ ಡೈರೆಕ್ಟರ್‌ರವರಿಗೆ ಕಳುಹಿಸ

ಬೇಕು. ಈ ಎರಡು ಪ್ರತಿಗಳನ್ನು ಕಾರ್ಪೊರೇಷನ್ನಿನ ಶಾಖಾ ಕಚೇರಿಗೆ ಕಳುಹಿಸಬೇಕಾಗುವುದು. ಪೋಸ್ಟಲ್ ಆರ್ಡರಿನ ನಂಬರು ಮತ್ತು ವಿವರಗಳನ್ನು ಅರ್ಜಿಯಲ್ಲಿ ಅದಕ್ಕಾಗಿಯೇ ತೋರಿಸಿರುವ ಜಾಗದಲ್ಲಿ ಸೂಚಿಸಬೇಕು. ಅರ್ಜಿಯ ಶುಲ್ಕವನ್ನು ವಾಪಸು ಮಾಡಲಾಗುವುದಿಲ್ಲ. ಪೋಸ್ಟಲ್ ಆರ್ಡರ್ ಮೂಲಕ ಸಲ್ಲಬೇಕಾದ ಶುಲ್ಕವಿಲ್ಲದ ಅರ್ಜಿಗಳನ್ನು ಗಣನೆಗೆ ತೆಗೆದುಕೊಳ್ಳಲಾಗದು ; ಇಂಥ ಅರ್ಜಿಗಳು ತಲುಪಿದರೂ ಜವಾಬು ಕೊಡಲಾಗುವುದಿಲ್ಲ. ಅರ್ಜಿಯ ನಾಲ್ಕನೆಯ ಪ್ರತಿಯನ್ನು ಕೇಂದ್ರ ಕಚೇರಿಯ ಉಪಯೋಗಕ್ಕಾಗಿ ನೇರವಾಗಿ ರಾಷ್ಟ್ರೀಯ ಸಣ್ಣ ಕೈಗಾರಿಕಾ ಕಾರ್ಪೊರೇಷನ್ ಲಿಮಿಟೆಡ್ ಓಕ್ಲೆ ಇಂಡಸ್ಟ್ರಿಯಲ್ ಎಸ್ಟೇಟ್, ನವದೆಹಲಿ-20ಕ್ಕೆ ಕಳುಹಿಸಬೇಕು. ಅರ್ಜಿಯ ಐದನೆಯ ಪ್ರತಿಯನ್ನು ಅರ್ಜಿದಾರನು ತನ್ನ ಬಳಿ ಇರಿಸಿಕೊಳ್ಳುತ್ತಾನೆ.

ಅರ್ಜಿದಾರರು ತಮಗೆ ಬೇಕಾಗುವ ಯಂತ್ರಗಳ ಅಳತೆ, ಗಾತ್ರ, ತಯಾರಿಕೆ ಮುಂತಾದ ಸಂಪೂರ್ಣ ವಿವರಗಳನ್ನು ಸರಬರಾಜು ಮಾಡುವವರ ಕ್ರಯಪಟ್ಟಿ (valid quotation) ಅವರ ದೇಶ, ವಿಳಾಸಗಳೊಂದಿಗೆ ಅರ್ಜಿಯಲ್ಲಿ ಕೊಡಬೇಕು. ಇದರಿಂದ ಶೀಘ್ರ ಕಾರ್ಯಾಚರಣೆಗೆ ಅನುಕೂಲವಾಗುತ್ತದೆ.

ಸಂಬಂಧಪಟ್ಟ ಕೈಗಾರಿಕಾ ಡೈರೆಕ್ಟರುಗಳು ಶಿಫಾರಸು ಮಾಡಿದ ಅರ್ಜಿಗಳನ್ನು ಮಾತ್ರ ಗಣನೆಗೆ ತೆಗೆದುಕೊಳ್ಳಲಾಗುತ್ತದೆ.

ಬೇಡಿಕೆಯ ಅಂಗೀಕಾರ ಅಥವಾ ತಿರಸ್ಕಾರದ ಬಗ್ಗೆ ಕಾರ್ಪೊರೇಷನ್ನಿನ ನಿರ್ಧಾರವನ್ನು ಅರ್ಜಿ ಸ್ವೀಕೃತವಾದ 21 ದಿನಗಳೊಳಗೆ ಸಾಮಾನ್ಯವಾಗಿ ತಿಳಿಸಲಾಗುವುದು.

ರಾಜ್ಯ ಸರಕಾರದ ಕೈಗಾರಿಕಾ ಡೈರೆಕ್ಟರು ಪರಿಶೀಲಿಸಿ ಮೂಲಪ್ರತಿಯನ್ನು (ಐದು ರೂಪಾಯಿ ಪೋಸ್ಟಲ್ ಆರ್ಡರು ಸಮೇತ) ತಮ್ಮ ಶಿಫಾರ್ಸು ಪರಾಗಳೊಂದಿಗೆ ರಾಷ್ಟ್ರದ ಸಣ್ಣ ಕೈಗಾರಿಕಾ ಕಾರ್ಪೊರೇಷನ್, ನವದೆಹಲಿಗೆ ಕಳುಹಿಸುತ್ತಾರೆ. ಒಂದು ಪ್ರತಿಯನ್ನು ಅದೇ ವೇಳೆಯಲ್ಲಿ ಕಾರ್ಪೊರೇಷನ್ನಿನ ಬ್ರಾಂಚ್ ಆಫೀಸಿಗೂ ಕಳಿಸುತ್ತಾರೆ. ತಮ್ಮ ಕಚೇರಿಗಾಗಿ ಒಂದು ಪ್ರತಿಯನ್ನು ಇರಿಸಿಕೊಳ್ಳುತ್ತಾರೆ.

ಸಾಮಾನ್ಯ ವಿವರಗಳು

ಅರ್ಜಿಗಳನ್ನು ಅಂಗೀಕರಿಸಿದ ಮಾತ್ರಕ್ಕೇ ಯಂತ್ರಗಳ ನೀಡಿಕೆಯ ಬಗ್ಗೆ ಯಾವ ಕರಾರಿಗೂ ಬದ್ಧವಾಗುವುದಿಲ್ಲ. ಕಂತಿನ ಯೋಜನೆ ಪ್ರಕಾರ ಕಾರ್ಪೊರೇಷನ್ನಿನ ನೆರವನ್ನು ಪಡೆಯಬಹುದಾದ ಉದ್ಯಮದಾರರಲ್ಲೊಬ್ಬರೆಂದು ಇದರಿಂದ ಅರ್ಜಿದಾರರನ್ನು ಪರಿಗಣಿಸಲು ಸಾಧ್ಯವಾಗುತ್ತದೆ ಅಷ್ಟೆ.

ಯಂತ್ರಗಳ ಸರಬರಾಜನ್ನು ಯಾವುದೇ ಘಟ್ಟದಲ್ಲಿ, ಯಾವ ಕಾರಣವನ್ನೂ ತಿಳಿಯಪಡಿಸದೆ ತಿರಸ್ಕರಿಸುವ ಅಧಿಕಾರವನ್ನು ಕಾರ್ಪೊರೇಷನ್ ಕಾದಿರಿಸಿಕೊಂಡಿದೆ.

ಯಂತ್ರ ತಯಾರಕರು ಮತ್ತು ಸರಬರಾಜುದಾರರು ಕಾರ್ಪೊರೇಷನ್ನಿಗೆ ಕೊಡುವ ಅಥವಾ ಬಿಡುವ ಮಾರಾಟರಿಯಾಯಿತಿಯ ಲಾಭ ಅರ್ಜಿದಾರರಿಗೇ ಸಲ್ಲತಕ್ಕದ್ದಾಗುತ್ತದೆ.

ಕಾರ್ಪೊರೇಷನ್ ಮೂಲಕ ನಡೆಯುವ ಯಂತ್ರಗಳ ಹಂಚಿಕೆ ಅವುಗಳು ದೊರೆಯುವ ಸಾಧ್ಯತೆಯ ಮೇಲೆ ಅವ

ಲಂಭಿಸಿದೆ. ಬೇಡಿದ ಯಂತ್ರಗಳು ಯಾವುದೇ ಕಾರಣದಿಂದ ದೊರೆಯದಿದ್ದರೆ, ಕಾರ್ಪೊರೇಷನ್ ಅವುಗಳಿಗೆ ಸರಿಸಮಾನವಾದ ಯಂತ್ರಗಳನ್ನು ಸರಬರಾಜು ಮಾಡಲು ಪ್ರಯತ್ನಿಸುತ್ತದೆ.

ಈ ಯಂತ್ರ ಸರಬರಾಜಿಗಾಗಿ ಕಾರ್ಪೊರೇಷನ್ ಸಾಧ್ಯವಾದಷ್ಟು ಪ್ರಯತ್ನಪಟ್ಟು ಉದ್ಯಮಿಗಳಿಗೆ ನೆರವಾಗುತ್ತದೆ. ಆದರೆ ಪ್ರಯತ್ನದಲ್ಲಿ ವಿಫಲವಾದರೆ, ಸರಬರಾಜು ನಿಧಾನವಾದರೆ, ಅದರಿಂದ ಅರ್ಜಿದಾರರಿಗೆ ಆಗುವ ಕಷ್ಟನಷ್ಟಗಳಿಗೆ ಕಾರ್ಪೊರೇಷನ್ ಬದ್ಧವಾಗುವುದಿಲ್ಲ.

ಕಾರ್ಪೊರೇಷನ್ ಮೂಲಕ ಯಂತ್ರಗಳ ಹಂಚುವಿಕೆಯು ಸರಬರಾಜುದಾರರು ಕಳಿಸಿದ ಮಾರಾಟ ದರಗಳು ಮತ್ತು ತನ್ನಲ್ಲಿರುವ ಯಂತ್ರಗಳ ದಾಸ್ತಾನುಗಳನ್ನು ಅವಲಂಬಿಸಿದೆ.

ಒಂದನೆಯ ವಿಷಯದಲ್ಲಿ ಯಂತ್ರಗಳ ಬೆಲೆ, ಸಾಗಾಣಿಕೆ ವೆಚ್ಚ, ವಿಮಾ ಖರ್ಚು ಎಲ್ಲವೂ ಸರಬರಾಜುದಾರರು ನಮೂದಿಸಿರುವ ದರಗಳೇ ಆಗಿರುತ್ತವೆ. ಎರಡನೆ ವಿಚಾರದಲ್ಲಿ ಯಂತ್ರಗಳ ದಾಸ್ತಾನು, ಅವುಗಳಿಗಿರುವ ಬೇಡಿಕೆ, ಅದನ್ನು ಪಡೆಯಲು ಅಗತ್ಯವಾದ ಖಾತ್ರಿ ಹಣ ಕಟ್ಟುವುದರಲ್ಲಿ ತ್ವರೆ—ಇವುಗಳನ್ನು ಗಮನಿಸಲಾಗುತ್ತದೆ. ದಾಸ್ತಾನಿನಲ್ಲಿರುವ ಯಂತ್ರಗಳಿಗೆ ಹೆಚ್ಚು ಬೇಡಿಕೆಗಳು ಬಂದಲ್ಲಿ, ಖಾತ್ರಿ ಮೊತ್ತವನ್ನು ಪಾವತಿಯಾದ ಕ್ರಮವನ್ನು ಅನುಸರಿಸಿ—ಮುಂಚೆ ಕೊಟ್ಟವರಿಗೆ ಮೊದಲು ಎಂಬ ನೀತಿಯಿಂದ ಯಂತ್ರಗಳನ್ನು ಕಾದಿರಿಸಲಾಗುತ್ತದೆ.

ಕಾರ್ಪೊರೇಷನ್ನಿನಿಂದ ಯಂತ್ರಗಳ ಸರಬರಾಜು ನೀಡಿಕೆ ಪತ್ರ ಬಂದ 15 ದಿನಗಳೊಳಗಾಗಿ ಅರ್ಜಿದಾರನು ತನ್ನ ಆಯ್ಕೆಯನ್ನು ಸೂಚಿಸಿ, ಅದರ ಸಲುವಾಗಿ ಖಾತ್ರಿ ಮೊತ್ತವನ್ನು ಬ್ಯಾಂಕ್ ಡ್ರಾಫ್ಟ್ ಮೂಲಕ ಕಾರ್ಪೊರೇಷನ್ನಿನ ಶಾಖೆಗೆ ಕಳುಹಿಸಬೇಕು. ಅಂತಹ ಅರ್ಜಿದಾರನು ಹಾಗೆ ಮಾಡದೆ ಇದ್ದರೆ ಕಾರ್ಪೊರೇಷನ್ನಿಗೆ ಬೇಡಿಕೆಗಳು ಹಿಂತೆಗೆದುಕೊಳ್ಳಲ್ಪಟ್ಟಿವೆ ಎಂದು ಪರಿಗಣಿಸುವ ಹಕ್ಕಿದೆ.

ಕಂತಿನ ಕರಾರು ಪತ್ರ

ಯಂತ್ರಗಳನ್ನು ಬೇಡಿಕೆದಾರರಿಗೆ ಒಪ್ಪಿಸುವ ಮುನ್ನ, ಅಂದರೆ ಸಾಗಾಣಿಕೆ ರಸೀತಿ ಕಳಿಸುವುದಕ್ಕೆ ಮುಂಚೆ, ಪ್ರತಿಯೊಂದು ಯಂತ್ರಕ್ಕೂ ಪ್ರತ್ಯೇಕವಾಗಿ ಬಾಡಿಗೆದಾರರು ಮತ್ತು ಕಾರ್ಪೊರೇಷನ್ನಿನ ನಡುವೆ ಕಂತಿನ ಕರಾರು ಪತ್ರಗಳಿಗೆ ಸಹಿಮಾಡಬೇಕಾಗುತ್ತದೆ. ಸ್ಥಳೀಯ ಸರಬರಾಜು ಆದರೆ, ಯಂತ್ರವು ಕೈಸೇರುವುದಕ್ಕೆ ಮುಂಚೆ, ಅರ್ಜಿದಾರರಿಂದ ಸಹಿಯಾದ ಕರಾರು ಪತ್ರವನ್ನು ಪಡೆಯಲಾಗುವುದು. ಯಂತ್ರದ ಸಾಗಾಣಿಕೆ ಅಥವಾ ರವಾನೆ ಖರ್ಚು, ಮಾರಾಟ ತೆರಿಗೆ ಮತ್ತಿತರ ಖರ್ಚುಗಳನ್ನು ಅರ್ಜಿದಾರರು ಪ್ರತ್ಯೇಕವಾಗಿ ಕೊಡಬೇಕಾಗುವುದು.

ಯಂತ್ರಗಳು ತಲುಪಿದ ಮೇಲೆ, 15 ದಿನಗಳೊಳಗಾಗಿ, ಅವುಗಳು ಸೇರಿದ್ದಕ್ಕೂ ಮತ್ತು ಅವುಗಳ ಸ್ಥಿತಿಗತಿಗಳನ್ನೂ ಅಧಿಕಾರಿಗಳಿಗೆ ವರದಿ ಮಾಡಬೇಕು. ಇಲ್ಲದೆ ಇದ್ದರೆ ಯಂತ್ರಗಳು ಸುರಕ್ಷಿತವಾಗಿ–ಸರಿಯಾದ ಸ್ಥಿತಿಯಲ್ಲಿ ಮುಟ್ಟಿದುವೆಂದು ಎಣಿಸಲಾಗುವುದು.

ಸಾಲದ ಅವಧಿ ಮುಗಿದು ಬಡ್ಡಿ ಮತ್ತಿತರ ಶುಲ್ಕಗಳೊಳಗೊಂಡಂತೆ ಪೂರ್ತಿ ಹಣ ಪಾವತಿಯಾಗುವವರೆವಿಗೂ ಯಂತ್ರಗಳು ಕಾರ್ಪೊರೇಷನ್ನಿನ ಆಸ್ತಿಗಳಾಗಿರುತ್ತವೆ. ಇದನ್ನು ಸ್ಥಾಪಿಸುವ ಒಂದು ಫಲಕವನ್ನು ಯಂತ್ರಕ್ಕೆ ಜೋಡಿಸಲಾಗುತ್ತದೆ. ಈ ಸಾಲದ ಅವಧಿಯಲ್ಲಿ ಯಂತ್ರಗಳನ್ನು ಉತ್ತಮ ಕಾರ್ಯಸ್ಥಿತಿಯಲ್ಲಿರುವಂತೆ ನೋಡಿಕೊಳ್ಳುವುದು ಬಾಡಿಗೆದಾರನ ಕರ್ತವ್ಯ. ಬೆಂಕಿ, ಲೂಟಿ, ಹಾಗೂ ದಂಗೆಗಳಿಗೆ ಸಂಬಂಧಿಸಿದಂತೆ ಯಂತ್ರಗಳಿಗೆ ವಿಮೆ ಮಾಡಿಸಬೇಕಾಗುತ್ತದೆ. ಯಂತ್ರಗಳನ್ನು ಬಾಡಿಗೆದಾರನಿಗೆ ಒಪ್ಪಿಸುವ ಮುನ್ನ ಅವುಗಳ ವಿಮಾ ಪಾಲಿಸಿಗಳನ್ನು ಕಾರ್ಪೊರೇಷನ್ನಿಗೆ ಕೊಡಬೇಕಾಗುತ್ತದೆ. ಸಾಲದ ಅವಧಿಯಲ್ಲಿ ಯಂತ್ರಗಳನ್ನು ಸ್ಥಳಾಂತರ ಮಾಡಲು ಸಾಧ್ಯವಿರುವುದಿಲ್ಲ. ಯಂತ್ರಗಳು ಕಾರ್ಪೊರೇಷನ್ನಿನ ಆಸ್ತಿಗಳಾಗಿರುವವರೆಗೂ ಅವುಗಳ ಮೇಲಿನ ವಿಮಾ ಪಾಲಿಸಿಗಳನ್ನು ನಡೆಸಿಕೊಂಡು ಬರುತ್ತಿರಬೇಕು ಮತ್ತು ಅವು ಕಾರ್ಪೊರೇಷನ್ನಿನ ಸುಪರ್ಧಿನಲ್ಲಿರಬೇಕು.

ಯಂತ್ರಗಳಿಗೆ ಸ್ಥಳಾವಕಾಶ, ಬೇಕಾದ ಚಲನ ಶಕ್ತಿ ಮತ್ತು ಕಚ್ಚಾ ಸಾಮಗ್ರಿ ಇತ್ಯಾದಿ ಅವಶ್ಯಕತೆಗಳನ್ನು ಒದಗಿಸಿಕೊಳ್ಳುವುದು ಬಾಡಿಗೆದಾರನ ಸ್ವಂತ ಜವಾಬ್ದಾರಿ. ಇವುಗಳ ಯಾವ ಕೊರತೆಯ ನೆವದಿಂದಲೂ ಸಕಾಲಕ್ಕೆ, ಕಂತಿನ ಪಾವತಿಯಾಗದೆ ಇರಕೂಡದು.

ಸಾಲದ ಪ್ರತಿ ಕಂತನ್ನೂ ವಾಯಿದೆ ತಾರೀಖಿನೊಳಗಾಗಿ ಕಟ್ಟಬೇಕು. ಈ ದಿಶೆಯಲ್ಲಿ ಯಾವ ರೀತಿಯ ತಡವಾದರೂ ಕಾರ್ಪೊರೇಷನ್ನಿಗೆ ಯಂತ್ರಗಳನ್ನು ವಶಪಡಿಸಿಕೊಳ್ಳುವ

ಹಕ್ಕಿದೆ. ಆದರೆ ಬಾಡಿಗೆದಾರನ ಕೋರಿಕೆಯಮೇಲೆ ಕಂತಿನ ಅವಧಿಯನ್ನು ಆರು ತಿಂಗಳವರೆಗೆ ವಿಸ್ತರಿಸಬಹುದು. ಈ ಅವಧಿಯಲ್ಲಿ ಬಾಕಿ ಉಳಿದಿರುವ ಕಂತಿನ ಮೊತ್ತದ ಮೇಲೆ ತಿಂಗಳಿಗೆ ಶೇ. 1ರಂತೆ ಬಡ್ಡಿ ವಸೂಲು ಮಾಡಲಾಗುವುದು. ಕಂತು ಕಟ್ಟದಿರುವಿಕೆ, ಅಸಮರ್ಪಕ ನಿರ್ವಹಣೆ, ಅಥವಾ ಮತ್ತಿತರ ರೀತಿಯ ಕರಾರಿನ ಉಲ್ಲಂಘನೆಗಾಗಿ ವಾಪಸು ತರಿಸಿ ಕೊಂಡಿರುವ ಯಂತ್ರಗಳನ್ನು ಮಾರಾಟ ಅಥವಾ ಹರಾಜು ಮಾಡುವ ಹಕ್ಕು ಕಾರ್ಪೊರೇಷನ್ನಿಗೆ ಇದೆ, ಮತ್ತು ಮರು ಮಾರಾಟದ ಬೆಲೆ ವಸೂಲಾಗಬೇಕಾದ ಮೊತ್ತಕ್ಕಿಂತ ಕಡಿಮೆ ಯಾದಲ್ಲಿ ಬಾಡಿಗೆದಾರನೇ ಆ ವ್ಯತ್ಯಾಸದ ಮೊಬಲಗನ್ನು ಕೊಡ ಬೇಕಾಗುತ್ತದೆ.

ಅರ್ಜಿದಾರನ ಬೇಡಿಕೆಯಂತೆ ಯಂತ್ರಗಳನ್ನು ಕಂತಿನ ಮೇಲೆ ಮೊತ್ತವಾಗಿ (ಒಂದೇ ಸಲ) ಸರಬರಾಜು ಮಾಡುವ ಹಕ್ಕು ಕಾರ್ಪೊರೇಷನ್ ಸಾಧ್ಯವಾದಷ್ಟು ಪ್ರಯತ್ನಿಸುತ್ತದೆ. ಆದರೆ ನಿರ್ಬಂಧಕ್ಕೆ ಒಳಗಾಗುವುದಿಲ್ಲ. ಬಾಡಿಗೆದಾರನು ಯಂತ್ರ ಗಳನ್ನು ಕಾರ್ಪೊರೇಷನ್ನಿನಿಂದ ಸರಬರಾಜು ಆದ ಹಾಗೆಲ್ಲ ಪಡೆಯಬೇಕು.

ಬಾಡಿಗೆದಾರನ ವಿಳಾಸದಲ್ಲಿರುವ ಯಂತ್ರಗಳನ್ನು ಕಾರ್ಪೊ ರೇಷನ್ನಿನ ಯಾವ ಅಧಿಕೃತ ಪ್ರತಿನಿಧಿಯಾದರೂ ಯಾವಾಗ ಲಾದರೂ ಬಂದು ಪರೀಕ್ಷಿಸುವ ಹಕ್ಕಿದೆ.

ಕರಾರಿನ ಅವಧಿಯ ಮೂರು ವರುಷಗಳು ಕಳೆದನಂತರ ಯಾವಾಗಲಾದರೂ ಬಾಡಿಗೆದಾರನು ಸಾಲದ ಮೊತ್ತವನ್ನು ಒಂದೇ ಬಾರಿಗೆ ಕೊಟ್ಟು ಯಂತ್ರಗಳನ್ನು ಕೊಳ್ಳಬಹುದು.

ಆದರೆ ಇದಕ್ಕೆ ಕಾರ್ಪೊರೇಷನ್ ನಿರ್ಬಂದವಾಗಿಲ್ಲ. ಆಯಾ ಕರಾರಿನ ಬಗ್ಗೆ ಕಂಡುಬಂದ ಗುಣಾವಗುಣಗಳ ಮೇಲೆ ಈ ವಿಷಯುವನ್ನು ತೀರ್ಮಾನಿಸಲಾಗುವುದು.

ಬಾಡಿಗೆದಾರನು ಇಷ್ಟಪಟ್ಟರೆ, ಒಂದು ತಿಂಗಳಿನ (ಮುನ್ಸೂಚನೆ) ಲಿಖಿತ ನೋಟೀಸಿನೊಡನೆ ಕರಾರನ್ನು ಮುಕ್ತಾಯಗೊಳಿಸಬಹುದು. ಅದು ತಲುಪಿದ್ದಕ್ಕೆ ಉತ್ತರಿಸಿ ಕಾರ್ಪೊರೇಷನ್ ಯಂತ್ರಗಳ ಪರೀಕ್ಷೆಗಾಗಿ ಒಬ್ಬ ಪರಿಣಿತರನ್ನು ಬಾಡಿಗೆದಾರನ ಖರ್ಚಿನಲ್ಲಿ ನೇಮಿಸುತ್ತದೆ. ಯಂತ್ರಗಳ ವಿಷಯದಲ್ಲಿ ಆ ಪರಿಣಿತರು ಸಲ್ಲಿಸಿದ ವರದಿ ಮತ್ತು ಗುಣ ಪತ್ರದ ಮೇರೆಗೆ ಕರಾರಿನ ಬಾಡಿಗೆದಾರನೂ ಸಂಸ್ಥೆಯು ಬದ್ಧರು. ಅನಂತರ ಕಾರ್ಪೊರೇಷನ್ ತಿಳಿಸುವ ಸ್ಥಳಕ್ಕೆ ಬಾಡಿಗೆದಾರನು ಯಂತ್ರಗಳನ್ನು ಸ್ವಂತ ಜವಾಬ್ದಾರಿ ಮತ್ತು ಖರ್ಚಿನಲ್ಲಿ ರವಾನಿಸಬೇಕಾಗುತ್ತದೆ. ಅಲ್ಲದೆ ತನ್ನಿಂದ ಬಾಕಿ ಇರುವ ಕಂತಿನ ಹಣ, ಯಂತ್ರದ ರಿಪೇರಿಗಳೇನಾದರೂ ಇದ್ದರೆ ಅದರ ಬಾಬ್ತು ಹಣವನ್ನು ಕಾರ್ಪೊರೇಷನ್ನಿಗೆ ಕೊಡಬೇಕಾಗುತ್ತದೆ.

ಖಾತ್ರಿಮೊತ್ತ

ಬೇಡಿದ ಯಂತ್ರಗಳ ಮೌಲ್ಯದ ಶೇ. 20 ರಷ್ಟು ಹಣ ಕೊಡಬೇಕಾಗುತ್ತದೆ. ಕುಲುಮೆಗಳಾದರೆ ಶೇ. 30 ರಷ್ಟು ಕೊಡಬೇಕಾಗುವುದು. ಈ ಮೊತ್ತವನ್ನು ಕಾರ್ಪೊರೇಷನ್ನಿನ ಶಾಖೆಗೆ ಬ್ಯಾಂಕ್ ಡ್ರಾಫ್ಟ್ ಮೂಲಕ (ಮದರಾಸು, ಬೊಂಬಾಯಿ, ಕಲ್ಕತ್ತ, ದೆಹಲಿ ನಗರಗಳಲ್ಲಿರುವ ಬ್ಯಾಂಕುಗಳ ಮೇಲೆ) ಕಳುಹಿಸಬೇಕಾಗುತ್ತದೆ.

ಸರಕಾರದಿಂದ ವಿಶೇಷವಾಗಿ ಪ್ರೇರಿತವಾದ ಅರ್ಜಿಗಳಾದರೆ ಯಂತ್ರಗಳ ಮೌಲ್ಯದ ಶೇ. 5ರಷ್ಟು ಮಾತ್ರ ಖಾತ್ರಿ ಮೊತ್ತವನ್ನು ಕಾರ್ಪೊರೇಷನ್ ಸ್ವೀಕರಿಸಿ ಉಳಿದ ಶೇ. 15 ಮೊತ್ತಕ್ಕೆ ಸರಕಾರದ ಆಧಾರವನ್ನು ಒಪ್ಪಿಕೊಳ್ಳುವುದು. ಬಾಡಿಗೆದಾರನು ಈ ಮೊತ್ತವನ್ನು ಮಾಮೂಲು ಕಂತುಗಳಂತೆ ಪಾವತಿಮಾಡಬಹುದು. ಸರಕಾರದ ಆಧಾರದ ಮೇಲೆ ಯಂತ್ರಗಳ ಸರಬರಾಜು ಮತ್ತು ಅದಕ್ಕೆ ಸಂಬಂಧಿಸಿದ ಕರಾರು ಪತ್ರದ ವಿವರಗಳನ್ನು ಕಾರ್ಪೊರೇಷನ್ನಿನ ಶಾಖೆಯಿಂದ ಕೈಗಾರಿಕಾ ಡೈರೆಕ್ಟರರ ಮೂಲಕ ಪಡೆಯಬಹುದು, ಅಥವಾ ನವದೆಹಲಿಯಲ್ಲಿರುವ ಕೇಂದ್ರ ಕಚೇರಿಯಿಂದ ತರಸಿಕೊಳ್ಳಬಹುದು.

ಈ ಕಂತಿನ ಯೋಜನೆಯ ಪ್ರಕಾರ ಸಲ್ಲಿಸಿದ ಅರ್ಜಿ ಮತ್ತು ಅಂತಹ ಅರ್ಜಿಗಳು ರಾಜ್ಯ ಸರಕಾರದಿಂದ ಪ್ರೇರಿತವಾಗಿದ್ದುದ್ದಾದರೆ, ಅರ್ಜಿದಾರನು ಮತ್ತು ಸಂಬಂಧಪಟ್ಟ ಸರಕಾರವೂ ಸೇರಿ ಸರಬರಾಜು ಯೋಜನೆಗೆ ಸಂಬಂಧಿಸಿದ ಕರಾರು ಷರತ್ತುಗಳು ಅರ್ಥವಾಗಿ ಒಪ್ಪಿಗೆಯಾಗಿವೆಯೆಂದು ಅರ್ಥ.

ಅರ್ಜಿದಾರನು ಯಂತ್ರದ ಮೌಲ್ಯದ ಶೇ. 5 ರಷ್ಟು ಮೊತ್ತವನ್ನು ನಗದಾಗಿಯೂ ಉಳಿದ ಶೇ. 15 ರಷ್ಟು ಅಥವಾ 25 ರಷ್ಟು ಮೊತ್ತವನ್ನು ಬ್ಯಾಂಕಿನ ಗ್ಯಾರಂಟಿ ಮೂಲಕ, ಯಂತ್ರಗಳು ಕೈಸೇರುವ ವೇಳೆಯಲ್ಲಿ ಆ ಮೊತ್ತ ಪಾವತಿಯಾಗುವ ಹಾಗೆಯೂ ಮಾಡಬಹುದು. ಖಾತ್ರಿ ಮೊತ್ತ ಮತ್ತು ಮುಂಗಡವಾಗಿ ಪಾವತಿ ಮಾಡಿದ ಹಣ ಯಂತ್ರ ಸರಬರಾಜಿನ ಕರಾರು ಪತ್ರ ಬರೆಯುವಾಗ ಯಂತ್ರ

ಗಳ ಮೌಲ್ಯದ ಬೆಲೆಯ ಪರವಾಗಿ ಜಮಾ ಮಾಡಲಾಗುವುದು. ಉಳಿದ ಮೌಲ್ಯವನ್ನು ಏಳು ವರ್ಷಗಳ ಅವಧಿ ಮೀರದೆ ಕಂತು ಗಳಲ್ಲಿ ಕೊಡಬೇಕಾಗುವುದು. ಮೊದಲನೆಯ ಕಂತನ್ನು ಕರಾರು ಪತ್ರದ ಸಹಿಯಾದ ಮೇಲೆ ಒಂದು ವರ್ಷದ ಅನಂತರ ತರ ಬೇಕಾಗುವುದು. ತರುವಾಯ ಉಳಿದ ಕಂತುಗಳು ಆರು ತಿಂಗಳಿಗೊಮ್ಮೆ ಪಾವತಿಯಾಗಬೇಕಾಗುವುದು.

ಅರ್ಜಿದಾರರು ಖಾತ್ರಿ ಮೊತ್ತವನ್ನು ಕಟ್ಟುವ ಮೊದಲೇ ತಮಗೆ ಬೇಕಾಗಿರುವ ಯಂತ್ರಗಳ ಬಗ್ಗೆ ಮತ್ತು ಕಾರ್ಪೊ ರೇಷನ್ ನೀಡಿಕೆಯ ವಿಚಾರವಾಗಿ ದೀರ್ಘವಾಗಿ ಯೋಚಿಸಿ ನಿರ್ಧರಿಸುವುದು ಒಳ್ಳೆಯದು. ಇಲ್ಲವಾದರೆ, ಖಾತ್ರಿಮೊತ್ತ ಪಾವತಿಯಾದ ಅನಂತರ ಅದರ ಮರುಪಾವತಿ ಸಾಧ್ಯವಿಲ್ಲ ಮತ್ತು ಇತರ ಬದಲಾವಣೆಗಳೇನೇ ಆಗಲೀ ಮತ್ತೆ ಪ್ರತ್ಯೇಕ ಅರ್ಜಿ ಮತ್ತು ಅದರ ಕ್ರಮಗಳನ್ನೊಳಗೊಂಡ ವಿಷಯವಾಗುತ್ತದೆ.

ಸಾಧಿಕ ಪ್ರಗತಿ

ರಾಷ್ಟ್ರೀಯ ಸಣ್ಣ ಕೈಗಾರಿಕಾ ಕಾರ್ಪೊರೇಷನ್ ಇದು ವರೆಗೂ 90 ಕೋಟಿ ರೂಪಾಯಿಗಳಿಗೂ ಹೆಚ್ಚು ಬೆಲೆ ಬಾಳುವ ಯಂತ್ರ ಸಾಮಗ್ರಿಗಳನ್ನು 50 ಸಾವಿರ ಸಣ್ಣ ಕೈಗಾರಿಕೆಗಳಿಗೆ ಭಾರತಾದ್ಯಂತ ಹಂಚಿದೆ. ಇವುಗಳಲ್ಲಿ ಶೇ. 60ರಷ್ಟು ನೆರ ವನ್ನು ತಾಂತ್ರಿಕ, ವಿದ್ಯುಚ್ಛಕ್ತಿ ಹಾಗೂ ಲೋಹ ಸಂಬಂಧಿ ಎಂಜನಿಯರಿಂಗ್ ಉದ್ಯಮಗಳ ಗುಂಪಿಗೆ ನೀಡಲಾಗಿದೆ.

ಈ ಕಂತಿನ ಯೋಜನೆಯನ್ನು ಆರಂಭಿಸಿದಾಗ ಸಣ್ಣ ಕೈಗಾರಿಕೆಗಳು ಮುಖ್ಯವಾಗಿ ಮುಂಬಯಿ, ಕಲ್ಕತ್ತ, ದೆಹಲಿ,

ಮದ್ರಾಸ್ ಮುಂತಾದ ಮಹಾನಗರಗಳಲ್ಲಿಯೇ ಕೇಂದ್ರಿಕೃತ ವಾಗಿದ್ದವು. ಆದ್ದರಿಂದ ಮೊದಮೊದಲು ಈ ನಗರಗಳಿರುವ ಕೈಗಾರಿಕೆಗಳೇ ಈ ಯೋಜನೆಯು ಹೆಚ್ಚಿನ ಲಾಭ ಪಡೆದವು. ಆದರೆ ಈಚೆಗೆ ಈ ಸೌಲಭ್ಯಗಳನ್ನು ದೇಶದಲ್ಲಿ ಅಲ್ಪ ಅಭಿವೃದ್ಧಿ ಯಾದ ಪ್ರದೇಶಗಳಿಗೂ ಮತ್ತು ಗ್ರಾಮಾಂತರ ಪ್ರದೇಶಗಳಿಗೂ ವಿಸ್ತರಿಸಿ ಕೈಗಾರಿಕಾ ವಿಕೇಂದ್ರೀಕರಣವನ್ನು ಸಾಧಿಸಲು ಪ್ರಯತ್ನಿಸಲಾಗುತ್ತಿದೆ. ಈ ಗುರಿಯಿಂದ ಕಾರ್ಪೊರೇಷನ್ ಕೈಗೊಂಡ ವಿಶೇಷ ಕಾರ್ಯಕ್ರಮಗಳು ಸಫಲಗೊಂಡಿವೆ.

ಸರ್ಕಾರಿ ಖರೀದಿ ಯೋಜನೆ

ಸಣ್ಣ ಕೈಗಾರಿಕೆಗಳ ತಯಾರಿಕೆಗಳಿಗೆ ಸರ್ಕಾರದಿಂದ ಆರ್ಡರುಗಳನ್ನು ದೊರಕಿಸುವುದು ಕಾರ್ಪೊರೇಷನ್ನಿನ ಕಾರ್ಯ ಗಳಲ್ಲೊಂದಾಗಿದೆ. ಭಾರತಸರಕಾರವೇ ದೇಶದಲ್ಲಿ ಅತ್ಯಂತ ದೊಡ್ಡ ಖರೀದಿದಾರನಾಗಿರುವುದರಿಂದ ಮತ್ತು ಸಣ್ಣ ಕೈಗಾ ರಿಕೆಗಳ ಉತ್ಪಾದನೆಗಳನ್ನು ಕೊಳ್ಳುವುದರಲ್ಲಿ ಹೆಚ್ಚಿನ ಆಸಕ್ತಿ ತೋರುತ್ತಿರುವುದರಿಂದ ಸಣ್ಣ ಉದ್ಯಮಗಳಿಗೆ ಹೆಚ್ಚು ಪ್ರೋತ್ಸಾಹ ನೀಡಿದಂತಾಗುತ್ತದೆ. ಅಲ್ಲದೆ ಸರಕಾರದ ಬೇಡಿಕೆ ಗಳು ನಿರ್ದಿಷ್ಟ ಸ್ವರೂಪದ ಮೂಲಗಳಾಗಿ ಮಿಸಲಾಗಿರುವುದ ರಿಂದ ಸಣ್ಣ ಕೈಗಾರಿಕೆಗಳು ಪ್ರಮಾಣ ನಿಷ್ಕರ್ಷೆಯಲ್ಲಿ ಉತ್ತಮ ಅನುಭವವನ್ನು ಪಡೆದಂತಾಗುತ್ತಾನೆ.

ಈ ಸರಕಾರೀ ಖರೀದಿ ಕಾರ್ಯಕ್ರಮವು ಕಾರ್ಪೊ ರೇಷನ್ನಿನ ಅತ್ಯಂತ ಯಶಸ್ವೀ ಯೋಜನೆಗಳಲ್ಲೊಂದಾಗಿದೆ. 1957–58ರಲ್ಲಿ ಸುಮಾರು ರೂ. 60 ಲಕ್ಷ ಬೆಲೆಯ 113 ಆರ್ಡರುಗಳನ್ನು ದೊರಕಿಸಿ ಕೊಡುವ ಮೂಲಕ ಆರಂಭವಾದ

ಈ ಯೋಜನೆ 1975–76ರಲ್ಲಿ ಸುಮಾರು ರೂ. 76 ಕೋಟಿ ಬೆಲೆಯ 8,000 ಆರ್ಡರುಗಳನ್ನು ದೊರಕಿಸಿಕೊಟ್ಟಿತು. ಈಗ ವರ್ಷಕ್ಕೆ ರೂ. 80 ಕೋಟಿಗೂ ಮಿಗಿಲಾಗಿ ಸರಕಾರಿ ಆರ್ಡರುಗಳನ್ನು ಸಣ್ಣ ಕೈಗಾರಿಕೆಗಳಿಗೆ ದೊರಕಿಸಿಕೊಡುತ್ತಿದೆ. 1963 ರಲ್ಲಿ ಅತ್ಯಂತ ಹೆಚ್ಚಿನ ಸಂಖ್ಯೆಯ ರಕ್ಷಣಾ ಬೇಡಿಕೆಗಳನ್ನು ಪೂರೈಸಲು ಕೈಗೊಳ್ಳಲಾಯಿತು. ಆ ವರ್ಷ ಸಣ್ಣ ಕೈಗಾರಿಕೆಗಳು ತಮ್ಮ ಉತ್ಪಾದನೆಯ ಶೇ. 50 ರಷ್ಟನ್ನು ರಕ್ಷಣಾ ಅಗತ್ಯಗಳಿಗಾಗಿಯೇ ಒದಗಿಸಿದವು.

1956–58ರ ಮೊದಲಲ್ಲಿ ಸಣ್ಣ ಕೈಗಾರಿಕೆಗಳು ಕೇವಲ 74 ವಿಧದ ಸರಕುಗಳನ್ನು ಸರಬರಾಜು ಮಾಡಿದವು. ಇದರೊಡನೆ ಹೋಲಿಸಿ 1966–67ರ ಅವಧಿಯಲ್ಲಿ ಕಾಗದದ ಉತ್ಪಾದನೆಗಳು, ಜವಳಿ, ಪಾದರಕ್ಷೆ, ಯಾಂತ್ರಿಕ ಸಾಮಗ್ರಿಗಳು, ರಬ್ಬರು ಸಾಮಾನುಗಳು, ಮರ ಮತ್ತು ಮರದ ತಯಾರಿಕೆಗಳು, ರಾಸಾಯನಿಕ, ಸಾರಿಗೆ, ಮೆಷಿನರಿ ಸಾಮಾನುಗಳು, ಇತ್ಯಾದಿ 1,005 ವಿಧದ ವಸ್ತುಗಳ ಸರಬರಾಜು ನಡೆಯಿತು. 1972ನೆ ವರ್ಷದ ಅಂತ್ಯಕ್ಕೆ ಸಣ್ಣ ಕೈಗಾರಿಕೆಗಳು ಸುಮಾರು 100 ಕೋಟಿ ರೂ.ಗಳು ಆರ್ಡರ್ ಪಡೆದವು.

ಕೇಂದ್ರ ಸರಬರಾಜು ಖಾತೆಯ ಡೈರೆಕ್ಟರು ಆಹ್ವಾನಿಸುವ ಟೆಂಡರುಗಳಿಗೆ ಸಣ್ಣ ಕೈಗಾರಿಕೆಗಳಿಂದ ಬರುವ ಉತ್ಸಾಹೀ ಪ್ರತಿಕ್ರಿಯೆ ಈ ಕಾರ್ಯಕ್ರಮದ ಯಶಸ್ಸಿನ ಅತ್ಯುತ್ತಮ ಕೈಗನ್ನಡಿಯಾಗಿದೆ. ಈ ಟೆಂಡರುಗಳು ಶೇ. 85ಕ್ಕೆ ಸಣ್ಣ ಕೈಗಾರಿಕೆಗಳವರು ತಮ್ಮ ಮಾರಾಟ ಬೆಲೆ-ಪಟ್ಟಿಗಳನ್ನು ಕಳಿಸುತ್ತಾರೆ. ಇವುಗಳಲ್ಲಿ ಸುಮಾರು ಶೇ. 74ರಷ್ಟು ಟೆಂಡರು

ಆರ್ಡರುಗಳನ್ನು ಗಳಿಸುವುದರಲ್ಲಿ ಸಣ್ಣ ಉದ್ಯಮಗಳು ಯಶಸ್ವಿಯಾಗಿದೆ.

ಕಾರ್ಪೊರೇಷನ್ನಿನಲ್ಲಿ ದಾಖಲಾಗಿರುವ ಸುಮಾರು 20,000 ಸಣ್ಣ ಕೈಗಾರಿಕೆಗಳು ಟೆಂಡರು ಪತ್ರಗಳನ್ನು ಪುಕ್ಕಟೆಯಾಗಿ ಪಡೆಯುತ್ತವೆ. ಸಣ್ಣ ಕೈಗಾರಿಕೆಗಳಿಂದ ಕೊಳ್ಳಲಾದ ಸರಕುಗಳ ಹೆಚ್ಚಿನ ಭಾಗ ದಾಖಲಾತಿ ಪಡೆದ ಉದ್ಯಮಗಳಿಂದ ಬರುತ್ತಿದ್ದು ಅವು ಸರಬರಾಯಿ ಖಾತೆ ಕೊಳ್ಳುವ ಎಲ್ಲ ಸರಕುಗಳ ಶೇ. 90 ರಷ್ಟನ್ನು ಒದಗಿಸುತ್ತವೆ.

ಕೇಂದ್ರ ಸರಬರಾಜು ಇಲಾಖೆಯ ಮುಖಾಂತರವಲ್ಲದೆ, ನೇರವಾಗಿ ಸರಕುಗಳನ್ನು ಕೊಳ್ಳುವ ರೈಲ್ವೆ ಇಲಾಖೆ, ಅಂಚೆ ಮತ್ತು ತಂತಿ ಇಲಾಖೆ, ರಕ್ಷಣಾ ಉತ್ಪದನಾ ಕಾರ್ಖಾನೆಗಳು, ರಸ್ತೆ ಸಾರಿಗೆ ಸಂಸ್ಥೆ ಮುಂತಾದ ಸ್ವತಂತ್ರ ಸಾರ್ವಜನಿಕ ಸಂಸ್ಥೆಗಳೂ ಸಹ ಸಣ್ಣ ಕೈಗಾರಿಕೆಗಳಿಂದ ಸರಕುಗಳನ್ನು ಕೊಳ್ಳುವ ವ್ಯವಸ್ಥೆ ಮಾಡಿವೆ. 1951ರಲ್ಲಿ ಈ ಯೋಜನೆ ಆರಂಭವಾದಾಗಿನಿಂದ ವಿವಿಧ ರೈಲ್ವೆಗಳ ಸರಬರಾಯಿ ಪಟ್ಟಿಗಳಲ್ಲಿ ಇವುಗಳನ್ನು ದಾಖಲು ಮಾಡಿಸಿಕೊಂಡಿದು. ಈ ಕೈಗಾರಿಕೆಗಳಿಂದ ರೈಲ್ವೆಯವರು 1972ರ ಅಂತ್ಯದವರಿಗೆ ಮಾಡಿರುವ ವ್ಯಾಪಾರ ಸುಮಾರು 25 ಕೋಟಿ ರೂಪಾಯಿಗಳನ್ನು ಮೀರಿದೆ.

ಮಾರಾಟ ನೆರವು ಯೋಜನೆ

ಮಾರಾಟದ ಮೂರು ಹಂತಗಳಾದ ಒಟ್ಟಾರೆ ದಾಸ್ತಾನು, ಸರಕುಗಳ ಸಾಗಾಣಿಕೆ, ಹಾಗೂ ಚಿಲ್ಲರೆ ಮಾರಾಟವನ್ನು ಸುಲಭಗೊಳಿಸಲು ಸಣ್ಣ ಕೈಗಾರಿಕೆಗಳ ಉಪಯೋಗ

ಕ್ಕಾಗಿ ವಾಹನಗಳನ್ನು ಒದಗಿಸಲಾಗಿದೆ. ಈ ವಾಹನಗಳನ್ನು ಮಾರಾಟ ಸಂಶೋಧನೆ ಹಾಗೂ ಸಣ್ಣ ಕೈಗಾರಿಕೆಗಳ ಉತ್ಪನ್ನ ಗಳ ಪ್ರಚಾರಕ್ಕೂ ಬಳಸಲಾಗುತ್ತಿದೆ. ತಮ್ಮ ಸರಕುಗಳಿಗೆ ಪ್ರಮಾಣ ನಿಷ್ಕರ್ಷೆ, ಖಾತ್ರಿ ಗುಣವನ್ನು ಪ್ರಸಿದ್ಧಪಡಿಸುವ ವ್ಯವಹಾರ ನಾಮಗಳು ಹಾಗೂ ವಿಶಾಲ ಮಾರಾಟದ ಅವಕಾಶ ಇವುಗಳ ಕೊರತೆಯನ್ನು ನೀಗಲು ಕಾರ್ಪೊರೇಷನ್ ಕ್ರಮ ಗಳನ್ನು ಕೈಗೊಂಡಿದೆ. ಚರ್ಮದ ಪಾದರಕ್ಷೆಗಳು, ಬೀಗಗಳು, ಹತ್ತಿ ಬಟ್ಟೆಗಳು, ಮಣ್ಣಿನ ಸಾಮಾನುಗಳು—ಇವುಗಳಿಗಾಗಿ ದೊಡ್ಡ ದೊಡ್ಡ ದಾಸ್ತಾನಿನ ಡಿಪೋಗಳನ್ನು ತೆರೆಯಲಾಯಿತು. ಈ ಮಳಿಗೆಗಳು ರೂಪಿಸಿದ ನಿಷ್ಕರ್ಷೆಗೆ ಬದ್ಧವಾದ ಸರಕುಗಳಿ ಗೆಲ್ಲ ಮಾದರಿ ಹೆಸರುಗಳನ್ನು (brand names) ಕೊಡ ಲಾಯಿತು. ದೆಹಲಿ ಪ್ರದೇಶದ ಸಣ್ಣ ಕೈಗಾರಿಕೆಗಳ ಬೇಡಿಕೆ ಗಳನ್ನು ಪೂರೈಸಲು ಓಕ್ಲಾದಲ್ಲಿ ಒಂದು ಕಚ್ಚಾ ವಸ್ತುಗಳ ಮಳಿಗೆಯನ್ನು ಸ್ಥಾಪಿಸಿದೆ. ಈ ಮಳಿಗೆಯು ತಾಮ್ರ, ಸೀಸ, ತವರ, ಸತು ಮುಂತಾದ ಕಷ್ಟಲಭ್ಯವಾದ ಕಚ್ಚಾ ಸಾಮಗ್ರಿ ಗಳನ್ನು ತಯಾರಿಸಿಕೊಂಡು ನಿಗದಿಯಾದ ಪರವಾನಗಿಯ ಆಧಾರದ ಮೇಲೆ ಹಂಚುತ್ತದೆ. 1966-67ನೆಯ ವರ್ಷದಲ್ಲಿ 35 ಲಕ್ಷ 40 ಸಾವಿರ ರೂಪಾಯಿಗಳ ಬೆಲೆಯ ಕಚ್ಚಾ ಮಾಲನ್ನು ಹಂಚಲಾಯಿತು.

ಮೂಲವಸ್ತು ವಿನ್ಯಾಸ ತಯಾರಿಕೆ ಹಾಗೂ ತರಬೇತಿ

ಸಣ್ಣ ಕೈಗಾರಿಕೆಗಳಿಗೆ ಬೇಕಾದ, ತರಬೇಕಾದ ತಾಂತ್ರಿಕಜ್ಞರನ್ನು ತಯಾರುಮಾಡುವಾಗ ಹೊಸ ಉದ್ಯಮಿ ಗಳಿಗೆ ಬೇಕಾಗುವ ನವೀನ ಯೋಜನೆಗಳು, ನಕ್ಷೆಗಳು ಹಾಗೂ

ಉತ್ಪಾದನಾ ವಿಧಾನಗಳನ್ನು ನೆನಪಿನಲ್ಲಿಡಬೇಕಾಗುತ್ತದೆ. ಈ ದೃಷ್ಟಿಯಿಂದ ಅಮೆರಿಕ, ಜರ್ಮನಿ ಹಾಗೂ ಜಪಾನುಗಳಿಂದ ಬಂದಿದ್ದ ವಿವರವಾದ ಯೋಜನೆಗಳು ಹಾಗೂ ಸಹಯೋಗದ ಅವಕಾಶಗಳನ್ನು ಉಪಯೋಗಿಸಿಕೊಂಡು ದೇಶದಲ್ಲಿ ಮೂಲ ಯಂತ್ರ ವಿನ್ಯಾಸ ತಯಾರಿಕೆ ಹಾಗೂ ತರಬೇತಿ ಕೇಂದ್ರಗಳನ್ನು ಸ್ಥಾಪಿಸಲು ನಿರ್ಧರಿಸಲಾಯಿತು. ಇಂತಹ ಮೊದಲನೆಯ ಕೇಂದ್ರವನ್ನು ರಾಜಕೋಟ್‌ನಲ್ಲಿ ಅಮೆರಿಕದ ಸಹಾಯದಿಂದ ಆರಂಭಿಸಲಾಯಿತು. ಅನಂತರ ದಹಲಿಯ ಓಕ್ಲಾದಲ್ಲಿ (ಜರ್ಮನಿಯ ನೆರವಿಂದ) ಮತ್ತು ಹೌರಾದಲ್ಲಿ (ಜಪಾನಿನ ಸಹಾಯದಿಂದ) ಇಂತಹ ಕೇಂದ್ರಗಳನ್ನು ಸ್ಥಾಪಿಸಲಾಯಿತು. ಈ ಕೇಂದ್ರಗಳ ಸಾಮಾನ್ಯ ಗುರಿಗಳು ಈ ಕೆಳಕಂಡಂತಿವೆ :

(i) ಸಣ್ಣ ಕೈಗಾರಿಕೆಗಳಿಗೆ ಬೇಕಾಗುವ ಯಂತ್ರಗಳ ವಿನ್ಯಾಸ ಅಭಿವೃದ್ಧಿ ಹಾಗೂ ಮೂಲಪ್ರತಿ ತಯಾರಿಕೆ ;

(ii) ಈಗಿರುವ ಹಾಗೂ ಮುಂದೆ ಬೇಕಾಗುವ ಸಣ್ಣ ಕೈಗಾರಿಕೆಗಳ ಮೇಲ್ವಿಚಾರಕರ ಹಾಗೂ ಕುಶಲ ಕೆಲಸಗಾರರಿಗೆ ತೀವ್ರ ತರಬೇತಿ ನೀಡಿಕೆ ;

(iii) ಉತ್ಪಾದನಾ ತಂತ್ರಗಳು ಹಾಗೂ ವಿಧಾನಗಳಿಗೆ ಸಂಬಂಧಿಸಿದಂತೆ ಸಣ್ಣ ಕೈಗಾರಿಕೆಗಳಿಗೆ ಸಾಮಾನ್ಯ ಸೌಲಭ್ಯಗಳು ಹಾಗೂ ತಾಂತ್ರಿಕ ಸೇವೆಯನ್ನು ಒದಗಿಸುವುದು ;

ತರಬೇತಿ ನೀಡುವುದರ ಜೊತೆಗೆ ತಕ್ಕ ಉತ್ಪಾದನಾ ಕಾರ್ಯಕ್ರಮಗಳನ್ನು ಸಹ ಕೇಂದ್ರದ ಚಟುವಟಿಕೆಗಳಲ್ಲಿ

ಸೇರಿಸಲಾಗಿದೆ. ಅತ್ಯಾಧುನಿಕ ಉತ್ಪಾದನಾ ತಂತ್ರಗಳನ್ನು ಅಭ್ಯಾಸ ಮಾಡುವುದರ ಜೊತೆಗೆ ಅವುಗಳ ಬಗ್ಗೆ ತಾತ್ವಿಕ ಪರಿಜ್ಞಾನವನ್ನೂ ನೀಡುವುದು ತರಬೇತಿಯ ವೈಶಿಷ್ಟ್ಯ.

ಸಾಲ ಸೌಲಭ್ಯಗಳು

ಸುಲಭ ಬಡ್ಡಿ ದರದಲ್ಲಿ ಸಾಲ ದೊರೆಯದಿರುವುದು ನಮ್ಮ ದೇಶದ ಸಣ್ಣ ಕೈಗಾರಿಕೆಗಳ ಪ್ರಗತಿಯ ದಾರಿಯಲ್ಲಿ ಮುಖ್ಯ ಆತಂಕಗಳಲ್ಲೊಂದಾಗಿದೆ. ಸಣ್ಣ ಕೈಗಾರಿಕೆಗಳ ಬಂಡವಾಳಗಳು ಕೃಶವಾಗಿದ್ದು ದೀರ್ಘಾವಧಿ ಸಾಲಗಳನ್ನು ಎತ್ತಲು ಸಾಕಷ್ಟು ಆಸ್ತಿ – ಆಧಾರಗಳಿಲ್ಲದೆ ನಮ್ಮ ಉದ್ಯಮಗಳು ತೊಂದರೆ ಪಡುತ್ತಿವೆ.

ಈ ಪರಿಸ್ಥಿತಿಯನ್ನರಿತು ನಮ್ಮ ಸರ್ಕಾರವು ಕೆಲವು ನಿವಾರಣಾ ಕ್ರಮಗಳನ್ನು ಕೈಗೊಂಡಿದೆ. ಎಲ್ಲ ರಾಜ್ಯ ಸರ್ಕಾರಗಳೂ ರಿಜರ್ವ್ ಬ್ಯಾಂಕ್, ಇಂಡಸ್ಟ್ರಿಯಲ್ ಫೈನಾನ್ಸ್ ಕಾರ್ಪೊರೇಷನ್, ರಾಜ್ಯಗಳ ಸಣ್ಣಕೈಗಾರಿಕೆ ಅಭಿವೃದ್ಧಿ ಕಾರ್ಪೊರೇಷನ್ನುಗಳು, ಸ್ಟೇಟ್ ಬ್ಯಾಂಕ್ ಹಾಗೂ ಕೆಲವು ವಾಣಿಜ್ಯ ಬ್ಯಾಂಕುಗಳು ಸಾಲಗಳನ್ನು ನೀಡುವ ಮೂಲಕ ಈ ಪರಿಸ್ಥಿತಿಯನ್ನೆದುರಿಸಲು ನೆರವಾಗುತ್ತಿವೆ.

ಸಣ್ಣ ಉದ್ಯಮಗಳು ಪಡೆಯಬಹುದಾದ ಸೌಲಭ್ಯಗಳ ವಿವರಣೆ ಕೆಳಕಂಡಂತಿದೆ :

ರಾಜ್ಯದ ನೆರವು ಶಾಸನ

" ಕೈಗಾರಿಕೆಗಳಿಗಾಗಿ ರಾಜ್ಯದ ನೆರವು " ಶಾಸನದ ನೀತಿಯನ್ನು ಅನುಸರಿಸಿ ವಿವಿಧ ರಾಜಗಳು ದೇಶದ ಆರ್ಥಿಕ ಪ್ರಗತಿಗೆ

ನೆರವಾಗುವ ಕೈಗಾರಿಕೆಗಳಿಗೆ ಈ ಕೆಳಕಂಡಂತೆ ನೆರವು ನೀಡಬಹುದು.

(ಅ) ಹೊಸದಾಗಿ ಸ್ಥಾಪಿತವಾಗುವ ಕೈಗಾರಿಕೆಗಳು ;

(ಆ) ಅಲ್ಪವಾಗಿ ಅಭಿವೃದ್ಧಿಗೊಂಡಿರುವ ಕೈಗಾರಿಕೆಗಳು ಇರುವ ಪ್ರದೇಶದಲ್ಲಿ ಸ್ಥಾಪಿಸಲಾಗುವ ನೂತನ ಉದ್ಯಮಗಳು ;

(ಇ) ಗೃಹ ಕೈಗಾರಿಕೆಗಳು ಅಥವಾ ಸಣ್ಣ ಕೈಗಾರಿಕೆಗಳು ;

(ಈ) ಹಳೆಯ ಅಥವಾ ಹಿಂದೆ ಸ್ಥಾಪಿತವಾದ ಕೈಗಾರಿಕೆಗಳು.

ಸಣ್ಣ ಕೈಗಾರಿಕೆಗಳಿಗೆ ಸಾಲ ನೀಡುವಾಗ ಈ ಕೆಳಕಂಡ ನೀತಿಗಳನ್ನು ಗಮನದಲ್ಲಿಟ್ಟುಕೊಂಡು ನಿರ್ಧಾರ ಕೈಗೊಳ್ಳುತ್ತಾರೆ.

(i) ಸಾಮಾನ್ಯ ಮತ್ತು ದವಸದ ಗಿರಣಿಗಳು ಅಂದರೆ ಅಕ್ಕಿ, ಬೇಳೆ ಹಾಗೂ ಹಿಟ್ಟಿನ ಗಿರಣಿಗಳು ; ಅಗಸರ, ದರ್ಜಿಯವರ ಅಂಗಡಿ ಮುಂತಾದ ಉದ್ಯಮಗಳಿಗೆ ಸಾಲ ನೀಡಲಾಗುವುದಿಲ್ಲ.

(ii) ಅಗತ್ಯವಾಗಿ ಬೇಕಾಗುವ ನಿತ್ಯೋಪಯೋಗ ಪದಾರ್ಥಗಳನ್ನು ತಯಾರಿಸುವ ಅಥವಾ ದೊಡ್ಡ ಕೈಗಾರಿಕೆಗಳಿಗೆ ಬೇಕಾಗುವ ಬಿಡಿ ಯಂತ್ರ ಭಾಗಗಳನ್ನು ತಯಾರಿಸುವ ಕೈಗಾರಿಕೆಗಳಿಗೆ ಅಥವಾ ಪರದೇಶದಿಂದ ಆಯಾತ ಮಾಡಿಕೊಳ್ಳಬೇಕಾಗುವ ಅಥವಾ ಬಹಳ ದೂರದಿಂದ ಹೆಚ್ಚಿನ ಖರ್ಚಿನಲ್ಲಿ ತರಿಸಬೇಕಾಗಿರುವಂತಹ ವಸ್ತುಗಳನ್ನು ತಯಾರಿಸುವ ಹಾಗೂ ಉತ್ಪಾದನೆಗಳಿಗೆ ವಿಶೇಷ ನೆರವು,

ಪ್ರೋತ್ಸಾಹಗಳು ಅವಶ್ಯಕವಾಗಿರುವಂತಹ ಉದ್ಯಮಗಳಿಗೆ ಮಾತ್ರ ಸಾಲಗಳನ್ನು ನೀಡಲಾಗುತ್ತದೆ.

(iii) ಯೋಗ್ಯವಾದ ಹೊಸ ಕೈಗಾರಿಕೆಗಳಿಗೆ, ಈಗಿರುವ ಕೈಗಾರಿಕೆಗಳ ಅಗತ್ಯವಾದ ವಿಸ್ತರಣೆಗೆ ಇಂತಹ ವಿಶೇಷ ಮಹತ್ವದ ಸನ್ನಿವೇಶಗಳಲ್ಲಿ ಮಾತ್ರ ನಿರ್ವಹಣಾ ಬಂಡವಾಳಕ್ಕಾಗಿ ಸಾಲವನ್ನು ಕೊಡಲಾಗುತ್ತದೆ.

(iv) ಸ್ವಾವಲಂಬನೆ ಮತ್ತು ಸ್ವಯಂಪೂರ್ಣತೆಗೆ ಉದ್ದೇಶಿಸಿರುವ ಎಲ್ಲ ಯೋಗ್ಯ ಗೃಹಕೈಗಾರಿಕೆಗಳಿಗೂ ರಾಜ್ಯದ ನೆರವನ್ನು ನೀಡಲಾಗುತ್ತದೆ.

ಈ ಕಾಯದೆಯ ಪ್ರಕಾರ, ಜಮೀನಿನ ಖರೀದಿಗಾಗಿ, ಕಾರ್ಯಾಗಾರಗಳ ನಿರ್ಮಾಣಕ್ಕಾಗಿ, ಯಂತ್ರಗಳ ಖರೀದಿಗಾಗಿ, ನಿರ್ವಹಣಾ ಬಂಡವಾಳಕ್ಕಾಗಿ ಅಥವಾ ಮತ್ತಿತರ ಕಾರಣಗಳಿಗಾಗಿ ಸಾಲಗಳನ್ನು ಪಡೆಯಬಹುದು.

(1) ರೂ. 1,000ಗಳ ವರೆಗೆ ವೈಯುಕ್ತಿಕ ಕರಾರು ಪತ್ರದ ಆಧಾರದ ಮೇಲೆ ;

(2) ರೂ. 5,000ಗಳ ವರೆಗೆ ಇಬ್ಬರ ವೈಯುಕ್ತಿಕ ಆಧಾರ ಪತ್ರಗಳ ಮೇಲೆ ;

(3) ರೂ. 5,000 ಮೀರಿದ ಸಾಲಗಳನ್ನು ಆಸ್ತಿಗಳ ಆಧಾರದ ಮೇಲೆ ಅಡಮಾನವಿಟ್ಟು ಆಸ್ತಿಯ ಶೇ. 75 ರಷ್ಟನ್ನು ಸಾಲವಾಗಿ ಪಡೆಯಬಹುದು. ಯಾವ ಆಸ್ತಿಗಳನ್ನು ಪಡೆಯಲು ಸಾಲ ಕೇಳಲಾಗಿದೆಯೋ ಅದೂ ಸೇರಿದಂತೆ

ಜಮೀನು, ಕಟ್ಟಡಗಳು, ಯಂತ್ರ ಸಾಮಗ್ರಿಗಳು, ದಾಸ್ತಾನು ಮತ್ತಿತರ ಆಸ್ತಿಗಳನ್ನು ಆಧಾರವಾಗಿ ಸ್ವೀಕರಿಸಲಾಗುತ್ತದೆ.

ಬಡ್ಡಿದರ ಕೈಗಾರಿಕಾ ಸಹಕಾರಿ ಸಂಸ್ಥೆಗಳಿಗೆ ನೀಡುವ ಸಾಲಗಳಿಗೆ ಎರಡು ಲಕ್ಷ ರೂ.ಗಳವರೆಗೆ, ಶೇ. 3ರಂತೆಯೂ ಹಾಗೂ ವೈಯುಕ್ತಿಕ ಉದ್ಯಮಗಳಿಗೆ ನೀಡಲಾದ 25,000 ರೂ.ಗಳವರೆಗಿನ ಸಾಲಗಳಿಗೆ ಶೇ. 6ರಂತೆಯೂ ನಿಗದಿಯಾಗಿದೆ. ಸುಲಭ ಕಂತುಗಳಲ್ಲಿ ಸುಮಾರು ಹತ್ತು ವರ್ಷಗಳ ಅವಧಿಯಲ್ಲಿ ಸಾಲದ ಹಣವನ್ನು ಮರುಪಾವತಿ ಮಾಡಬಹುದು. ಹಲವಾರು ರಾಜ್ಯಗಳಲ್ಲಿ 2,000 ರೂ.ಗಳವರೆಗೂ ಸಾಲಗಳನ್ನು ಮಂಜೂರು ಮಾಡಲು ಜಿಲ್ಲಾ ಕೈಗಾರಿಕಾಧಿಕಾರಿಗಳಿಗೆ ಅಥವಾ ಜಿಲ್ಲಾ ಮ್ಯಾಜಿಸ್ಟ್ರೇಟರಿಗೆ ಅಧಿಕಾರ ನೀಡಲಾಗುವ ಸಲುವಾಗಿ ಅವುಗಳ ಷೇರು ಬಂಡವಾಳದ ಶೇ. 75ರಷ್ಟನ್ನು ದ್ವೈವಾರ್ಷಿಕ ಸಾಲರೂಪವಾಗಿ ಕೇಂದ್ರಸರ್ಕಾರವು ನೀಡುತ್ತದೆ. ಉಳಿದ ಹಣವನ್ನು ರಾಜ್ಯಸರಕಾರಗಳ ಮೂಲಕ ಅಥವಾ ಬೇರೆ ಮೂಲ ಗಳಿಂದ ಒಟ್ಟುಗೂಡಿಸಬಹುದಾಗಿದೆ.

ಅರ್ಹ ಕೈಗಾರಿಕೋದ್ಯಮಗಳಿಗೆ ನೆರವನ್ನು ಕೆಳಕಂಡ ಯಾವುದಾದರೊಂದು ಅಥವಾ ಎಲ್ಲ ವಿಧಗಳಲ್ಲಿಯೂ ನೀಡ ಬಹುದು.

(i) ನಗದು ಹಣ ನೀಡುವುದು ;

(ii) ನಗದು ಸಾಲದ ಭರವಸೆ ನೀಡುವುದರಿಂದ ಅಥವಾ ಓವರ್‌ಡ್ರಾಫ್ಟ್ ಅಥವಾ ಬ್ಯಾಂಕಿನ ನಿಖರ ಸಾಲದ ರೂಪವಾಗಿ ನೀಡುವುದು ;

(iii) ಸಂಶೋಧನೆಯ ಉದ್ದೇಶಕ್ಕಾಗಿ ಅಥವಾ ಸಾಧನ ಸಾಮಗ್ರಿಗಳ ಅಥವಾ ಯಂತ್ರಗಳ ಖರೀದಿಗಾಗಿ ಅಥವಾ ಮತ್ತಿತರ ನಿರ್ದಿಷ್ಟ ಕಾರಣಕ್ಕಾಗಿ ಸಹಾಯ ಧನವನ್ನು ನೀಡುವುದು ;

(iv) ಷೇರು ಅಥವಾ ಡಿಬೆಂಚರುಗಳನ್ನು ಕೊಳ್ಳುವುದು ;

(v) ಕಂಪೆನಿಗಳ ಪೂರ್ತ ಅಥವಾ ಭಾಗಶಃ ಬಂಡವಾಳದ ಮೇಲಿನ ಆದಾಯಕ್ಕೆ ಭರವಸೆ ಕೊಡುವುದು ;

(vi) ರಾಜ್ಯ ಸ್ವತ್ತುಗಳಾದ ಜಮೀನು, ಮರ, ನೀರು ಮತ್ತು ಕಚ್ಚಾಪದಾರ್ಥಗಳನ್ನು ಸರಳ ದರಗಳಲ್ಲಿ ನೀಡುವುದು ;

(vii) ವಿದ್ಯುಚ್ಛಕ್ತಿಯನ್ನು ರಾಜ್ಯಸ್ವತ್ತಾಗಿ ಎರಡನೆಯ ಪಂಚವಾರ್ಷಿಕ ಯೋಜನೆಯಲ್ಲಿ 12.91 ಕೋಟಿ ರೂ.ಗಳನ್ನೂ, ಮೂರನೆಯ ಯೋಜನೆಯ ಅವಧಿಯಲ್ಲಿ 17.60 ಕೋಟಿ ರೂ.ಗಳನ್ನು ವಿತರಣೆ ಮಾಡಲಾಯಿತು.

4. ರಾಜ್ಯ ಹಣಕಾಸು ಕಾರ್ಪೊರೇಷನ್ನುಗಳು

1951ರಲ್ಲಿ ಶಾಸನದ ಪ್ರಕಾರ ಸ್ಥಾಪಿತವಾದ ರಾಜ್ಯ ಹಣಕಾಸು ಕಾರ್ಪೊರೇಷನ್ನುಗಳನ್ನು ದೇಶದ ಎಲ್ಲಾ ರಾಜ್ಯಗಳಲ್ಲಿಯೂ ಕಾರ್ಯಾಚರಣೆಯಲ್ಲಿವೆ. ಈ ಕಾರ್ಪೊರೇಷನ್ನುಗಳು ಸಾಮಾನ್ಯವಾಗಿ ದೀರ್ಘಾವಧಿ ಮತ್ತು ಅಲ್ಪಾವಧಿ ಸಾಲಗಳನ್ನು ಸಣ್ಣ ಮತ್ತು ಮಧ್ಯಮ ವರ್ಗದ ಕೈಗಾರಿಕೆಗಳಿಗೆ ನೀಡುತ್ತವೆ. ಬಡ್ಡಿ ದರ ಶೇ. $8\frac{1}{2}$ ರಿಂದ $9\frac{1}{2}$ ಇದ್ದು ಸಕಾಲಿಕವಾದ ಪಾವತಿಯಾದರೆ ಶೇ. $\frac{1}{2}$ ರಷ್ಟು ರಿಯಾಯಿತಿ ಕೊಡಲಾಗುತ್ತದೆ. ಸಾಮಾನ್ಯವಾಗಿ ಒಂದೊಂದು ಉದ್ಯಮಕ್ಕೆ 25,000 ರೂ.ಗಳಿಂದ 10 ಲಕ್ಷ ರೂ.ಗಳವರೆಗೂ, ಉದ್ಯಮದ ಅಡಮಾನವಿಟ್ಟ ಸ್ಥಿರ ಸ್ವತ್ತುಗಳ ಮೌಲ್ಯದ ಶೇ. 50 ರಿಂದ ಶೇ. 75 ರಷ್ಟು ಹಣವನ್ನು ಸಾಲವಾಗಿ ಕೊಡಲಾಗುತ್ತೆ. ಸಾಲದ ಬಡ್ಡಿ ಅಲ್ಲದೆ ಅದರ ಸಲುವಾಗಿ ತಗಲುವ ರಿಜಿಸ್ಟ್ರೇಷನ್ ಪತ್ರಗಳ ದಾಖಲೆ ಖರ್ಚು ಇತ್ಯಾದಿ ಸಾಲಪಡೆಯುವವರಿಂದಲೇ ವಸೂಲು ಮಾಡಲಾಗುತ್ತದೆ.

ಈ ಕಾರ್ಪೊರೇಷನ್ನುಗಳು ಕೆಳಕಂಡಂತೆ ವ್ಯವಹಾರ ಮಾಡುವ ಅಧಿಕಾರವನ್ನು ಪಡೆದಿವೆ :

(i) ಕೈಗಾರಿಕೋದ್ಯಮಗಳಿಗೆ ಸಾಲ ನೀಡುವುದು, ಅವುಗಳ ಷೇರು ಬಂಡವಾಳದಲ್ಲಿ ಭಾಗವಹಿಸುವುದು ; ಈ ರೀತಿ ನೀಡಿದ ಸಾಲ ಅಥವಾ ನೆರವು

30 ವರುಷ ಅವಧಿಯುಲ್ಲಿ ಮರುಪಾವತಿಯಾಗ ತಕ್ಕದ್ದು.

(ii) ಕೈಗಾರಿಕೆಗಳು ಕಾರ್ಪೊರೇಷನ್ ಅಂಗೀಕರಿಸಿದ ಅಥವಾ ಒಪ್ಪಿಕೊಂಡ ಪರತ್ತುಗಳ ಮೇಲೆ ಮಾಡಿ ಕೊಂಡ ಸಾಲಗಳು (20 ವರುಷಗಳೊಳಗೆ ಮರು ಪಾವತಿ ಯಾಗುವಂತಹವು) ಮತ್ತು ಬಂಡವಾಳ ಮಾರುಕಟ್ಟೆಯಿಂದ (ಷೇರು) ಪಡೆದ ಸಾಲಗಳಿ ಗಾಗಿ ಭರವಸೆ ಕೊಡುವುದು ;

(iii) ಕೈಗಾರಿಕೋದ್ಯಮಗಳಿಗೆ ಬಂಡವಾಳಕ್ಕಾಗಿ ಷೇರು, ಡಿಬೆಂಚೆರುಗಳಲ್ಲಿ ಭಾಗವಹಿಸಿ ಅಂತಹ ಬಂಡವಾಳ ಪತ್ರಗಳು ಏಳು ವರ್ಷಗಳ ಅವಧಿಯುಲ್ಲಿ ವಿಕ್ರಯ ವಾಗುವ ಸಾಧ್ಯತೆಯಿದ್ದಲ್ಲಿ ನೆರವು ನೀಡುವುದು ;

(iv) ಕೇಂದ್ರ ಅಥವಾ ರಾಜ್ಯಸರಕಾರವು ಕೈಗಾರಿಕೆ ಗಳಿಗೆ ನೀಡಿದ ಸಾಲಗಳ ವಿಷಯದಲ್ಲಿಯೂ ಷೇರು. ಡಿಬೆಂಚರು ರೂಪದಲ್ಲಿ ನೀಡಿದ ನೆರವಿನ ವಿಷಯ ದಲ್ಲಿಯೂ ಅಗತ್ಯವಾದಾಗ ದಳ್ಳಾಳಿಯಂತೆ ವ್ಯವಹರಿಸುವುದು ;

ಕಾರ್ಪೊರೇಷನ್ನುಗಳು ನೀಡುವ ಸಾಲಗಳಲ್ಲಿ ಅಲ್ಪಾವಧಿ ಸಾಲಗಳಿಗೂ ಮತ್ತು ದೀರ್ಘಾವಧಿ ಸಾಲಗಳಿಗೂ ಒಂದು ನಿಖರವಾದ ಪ್ರಮಾಣವಿರುತ್ತದೆ. ಬಂಡವಾಳದಲ್ಲಿ ಪಾಲು ದಾರಿಕೆಗಾಗಿ ಇದುವರೆವಿಗೂ ನೀಡಿದ ನೆರವು ಮತ್ತು ಆಧಾರ ಬಹಳ ಅಲ್ಪವೇ ಆಗಿದೆ.

ರಾಜ್ಯ ಹಣಕಾಸು ಕಾರ್ಪೊರೇಷನ್‌ಗಳು ಕಾಯಿದೆ ಪ್ರಕಾರ 20 ವರ್ಷಗಳ ಅವಧಿಯ ಸಾಲವನ್ನು ನೀಡಬಹುದಾದರೂ, ಅವುಗಳು ಆಚರಣೆಯಲ್ಲಿ ಕೇವಲ 10–12 ವರ್ಷಗಳ ಅವಧಿಗೆ ಮಾತ್ರ ಸಾಲ ನೀಡುತ್ತಿವೆ. ಸಾಲ ನೀಡಿದ ಎರಡು ವರ್ಷಗಳ ಅನಂತರ ಮೊದಲನೆಯ ಕಂತು ಪಾವತಿಯಾಗಬೇಕಾಗುತ್ತವೆ.

1972ರ ಅಂತ್ಯದ ವೇಳೆಗೆ ಸುಮಾರು 15 ಸಾವಿರ ವಿವಿಧ ಸಣ್ಣ ಉದ್ಯಮಗಳಿಗೆ 140 ಕೋಟಿ ರೂ. ಸಾಲವನ್ನು ಮಂಜೂರು ಮಾಡಿ ಹಂಚಲಾಗಿದೆ. 1974 ರ ವರ್ಷಕ್ಕೆ 453 ಕೋಟಿಗಳು 1975ರ ವರ್ಷಕ್ಕೆ 593 ಕೋಟಿ ರೂಪಾಯಿಗಳನ್ನು ಹಂಚಲಾಗಿದೆ.

ಈ ರಾಜ್ಯ ಹಣಕಾಸು ಕಾರ್ಪೊರೇಷನ್ನುಗಳು ಸಣ್ಣ ಕೈಗಾರಿಕೆಗಳಿಗಿಂತ ಮಧ್ಯಮ ವರ್ಗದ ದೊಡ್ಡದಾದ ಉದ್ಯಮಗಳನ್ನೇ ಮೇಲಾಗಿ ಕಂಡು ಅವುಗಳಿಗೇ ಹೆಚ್ಚಿನ ಸಾಲಗಳನ್ನು ನೀಡುವ ರೂಢಿ ಇಟ್ಟುಕೊಂಡಿರುವುದರಿಂದ ನಿಜವಾಗಿ ಸಹಾಯ ಬೇಕಾದ ಕಿರಿಯ ಕೈಗಾರಿಕೆಗಳಿಗೆ ಯಾವ ಸಹಾಯವೂ ದೊರೆಯದಾಗಿದೆ. ಬೇರೆ ಉಪಾಯವಿಲ್ಲದೆ ಹೆಚ್ಚು ಬಡ್ಡಿಯನ್ನು ಕೊಟ್ಟು ತಮ್ಮ ಮಟ್ಟಿಗೆ ಕಾಲತಳ್ಳಬೇಕಾಗಿದೆ.

ಅಲ್ಲದೆ, ಈವರೆಗೆ ಇವು ನೀಡಿರುವ ಸಾಲಗಳನ್ನು ಪರಿಶೀಲಿಸಿದರೆ, ಈಚೆಗೆ ಸ್ಥಾಪಿಸಲ್ಪಟ್ಟ ಸುಧಾರಿತ ಮತ್ತು ನವೀನ ಕೈಗಾರಿಕೆಗಳಿಗಿಂತ, ಸಾಂಪ್ರದಾಯಿಕ ಅಥವಾ ಸಾಮಾನ್ಯ ಉದ್ಯಮಗಳಾದ ಎಣ್ಣೆ ಗಿರಣಿ, ಹತ್ತಿಗಿರಣಿ, ಬಟ್ಟೆ ಕಾರ್ಖಾನೆ,

ಮುಂತಾದವುಗಳಿಗೇ ಪ್ರೋತ್ಸಾಹ ಕೊಟ್ಟಿರುವುದು ವ್ಯಕ್ತವಾಗುತ್ತದೆ. ಯಂತ್ರ ಮತ್ತು ಯಂತ್ರ ಸಾಮಗ್ರಿಗಳು, ಲೋಹ ಸಂಬಂಧ ತಯಾರಿಕೆಗಳು, ವಿದ್ಯುಚ್ಛಕ್ತಿ ಕೈಗಾರಿಕೆಗಳು, ರಸಾಯನಿಕ ಸಾಮಗ್ರಿಗಳು—ಈ ಉದ್ಯಮಗಳಿಗೆ ದಕ್ಕಿರುವ ಸಹಾಯ ಪ್ರೋತ್ಸಾಹಗಳು ಅತ್ಯಲ್ಪವೇ ಆಗಿವೆ.

ರಾಜ್ಯ ಹಣಕಾಸು ಕಾರ್ಪೊರೇಷನ್ನುಗಳು ಸಣ್ಣ ಕೈಗಾರಿಕೆಗಳಿಗೆ ನೀಡಲು ಹಾಕುವ ಹರತ್ತುಗಳು, ಬೇಡುವ ಆಧಾರಗಳು ಮತ್ತು ನಿರ್ಬಂಧಗಳು ನಿಲುಕಲಾರದಷ್ಟು ಕಠಿಣವಾಗಿದ್ದು, ಅತ್ಯಂತ ವಿಳಂಬ ಕ್ರಮ ಕಾರ್ಯಾಚರಣೆಗಳಿಂದ ಬಹಳ ಕಷ್ಟಕರವಾಗಿ ಪರಿಣಮಿಸುತ್ತಿದ್ದವು. ಈ ವಿಷಯದಲ್ಲಿ ರಿಜರ್ವ್ ಬ್ಯಾಂಕಿನವರು ಮಾಡಿದ ಶಿಫಾರಸುಗಳನ್ನು ಕೂಡ ಅನುಸರಿಸುತ್ತಿಲ್ಲ. ಆಧಾರ ದೃಷ್ಟಿಯಿಂದಲೇ ವ್ಯವಹರಿಸುವುದರಿಂದ ಈ ಕಾರ್ಪೊರೇಷನ್‌ಗಳಿಂದ ನಿರೀಕ್ಷಿಸಿದ ಪ್ರೋತ್ಸಾಹಕ ನೀತಿಯು ಕಂಡುಬರುತ್ತಿರಲಿಲ್ಲ. ಈಗ ಅವುಗಳೂ ತಮ್ಮ ಷರತ್ತು ಮತ್ತು ನಿಯಮಗಳನ್ನು ಸಡಿಲಿಸಿ ಸಾಕಷ್ಟು ನೆರವು ನೀಡುತ್ತಿವೆ.

5. ಸ್ಟೇಟ್ ಬ್ಯಾಂಕ್ ಮತ್ತು ಅದರ ಅಂಗ ಸಂಸ್ಥೆಗಳು

ಸಣ್ಣ ಕೈಗಾರಿಕೆಗಳು ಪಡುತ್ತಿರುವ ಆರ್ಥಿಕ ಮುಗ್ಗಟ್ಟನ್ನು ಎದುರಿಸಲು ಸಹಾಯವಾಗುವಂತೆ ಸ್ಟೇಟ್ ಬ್ಯಾಂಕ್ ಇಂಡಿಯಾ 1956ನೇ ಏಪ್ರಿಲ್ ತಿಂಗಳಲ್ಲಿ ಒಂದು ಸುಲಭ ರೀತಿಯ ಸಾಲ ಯೋಜನೆಯನ್ನು ಕೆಲವು ತನ್ನ ಚುನಾಯಿತ ಕೇಂದ್ರಗಳಲ್ಲಿ ಜಾರಿಗೆ ತಂದಿತು. ಈಗ ಈ ಯೋಜನೆ ಆ ಬ್ಯಾಂಕಿನ ಎಲ್ಲಾ ಅಂಗ ಸಂಸ್ಥೆಗಳಲ್ಲಿಯೂ ಜಾರಿಯಲ್ಲಿದೆ. ಅಕ್ಕಿ, ಬೇಳೆ, ಹಿಟ್ಟು ಮತ್ತು ಎಣ್ಣೆ ಗಿರಣಿ ಮುಂತಾದ ಸಾಂಪ್ರದಾಯಿಕ ಕೈಗಾರಿಕೆಗಳಿಗೆ ಈ ಯೋಜನೆ ಅನ್ವಯಿಸುವುದಿಲ್ಲ. ಅದರ ವಿವರಗಳು ಈ ರೀತಿ ಇವೆ :

(1) ಕಚ್ಚಾ ಪದಾರ್ಥಗಳನ್ನು ಒಟ್ಟಾರೆ ಕೊಂಡು, ಶೇಖರಿಸಿ, ಉಪಯೋಗಿಸುವ ಕೈಗಾರಿಕೆಗಳಿಗೆ ಈ ಕಚ್ಚಾ ಮಾಲಿನ ಆಧಾರದ ಮೇಲೆಯೇ ಸಾಲ ನೀಡುವುದು ; ತಯಾರಾದ ಸಾಮಾನುಗಳನ್ನು ಆಧಾರ ಮಾಡಿದಾಗ ಅವುಗಳ ಗುಣ ಪ್ರಮಾಣ ಹಾಗೂ ಮಾರಾಟ ಬೆಲೆಗಳನ್ನು ಪರಿಗಣಿಸಿ ಸಾಲ ಕೊಡುವುದು ;

(2) ಕಚ್ಚಾ ಮಾಲುಗಳನ್ನು ಒಟ್ಟಾರೆ ಕೊಳ್ಳಲಾಗದ ಅಥವಾ ಅಂತಹ ಸರಕನ್ನು ಬ್ಯಾಂಕಿನ ವಶದಲ್ಲಿ ಇರಿಸಲು ಅನುಕೂಲವಾಗಿಲ್ಲದಿದ್ದರೆ ಕಾರ್ಖಾನೆಯ ಸರಕುಗಳ ಆಧಾರದ

ಮೇಲೆ ಮುಂಗಡ ಹಣ ಅಥವಾ ಸಾಲ ನೀಡಲಾಗುವುದು. ಈ ಸರಕುಗಳ ಬೆಲೆಯನ್ನು ಗಣನೆಗೆ ತೆಗೆದುಕೊಂಡು ಸಾಲ ನೀಡಲಾಗುವುದರಿಂದ ಸಂಬಂಧಪಟ್ಟ ಲೆಕ್ಕ, ಉಗ್ರಾಣದಾಖಲೆಗಳು ಸರಿಯಾಗಿರಬೇಕು. ಈ ರೀತಿ ಸಾಮಾನುಗಳ ಮೇಲೆ ಸಾಲ ನೀಡಿದ ರುಜುವಾತಿಗಾಗಿ ಕೈಗಾರಿಕೆಯ ಗೇಟಿನ ಅಥವಾ ಅದಕ್ಕೆ ಸಂಬಂಧಿಸಿದ ಸಾಮಾನುಗಳಿರುವ ಕೊಠಡಿಯ ಬಾಗಿಲಿನ ಮೇಲೆ ಬ್ಯಾಂಕಿನ ನಾಮಫಲಕ ಇರುತ್ತದೆ. ಕೆಲವು ಸಂದರ್ಭಗಳಲ್ಲಿ ಬ್ಯಾಂಕಿನ ಪರವಾಗಿ ಕಾವಲುಗಾರನೊಬ್ಬನನ್ನು ನೇಮಿಸಲಾಗುತ್ತದೆ.

(3) ತಯಾರಾದ ಸರಕುಗಳನ್ನು ಸರಬರಾಜು ಮಾಡಿದ ಬಿಲ್ಲುಗಳ ಆಧಾರದ ಮೇಲೆಯೂ ಸಾಲಗಳನ್ನು ನೀಡಲಾಗುತ್ತದೆ.

(4) ಆಧಾರಕ್ಕಾಗಿ ಕೊಡುವಂತಹದು ಏನೂ ಇಲ್ಲದೆ ಇದ್ದರೆ, ತನ್ನ ಎಲ್ಲ ಹಣವನ್ನು ಬಂಡವಾಳದ ಮೇಲೆ ಹಾಕಿ, ನಿರ್ವಹಣೆಗಾಗಿ ಹಣವಿಲ್ಲದೆ ಕಷ್ಟದಲ್ಲಿರುವ ಕೈಗಾರಿಕೆಗಳಿಗೆ ಯಂತ್ರಗಳ ಮತ್ತು ಚಿರಸ್ವತ್ತುಗಳ ಆಧಾರ, ಜಂಟಿ ಅಥವಾ ವೈಯಕ್ತಿಕ ಆಧಾರದ ಮೇಲೆ ಸಾಲವನ್ನು ಮಂಜೂರು ಮಾಡಲಾಗುತ್ತದೆ.

(5) ಕಚ್ಚಾಪದಾರ್ಥಗಳನ್ನು ಕೊಳ್ಳಲು ಸಹಾಯವಾಗುವಂತೆ ಬ್ಯಾಂಕು ಸಾಲ ಪತ್ರಗಳನ್ನು ನೀಡುವುದು. ಅವಶ್ಯವಿದ್ದಲ್ಲಿ ಸರಬರಾಜುದಾರರಿಗೆ ಮುಂಗಡ ಹಣ ಪಾವತಿಮಾಡಿ ಕಚ್ಚಾಮಾಲು ಕೊಳ್ಳುವುದರಲ್ಲಿ ನೆರ

ವಾಗುತ್ತದೆ. ಆದರೆ ಅದಕ್ಕೆ ತಕ್ಕಂತೆ ಸ್ವಲ್ಪ ಮುಂಗಡ ಹಣವನ್ನು ಕೈಗಾರಿಕೆಗಳು ಬ್ಯಾಂಕಿನಲ್ಲಿ ಡಿಪಾಜಿಟ್ ಮಾಡಬೇಕಾಗುತ್ತದೆ.

ಈ ಸಾಲಗಳಿಗೆ ವಿಧಿಸಲಾಗುವ ಬಡ್ಡಿದರಗಳು ಸ್ಟೇಟ್ ಬ್ಯಾಂಕಿನ ಇತರ ಸಾಲಗಳ ಮೇಲಿನ ಬಡ್ಡಿದರಗಳಿಗಿಂತ ಸಣ್ಣ ಕೈಗಾರಿಕೆಗಳಿಗೆ ಕಡಿಮೆ ದರಗಳಲ್ಲಿ ಇರುತ್ತವೆ.

1975ನೆಯ ವರ್ಷದ ಅಂತ್ಯಕ್ಕೆ ಸುಮಾರು 526 ಕೋಟಿ ರೂಪಾಯಿಗಳನ್ನು 232000 ಸಣ್ಣ ಕೈಗಾರಿಗಳಿಗೆ ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ ಮತ್ತು ಅದರ ಅಂಗ ಸಂಸ್ಥೆಗಳು ಸಾಲವಾಗಿ ಕೊಟ್ಟಿವೆ.

ತಾಂತ್ರಿಕ ಅರ್ಹತೆಯುಳ್ಳ ಉದ್ಯಮಗಾರರಿಗೆ ನೆರವು

ತಾಂತ್ರಿಕ ಅರ್ಹತೆಯನ್ನು ಪಡೆದು, ಸಣ್ಣ ಕೈಗಾರಿಕೆಗಳನ್ನು ಸ್ಥಾಪಿಸುವ ಉತ್ಸಾಹಿಗಳಿಗೆ ನೆರವಾಗುವಂತೆ ಸ್ಟೇಟ್ ಬ್ಯಾಂಕ್ ಒಂದು ಯೋಜನೆಯನ್ನು ಜಾರಿಗೆ ತಂದಿದೆ. ಉದ್ಯಮ ಜ್ಞಾನ ಮತ್ತು ನಿರ್ವಹಣೆಯ ಅನುಭವವುಳ್ಳ ಚಾರಿತ್ರ್ಯವುಳ್ಳ ಗುಣಶೀಲರಾದಂತಹ ಉದ್ಯಮಿಗಳೇ ಈ ಯೋಜನೆಯ ಲಾಭ ಪಡೆಯಲು ಅರ್ಹರು. ಆಧಾರ ಮುಖ್ಯವಲ್ಲ. ತಮ್ಮದೇ ಆದ ಉದ್ಯಮಗಳನ್ನು ಇಂಡಸ್ಟ್ರಿಯಲ್ ಎಸ್ಟೇಟುಗಳಲ್ಲಿ ಸ್ಥಾಪಿಸುವುದಕ್ಕಾಗಲೀ ಅಥವಾ ಸ್ಥಾಪಿಸಿದ ಉದ್ಯಮಗಳನ್ನು ನಡೆಸುವುದಕ್ಕಾಗಲೀ ಮೂರು ಲಕ್ಷ ರೂ. ವರೆಗೆ ಸ್ಟೇಟ್ ಬ್ಯಾಂಕ್ ಸಾಲವನ್ನು ನೀಡುತ್ತದೆ.

ಈ ಯೋಜನೆಯ ಪ್ರಕಾರ ಉದ್ಯಮಿಗಳಿಗೆ ಯಂತ್ರೋಪಕರಣಗಳನ್ನು ಕೊಳ್ಳಲು ಕಂತಿನ ಸಾಲ;. ಬಂಡವಾಳಕ್ಕಾಗಿ ಮಧ್ಯಮಾವಧಿ ಸಾಲ ; ನಿತ್ಯವು ವೆಚ್ಚಕ್ಕಾಗಿ ನಿರ್ವಹಣ ಸಾಲ-ಇವುಗಳಲ್ಲಿ ಯಾವ ರೂಪದಲ್ಲಿಯೂ ನೆರವನ್ನು ನೀಡಬಹುದು.

ಸಾಮಾನ್ಯವಾಗಿ ದೇಶ ರಕ್ಷಣಾ ಕಾರ್ಯಕ್ಕೆ ಉತ್ಪಾದನೆ, ವಿನಿಮಯ (foreign exchange) ವನ್ನು ಗಳಿಸುವ, ರಫ್ತು ತಯಾರಿಕೆಗಳ ಉದ್ಯಮಗಳಾಗಿರಬೇಕು ಬ್ಯಾಂಕಿನವರು ಗೊತ್ತು ಮಾಡಿದ ಕ್ರಮವನ್ನನುಸರಿಸಿ, ಪ್ರಾಮುಖ್ಯಕ್ಕೆ ಅನುಗುಣವಾಗಿರಬೇಕು. ಅಲ್ಲದೆ ದೇಶೀಯ ಕಚ್ಚಾ ಮಾಲುಗಳನ್ನೇ ಬಳಸಿಕೊಂಡು ವ್ಯವಸಾಯೋದ್ಯಮಕ್ಕೆ ಮತ್ತು ಕೈಗಾರಿಕಾ ಅಭಿವೃದ್ಧಿಗೆ ಆಸರೆಯಾಗುವಂತಹ ಉದ್ಯಮಗಳಾಗಿರಬೇಕು.

ಇದುವರೆಗೆ ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ ಸುಮಾರು ಏಳೂವರೆ ಕೋಟಿ ರೂ. ಗಳನ್ನು ತಾಂತ್ರಿಕ ಅರ್ಹತೆಯುಳ್ಳ ಅಂತಹ ಸುಮಾರು 1300 ಜನರಿಗೆ ಸಾಲ ನೀಡಿ ಸಹಾಯಮಾಡಿದೆ.

ವಾಣಿಜ್ಯ ಬ್ಯಾಂಕುಗಳು ಮತ್ತು ಕೈಗಾರಿಕಾ ಸಹಕಾರಿ ಬ್ಯಾಂಕುಗಳು

ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ ಉಳಿದು ಇತರ ವಾಣಿಜ್ಯ ಬ್ಯಾಂಕುಗಳು ಕೊಡುವ ಸಾಲ ಸೌಲಭ್ಯಗಳು ಸಾಂಪ್ರದಾಯಿಕ ಕೈಗಾರಿಕೆಗಳಾದ ಅಕ್ಕಿ, ಬೇಳೆ, ಹಿಟ್ಟು ಮತ್ತು ಎಣ್ಣೆ ಗಿರಣಿ ಮುಂತಾದವುಗಳಿಗೆ ಹೆಚ್ಚು ದೊರೆತಿದೆ. ಇತ್ತೀಚೆಗೆ ರಿಜರ್ವ್ ಬ್ಯಾಂಕಿನ ಸೂಚನೆಯಂತೆ ಆಧುನಿಕ ಸಣ್ಣ

ಕೈಗಾರಿಕೆಗಳಿಗೆ ಹೆಚ್ಚಿನ ಪ್ರಮಾಣದಲ್ಲಿ ಸಾಲ ಕೊಡಲು ಅಷ್ಟೆ ಸಹ ಮುಂದೆ ಬಂದಿದೆ, ಇದರಿಂದ ಸಣ್ಣ ಪ್ರಮಾಣದ ಕೈಗಾರಿಕೆಗಳು ಗಣನೀಯವಾಗಿ ಅಭಿವೃದ್ಧಿ ಹೊಂದಲು ಅವಕಾಶ ವಾಗಿದೆ. ಅವುಗಳು 1972ರ ಅಂತ್ಯಕ್ಕೆ ಸುಮಾರು 105 ಕೋಟಿ ರೂ.ಗಳನ್ನು ಸಾಲವಾಗಿ ಕೊಟ್ಟಿದೆ. ರಾಷ್ಟ್ರೀಕೃತ ಬ್ಯಾಂಕುಗಳೂ ಈ ವೇಳೆಗೆ ಸುಮಾರು 500 ಕೋಟಿ ರೂ. ಗಳನ್ನು ಕೊಟ್ಟು ಸಣ್ಣ ಕೈಗಾರಿಕೆಗಳ ಬೆಳವಣಿಗೆಗೆ ಕಾರಣ ವಾಗಿವೆ.

ಒಂದೆರಡು ರಾಜ್ಯಗಳಲ್ಲಿ ಕೆಲವು ಕೈಗಾರಿಕಾ ಸಹಕಾರಿ ಬ್ಯಾಂಕುಗಳು ಸಣ್ಣ ಕೈಗಾರಿಕೆಗಳಿಗೆ ಸಾಲ ನೀಡುವ ಆಸಕ್ತಿಯನ್ನು ತೋರಿಸಿದರೂ ಖಾಸಗಿ ಉದ್ಯಮಿಗಳಿಗೆ ದೊರೆತ ಸಹಾಯ ಸೌಲಭ್ಯಗಳು ಬಹಳ ಅಲ್ಪವೇ ಆಗಿವೆ. ಮೈಸೂರು ರಾಜ್ಯ ಕೈಗಾರಿಕಾ ಸಹಕಾರೀ ಬ್ಯಾಂಕ್ ಜಿಲ್ಲಾ ಸಹಕಾರಿ ಬ್ಯಾಂಕುಗಳ ಮೂಲಕ ಸಣ್ಣ ಕೈಗಾರಿಕೆಗಳಿಗೆ ಸಾಲ ನೀಡುತ್ತಿದೆ. ಒಬ್ಬರಿಗೆ 25,000 ರೂಪಾಯಿಗಳಷ್ಟು ಮಾತ್ರ ಇಲ್ಲಿ ಸಾಲ ನೀಡಲಾಗು ವುದು, ಅಲ್ಲದೆ ಇವು ಕೇವಲ ಒಂದು ವರ್ಷದ ಅವಧಿಯಲ್ಲಿ ಮರುಪಾವತಿಯಾಗುವಂತಹ ಅಲ್ಪಾವಧಿ ಸಾಲಗಳಾಗಿವೆ.

6. ಕೈಗಾರಿಕಾ ಎಸ್ಟೇಟುಗಳು

ಸಣ್ಣ ಕೈಗಾರಿಕೆಗಳಿಗೆ ಸಾಮಾನ್ಯವಾಗಿ ಸೂಕ್ತವಾದ ಸ್ಥಳಾವಕಾಶವಿಲ್ಲದೆ ಇರುವುದು ಮುಖ್ಯ ಕೊರತೆಗಳಲ್ಲಿ ಒಂದು. ಅನೇಕ ಸಣ್ಣ ಕೈಗಾರಿಕೆಗಳು ದೇಶಾದ್ಯಂತ ಹರಡಿಕೊಂಡಿವೆ. ಹೊಸ ಹೊಸ ಉದ್ಯಮಗಳು ಬರುತ್ತಿವೆ. ಆದರೆ ಇವೆಲ್ಲವೂ ಸಾಮಾನ್ಯವಾಗಿ ಜನಭರಿತವಾದ, ಕಿಕ್ಕಿರಿದ ಪ್ರದೇಶಗಳಲ್ಲಿಯೇ ಸ್ಥಾಪಿತವಾಗಿವೆ. ಕಚ್ಚಾಮಾಲು ಸುಲಭವಾಗಿ ದೊರೆಯುವ ಕಡೆ ಮತ್ತು ವಿದ್ಯುಚ್ಛಕ್ತಿ, ನೀರು, ಸಾರಿಗೆ, ಯಂತ್ರಗಳು, ನುರಿತ ಕೆಲಸಗಾರರು ಮತ್ತು ಬ್ಯಾಂಕು ಪೋಸ್ಟ್ ಆಫೀಸು ಮುಂತಾದ ಸೌಲಭ್ಯಗಳು ಇರುವಲ್ಲಿ ಕೈಗಾರಿಕೆಗಳು ಆಕರ್ಷಿತವಾಗುತ್ತವೆ. ಇದರಿಂದಾಗಿ ಹಳ್ಳಿಯ ನಿವಾಸಿಗಳು ಪಟ್ಟಣಗಳನ್ನೂ ಸೇರಿ, ಆಧುನಿಕ ನಗರಗಳಲ್ಲಿ ಸಾಮಾಜಿಕ ಸಮಸ್ಯೆಗಳು ಉಂಟಾಗಿವೆ. ಸರಳವಾದ ಗ್ರಾಮ ಜೀವನವೇ ಹಾಳಾಗಿದೆ. ಇವಲ್ಲದೆ ನೂತನವಾಗಿ ಸ್ಥಾಪಿಸಿದ ಕೈಗಾರಿಕೆಗಳು ತಮಗೆ ಅವಶ್ಯಕವಾಗಿ ಬೇಕಾದ ನಿವೇಶನ, ಯಂತ್ರಗಳನ್ನು ಚಲಿಸಲು ವಿದ್ಯುಚಕ್ತಿ, ನೀರು, ಸಾಮಾನುಗಳ ಸರಬರಾಜಿಗೆ ಸಾರಿಗೆ ಮುಂತಾದ ಸೌಲಭ್ಯಗಳಿಗಾಗಿ ಕಷ್ಟಪಡಬೇಕಾದುದಲ್ಲದೆ, ಅವುಗಳ ಅಲ್ಪ ಬಂಡವಾಳದ ಹೆಚ್ಚು ಭಾಗವನ್ನೆಲ್ಲಾ ಇವುಗಳಿಗಾಗಿಯೇ ಮೀಸಲಾಗಿಡಬೇಕಾಗುತ್ತದೆ. ಈ ತೊಂದರೆಗಳನ್ನು ನಿವಾರಿಸಲು ಮತ್ತು ಕೈಗಾರಿಕೆಗಳನ್ನು ಅಭಿವೃದ್ಧಿಗೊಳಿಸಲು

ರಾಷ್ಟ್ರದಲ್ಲಿ ಕೈಗಾರಿಕಾ ಎಸ್ಟೇಟುಗಳನ್ನು ಸ್ಥಾಪಿಸುವ ಯೋಜನೆಯನ್ನು ನಿರ್ಧರಿಸಲಾಯಿತು.

ಈ ಎಸ್ಟೇಟು ಯೋಜನೆಯ ಮುಖ್ಯ ಉದ್ದೇಶ ಸಣ್ಣ ಕೈಗಾರಿಕೆಗಳಿಗೆ ಅನುಕೂಲವಾದ ನಿವೇಶನ, ಅಗತ್ಯವಾದ ನೀರಿನ ಸೌಕರ್ಯ, ವಿದ್ಯುಚ್ಛಕ್ತಿ, ಸಾರಿಗೆ, ಅಂಚೆ ಕಚೇರಿ, ಉಪಹಾರ ಮಂದಿರ ಮುಂತಾದ ಸೌಕರ್ಯಗಳನ್ನೂ ಮತ್ತು ಕೈಗಾರಿಕೆಗಳ ಅಭಿವೃದ್ಧಿಗೆ ತಕ್ಕ ಹಿತಕರವಾದ ವಾತಾವರಣವನ್ನೂ ಕಲ್ಪಿಸುವುದು ಅಲ್ಲದೆ, ಇಂತಹ ಕೈಗಾರಿಕಾ ಎಸ್ಟೇಟುಗಳಿದ್ದಲ್ಲಿ ಇತರ ಕೈಗಾರಿಕೆಗಳೂ ಸ್ಥಾಪಿತವಾಗಿ, ಕಚ್ಚಾ ಮಾಲಿನ ಒಟ್ಟು ಸರಬರಾಜು, ದಾಸ್ತಾನು ಮತ್ತು ತಯಾರಾದ ಸರಕುಗಳ ಮಾರಾಟ, ಕೈಗಾರಿಕೆಗಳ ಸೇವಾ ಕೇಂದ್ರಗಳು, ಆಧುನಿಕ ತಾಂತ್ರಿಕ ಉದ್ಯಮಗಳು ಇತ್ಯಾದಿಗಳ ಬೆಳವಣಿಗೆ ಸಾಧ್ಯವಾಗುತ್ತದೆ. ಹಳ್ಳಿಗಳಲ್ಲಿ ಮತ್ತು ಹಿಂದುಳಿದ ಪ್ರದೇಶಗಳಲ್ಲಿ ಕೈಗಾರಿಕಾ ಎಸ್ಟೇಟುಗಳನ್ನು ಸ್ಥಾಪಿಸುವುದು ಕೈಗಾರಿಕಾ ಅಭಿವೃದ್ಧಿಗೂ, ಉದ್ಯಮ ಚಟುವಟಿಕೆಗಳಿಗೂ ಉತ್ತೇಜನಕಾರಿಯಾಗಿದೆ.

ಕೈಗಾರಿಕಾ ಎಸ್ಟೇಟುಗಳ ಯೋಜನೆಯು ಮೊದಲನೆಯ ಪಂಚವಾರ್ಷಿಕ ಯೋಜನೆಯ ಅವಧಿಯಲ್ಲಿ ಕೈಗೊಳ್ಳಲಾಯಿತಾದರೂ, ಎರಡನೆ ಯೋಜನೆ ಅವಧಿಯಲ್ಲಿ ಸಣ್ಣ ಕೈಗಾರಿಕೆಗಳ ಅತ್ಯಂತ ಉನ್ನತ ಬೆಳವಣಿಗೆಯ ಕಾರಣದಿಂದ. ತ್ವರಿತ ಪ್ರಗತಿಯನ್ನು ಕಂಡಿತು. ಈ ಎಸ್ಟೇಟುಗಳ ಉಪಯೋಗವನ್ನರಿತು ಎರಡನೆ ಯೋಜನೆಯಲ್ಲಿ ನೀಡಲಾಗಿದ್ದ 11.12 ಕೋಟಿ ರೂ.ಗಳ ಮೊತ್ತವನ್ನು ಮೂರನೆಯ ಯೋಜನೆಯಲ್ಲಿ 20.2

ಕೋಟಿ ರೂ.ಗಳಿಗೆ ಹೆಚ್ಚಿಸಲಾಯಿತು. ಮೂರನೆಯ ಯೋಜನೆಯ ಅವಧಿಯಲ್ಲಿ ಎಸ್ಟೇಟುಗಳಲ್ಲಿನ ಉದ್ಯಮಗಳ ಅಭಿವೃದ್ಧಿಗಾಗಿ ಸಾಮಾನ್ಯ ಅನುಕೂಲತೆಗಳನ್ನು ಕಲ್ಪಿಸಿಕೊಡುವ ಕಾರ್ಯಕ್ರಮವನ್ನು ಹೆಚ್ಚು ಪ್ರೋತ್ಸಾಹಿಸಲಾಯಿತು. ಗ್ರಾಮ ಪ್ರದೇಶಗಳ ಕೈಗಾರಿಕೀಕರಣವನ್ನು ಸಾಧಿಸುವ ಸಲುವಾಗಿ ಹೆಚ್ಚಿಗೆ ಎಸ್ಟೇಟುಗಳನ್ನು ಸಣ್ಣ ಊರು ಮತ್ತು ಹಳ್ಳಿಗಳಲ್ಲಿ ಪ್ರಾರಂಭಿಸಲಾಗಿವೆ. ಈ ಎಸ್ಟೇಟುಗಳಲ್ಲಿ ಸೈಕಲ್ ಡೈನಮೋಗಳು, ಟೇಪ್ ರೆಕಾರ್ಡರುಗಳು, ವಿದ್ಯುಚ್ಛಕ್ತಿ ಸರಬರಾಜಿಗೆ ಬೇಕಾದ ಸ್ವಿಚ್‌ಗೇರುಗಳು, ಮೋಟಾರು ವಾಹನದ ಬಿಡಿ ಭಾಗಗಳು, ಶಸ್ತ್ರ ಚಿಕಿತ್ಸೆಗೆ ಬೇಕಾಗುವ ಉಪಕರಣಗಳು ಇತ್ಯಾದಿ ವಸ್ತುಗಳ ಸುಧಾರಿತ ತಯಾರಿಕೆಗಳನ್ನು ಉತ್ಪಾದಿಸಲಾಗುತ್ತಿದೆ. ರಾಷ್ಟ್ರದಲ್ಲಿಯೇ ಇದುವರೆವಿಗೂ ತಯಾರಾಗದೇ ಇದ್ದಂತಹ ಅನೇಕ ವಸ್ತುಗಳನ್ನು ಈಗ ಎಸ್ಟೇಟುಗಳಲ್ಲಿನ ನೂತನ ಉದ್ಯಮಗಳು ಈಗ ತಯಾರಿಸುತ್ತಿವೆ. ಈ ಎಸ್ಟೇಟುಗಳ ಸ್ಥಾಪನೆಗಾಗಿ ಸುಮಾರು 45ಕೋಟಿ ರೂ. ಗಳನ್ನು ಖರ್ಚು ಮಾಡಲಾಗಿದೆ.

ವಿವಿಧ ಕೈಗಾರಿಕಾ ಎಸ್ಟೇಟುಗಳು

ರಾಷ್ಟ್ರದಲ್ಲಿರುವ ಎಲ್ಲಾ ಕೈಗಾರಿಕಾ ಎಸ್ಟೇಟುಗಳು ಖಾಸಗೀ ಕಂಪೆನಿ ಮತ್ತು ಸಹಕಾರ ಸಂಘಗಳಿಂದ ನಿರ್ಮಿತವಾಗಿವೆ. ಇವಕ್ಕೆ ವಾಣಿಜ್ಯ ಬ್ಯಾಂಕುಗಳಿಂದ ಸರಕಾರದ ಆಧಾರಗಳ ಮೇಲೆ, ಸಾಲ ನೆರವುಗಳನ್ನು ನೀಡಲಾಗಿದೆ. ಜೀವ ವಿಮಾ ಕಾರ್ಪೊರೇಷನ್ನು ಸಹ ಸಹಕಾರ ಮತ್ತು ಜಾಯಿಂಟ್ ಸ್ಟಾಕ್ ಕಂಪನಿಗಳಿಗೆ ಕೈಗಾರಿಕಾ ಎಸ್ಟೇಟುಗಳನ್ನು ನಿರ್ಮಿಸುವು

ದಕ್ಕಾಗಿ, ರಾಜ್ಯ ಸರಕಾರಗಳ ಭರವಸೆ ಅಥವಾ ಆಧಾರ ಪಡೆದು ಸಾಲಗಳನ್ನು ನೀಡುತ್ತಿದೆ.

ಸಹಕಾರೀ ಕೈಗಾರಿಕಾ ಎಸ್ಟೇಟುಗಳನ್ನು ಗುಜರಾತ್, ಮಹಾರಾಷ್ಟ್ರ, ಮಧ್ಯಪ್ರದೇಶ, ಉತ್ತರ ಪ್ರದೇಶ, ಮದರಾಸು ಮತ್ತು ಮೈಸೂರು ರಾಜ್ಯಗಳಲ್ಲಿ ಸ್ಥಾಪಿಸಲಾಗಿದೆ. ಮಹಾರಾಷ್ಟ್ರದಲ್ಲಿ 21 ಸಹಕಾರೀ ಎಸ್ಟೇಟುಗಳು ಸ್ಥಾಪಿತವಾಗಿ, ಇನ್ನು 37 ಎಸ್ಟೇಟುಗಳು ನಿರ್ಮಾಣದ ವಿವಿಧ ಹಂತಗಳಲ್ಲಿವೆ. ಗುಜರಾತಿನಲ್ಲಿ ಒಂಭತ್ತು ಸಹಕಾರೀ ಕೈಗಾರಿಕಾ ಎಸ್ಟೇಟುಗಳೂ, ಮದರಾಸಿನಲ್ಲಿ ನಾಲ್ಕು, ಮತ್ತು ರಾಜಾಸ್ತಾನ್, ಉತ್ತರ ಪ್ರದೇಶ ಮತ್ತು ಮೈಸೂರು ರಾಜ್ಯಗಳಲ್ಲಿ ಒಂದೊಂದು ಎಸ್ಟೇಟುಗಳು ಇವೆ.

ಸಹಾಯಕ ಕೈಗಾರಿಕಾ ಎಸ್ಟೇಟುಗಳು (ಸಹಾಯಕ ಮತ್ತು ಉಪಕೈಗಾರಿಕಾ ಎಸ್ಟೇಟುಗಳು)

ವಿವಿಧ ಕೈಗಾರಿಕೆಗಳಿಗೆ ಅನುಕೂಲವಾಗುವಂತೆ ಕೈಗಾರಿಕಾ ಎಸ್ಟೇಟುಗಳನ್ನು ಸ್ಥಾಪಿಸುವುದಲ್ಲದೆ, ಒಂದೇ ವರ್ಗಕ್ಕೆ ಸೇರಿದ ಕೈಗಾರಿಕೆಗಳಿಗೆ ಆಶ್ರಯ ನೀಡುವಂತಹ ಎಸ್ಟೇಟುಗಳ ಅವಶ್ಯಕತೆಯನ್ನರಿತು, ಅದಕ್ಕೆ ಅನುಗುಣವಾಗಿ ಸಹಾಯಕ ಕೈಗಾರಿಕಾ ಎಸ್ಟೇಟುಗಳನ್ನು ನಿರ್ಮಿಸುವ ಯೋಜನೆ ಇರುತ್ತದೆ. ಮೋಟಾರು ವಾಹನಗಳ ಬಿಡಿ-ಭಾಗಗಳು ಯಂತ್ರೋಪಕರಣಗಳು, ರೇಡಿಯೋ ಸಲಕರಣೆಗಳು, ಗಡಿಯಾರದ ಬಿಡಿಭಾಗಗಳು ಮುಂತಾದ ತಯಾರಿಕೆಗಳಿಗೆ ಸಂಬಂಧಿಸಿದ ಕೈಗಾರಿಕೆಗಳು ಈ ಸಹಾಯಕ ಕೈಗಾರಿಕಾ ಎಸ್ಟೇಟುಗಳಲ್ಲಿ ಸ್ಥಾಪಿಸಲ್ಪಡುವುವು. ಇಂತಹ ಎಸ್ಟೇಟುಗಳು ಪುಣೆಯ ಸಮೀಪದಲ್ಲಿರುವ ಪಿಂಪ್ರಿ,

ನಾಗಪುರ, ಹೈದರಾಬಾದು, ದೆಹಲಿ, ವಿಜಯವಾಡ ಮತ್ತು ಮದರಾಸಿನಲ್ಲಿ ನಿರ್ಮಿತವಾಗಿ ಈಗಾಗಲೆ ಕಾರ್ಯೋನ್ಮುಖ ವಾಗಿವೆ.

ಕೇಂದ್ರ ಸರಕಾರವು ಬೃಹತ್ ಕೈಗಾರಿಕೆಗಳಿಗೆ ಸಂಬಂಧಿಸಿದ ಉಪಕೈಗಾರಿಕೆಗಳ ಬೆಳವಣಿಗೆಗೆ ಉತ್ತೇಜನಕಾರಿಯಾಗುವಂತೆ ಅಂತಹವುಗಳಿಗೆ ಪ್ರತ್ಯೇಕವಾಗಿ ಎಸ್ಟೇಟುಗಳನ್ನು ದೊಡ್ಡ ಕೈಗಾರಿಕೆಗಳ ಸಮೀಪ ಪ್ರದೇಶದಲ್ಲಿ ನಿರ್ಮಿಸುವುದು ಈ ಕಾರ್ಯಕ್ರಮಗಳಲ್ಲೊಂದಾಗಿದೆ. ಬೃಹತ್ ಉದ್ಯಮಗಳು ತಮಗೆ ಅಂಟಿಕೊಂಡಂತಿರುವ ಸಣ್ಣ ಅಥವಾ ಉಪ-ಕೈಗಾರಿಕೆಗಳಿಗೆ ತಾಂತ್ರಿಕ ಸಲಹೆ ಮತ್ತು ಕಚ್ಚಾ ಮಾಲುಗಳನ್ನು ತಾವೇ ಕೊಟ್ಟು, ತಮಗೆ ಬೇಕಾದ ತಯಾರಿಕೆಗಳನ್ನು ಅವುಗಳಿಂದ ಪಡೆಯುವುವು. ಇಂತಹ ಎಸ್ಟೇಟುಗಳು ಬೆಂಗಳೂರು, ಭೂಪಾಲ್, ರಾಂಚಿ ಮುಂತಾದ ನಗರಗಳಲ್ಲಿ ಕಾರ್ಯಾಚರಣೆಯಲ್ಲಿವೆ.

ಕೈಗಾರಿಕಾ ಎಸ್ಟೇಟುಗಳ ಭವಿಷ್ಯ

ಇದುವರೆಗೂ ಸ್ಥಾಪಿತವಾದ ಎಸ್ಟೇಟುಗಳ ಪೂರ್ಣ ಉಪಯೋಗವನ್ನು ಉದ್ಯಮಿಗಳಾಗಲೀ ಕೈಗಾರಿಕಾ ಸಂಸ್ಥೆಗಳಾಗಲೀ ಪಡೆಯದೆ ಇರುವುದರಿಂದ ಹೊಸಹೊಸ ಎಸ್ಟೇಟುಗಳನ್ನು ನಿರ್ಮಿಸುವ ಬದಲು ಈಗ ಹಾಲಿ ಇರುವುವುಗಳನ್ನೇ ಸಂಪೂರ್ಣವಾಗಿ ಕೈಗಾರಿಕೆಗಳ ಬೆಳವಣಿಗೆಗೆ ಅನುಗುಣವಾಗಿ ಸುಧಾರಿಸಿ ಹೆಚ್ಚು ಫಲಕಾರಿಯಾಗುವಂತೆ ಮಾಡಬೇಕಾಗಿದೆ. ಈ ದಿಶೆಯಲ್ಲಿ ಅನೇಕ ಕಾರಣಗಳು ಗಣನೆಗೆ ಬರುತ್ತವೆ. ಹಿಂದುಳಿದ ಪ್ರದೇಶಗಳು ಮತ್ತು ಗ್ರಾಮ ಪ್ರದೇಶಗಳಲ್ಲಿ

ಸ್ಥಾಪಿತವಾದ ಎಸ್ಟೇಟುಗಳೇ ಪೂರ್ಣ ಉಪಯೋಗವನ್ನು ಪಡೆಯಲು ಉಳಿದವುಗಳಿಂತ ಹೆಚ್ಚು ಕಾಲ ಹಿಡಿಯುವುದು.

ಇಂಡಸ್ಟ್ರಿಯಲ್ ಎಸ್ಟೇಟುಗಳು ಸಣ್ಣ ಕೈಗಾರಿಕೆಗಳ, ಅದರಲ್ಲೂ ಸುಧಾರಿತ ತಯಾರಿಕೆಗಳ ಉತ್ಪಾದನೆಯಲ್ಲಿ ಮುಖ್ಯ ಪಾತ್ರವಹಿಸಿರುವುದು ವ್ಯಕ್ತವಾಗಿದೆ. ಬೃಹತ್ ನಗರಗಳಲ್ಲಿ ಕೈಗಾರಿಕೆಗಳ ಬೆಳವಣಿಗೆಗೆ ಅಗತ್ಯವಾದ ಪೂರ್ವಸಿದ್ಧತೆಗಳು ಇರುವುದರಿಂದ ಅಲ್ಲಿ ಈ ಎಸ್ಟೇಟುಗಳ ವಿಷಯದಲ್ಲಿ ಪ್ರೋತ್ಸಾಹಕರ ಕಾರ್ಯಕ್ರಮಗಳೇನೂ ಬೇಕಾಗಿಲ್ಲ. ಆದರೆ ಗ್ರಾಮ ಪ್ರದೇಶಗಳಲ್ಲಿ ಮತ್ತು ಸಣ್ಣ ಊರುಗಳಲ್ಲಿ ಕೈಗಾರಿಕೆಗಳ ಬೆಳವಣಿಗೆಗೆ ಇರುವ ಸಾಧ್ಯಾಸಾಧ್ಯತೆಗಳ ಅಧ್ಯಯನ ಮಾಡಿ, ಅಲ್ಲಿಗೆ ಅನುಗುಣವಾದಂತೆ ಈ ಎಸ್ಟೇಟುಗಳು ಮುಖ್ಯ ಪಾತ್ರ ವಹಿಸುವಂತಾಗುವ ಕಾರ್ಯಕ್ರಮಗಳನ್ನು ಕೈಗೊಳ್ಳಬೇಕಾಗುತ್ತದೆ. ಅವುಗಳ ರಚನೆ ಕೈಗಾರಿಕಾ ಅಭಿವೃದ್ಧಿಗೆ ಕಾರಣವಾಗುವಂತೆ ಆಯಾ ಪ್ರದೇಶಗಳ ಹಿನ್ನೆಲೆಯನ್ನು ಗಣನೆಗೆ ತೆಗೆದುಕೊಂಡು ಸಹಾಯಕವಾಗಿರದಿದ್ದರೆ ವ್ಯರ್ಥವಾಗುತ್ತದೆ.

ಭಾರತದಲ್ಲಿ ಕಳೆದ 18 ವರ್ಷಗಳಲ್ಲಿ ಸ್ಥಾಪಿಸಲಾದ 600 ಎಸ್ಟೇಟುಗಳ ಪೈಕಿ 520ರ ನಿರ್ಮಾಣ ಮುಗಿದಿದ್ದು ಸಾಮಾನು ತಯಾರಿಕೆಯ ಕಾರ್ಯಾರಂಭವಾಗಿದೆ. ಸುಮಾರು 11,000 ಕೈಗಾರಿಕೆಗಳು ಉತ್ಪಾದನೆಗಳಲ್ಲಿ ತೊಡಗಿವೆ. ಈ ಎಸ್ಟೇಟುಗಳಲ್ಲಿ ಸುಮಾರು 350 ಕೋಟಿ ರೂ.ಗಳ ಬೆಲೆಯ ಸಾಮಾನುಗಳು ಪ್ರತಿ ವರ್ಷ ತಯಾರಾಗುತ್ತಿವೆ. ಸುಮಾರು 10ಲಕ್ಷಕ್ಕಿಂತ ಹೆಚ್ಚು ಜನಕ್ಕೆ ಉದ್ಯೋಗ ಕಲ್ಪಿಸಿವೆ.

ಈ ದಿಶೆಯಲ್ಲಿ ರಾಷ್ಟ್ರೀಯ ಸಣ್ಣ ಕೈಗಾರಿಕಾ ಕಾರ್ಪೊರೇಷನ್ ಓಕ್ಲಾ ಹಾಗೂ ನೈನಿಯಲ್ಲಿ ಮಾದರಿ ಕೈಗಾರಿಕಾ ಎಸ್ಟೇಟುಗಳನ್ನು ಸ್ಥಾಪಿಸಿ ರಾಷ್ಟ್ರದ ಉಳಿದ ಪ್ರದೇಶಗಳಲ್ಲಿ ಅವುಗಳ ನಿರ್ಮಾಣಕ್ಕೆ ಮಾರ್ಗ ತೋರಿಸಿ, ಪ್ರಮುಖ ಪಾತ್ರವನ್ನು ವಹಿಸಿದೆ.

7. ಕಚ್ಚಾ ಪದಾರ್ಥಗಳು

ಕೈಗಾರಿಕಾ ಅಭಿವೃದ್ಧಿ ಕಾರ್ಯಕ್ರಮವು ಸಫಲವಾಗ ಬೇಕಾದರೆ, ಸಣ್ಣ ಕೈಗಾರಿಕೆಗಳಿಗೆ ಅಗತ್ಯವಾಗಿ ಬೇಕಾದ ಕಚ್ಚಾ ಮಾಲುಗಳನ್ನು ದೊರೆಯುವಂತೆ ಮಾಡುವ ಉದ್ದೇಶದಿಂದ ಕೇದ್ರ ಮತ್ತು ರಾಜ್ಯ ಸರ್ಕಾರಗಳು ಸಾಧ್ಯವಾದ ಪ್ರಯತ್ನ ಮತ್ತು ಕ್ರಮಗಳಲ್ಲಿ ತೊಡಗಿವೆ.

ಮೊದಲಲ್ಲಿ ಸಾಮಾನ್ಯವಾದ ಸಣ್ಣ ಕೈಗಾರಿಕೆಗಳ ಬೇಕಾದ ಕಚ್ಚಾ ಪದಾರ್ಥಗಳು ಸುಲಭವಾಗಿ ದೊರೆಯು ತಿದ್ದುವು. ದೇಶೀಯ ಮತ್ತು ಆಮದು ಮಾಡಲ್ಪಟ್ಟ ಕಚ್ಚಾ ಮಾಲುಗಳ ಸರಬರಾಜು ಈ ಕೈಗಾರಿಕೆಗಳಿಗೆ ಕ್ರಮೇಣ ಹೆಚ್ಚಾಗಿ ಹಂಚಿಡಲಾಗುತ್ತಿತ್ತು. 1960ರವರೆಗೂ ಕಚ್ಚಾ ಮಾಲುಗಳ ಕೊರತೆ ಕಂಡುಬರಲಿಲ್ಲ. ಈ ಕ್ಷೇತ್ರವು ಸರಕಾರದ ಪ್ರೋತ್ಸಾಹಕ ಕಾರ್ಯಕ್ರಮಗಳ ಫಲವಾಗಿ ವಿಶಾಲಗೊಂಡಂತೆ, ಆಧುನಿಕ ಸುಧಾರಿತ ವಸ್ತುಗಳ ತಯಾರಿಕೆಯನ್ನು ಉದ್ಯಮಿ ಗಳ ಮೊದಲಬಾರಿಗೆ ಕೈಗೊಂಡರು. ಕಚ್ಚಾ ಮಾಲುಗಳ ಪೂರೈಕೆ ಈ ಕ್ಷೇತ್ರಕ್ಕೆ ಸಾಕಾಗದೆ ಇದ್ದು, ವಿದೇಶಿ ವಿನಿಮಯದ ಕೊರತೆಯಿಂದ ರಾಷ್ಟ್ರದಲ್ಲಿ ಕ್ಲಿಷ್ಟ ಪರಿಸ್ಥಿತಿಯಾದಾಗಲೇ ತೊಂದರೆ ಹೆಚ್ಚಾಯಿತು. ಈ ವಿಷಯವಾಗಿ ಸಣ್ಣ ಕೈಗಾ ರಿಕಾ ಮಂಡಳಿಗೆ 1960–61ರಿಂದ ಈಚೆಗೆ ಬರುವ ದೂರುಗಳು ಹೆಚ್ಚಾದುವು.

ಸಣ್ಣ ಕೈಗಾರಿಕೆಗಳಿಗೆ ಬೇಕಾಗುವ ಕಚ್ಚಾ ಪದಾರ್ಥಗಳನ್ನು ಮೂರು ವಿಧವಾಗಿ ವಿಂಗಡಿಸಬಹುದು.

(i) ಸುಲಭವಾಗಿ ದೊರೆಯುವ ದೇಶೀಯ ಕಚ್ಚಾ ಮಾಲು ;

(ii) ಮಿತವಾಗಿ ದೊರೆಯುವ ದೇಶೀಯ ಕಚ್ಚಾ ಮಾಲುಗಳು ; ಮತ್ತು

(iii) ಆಮದು ಮಾಡಿಕೊಳ್ಳುವ ಕಚ್ಚಾ ಮಾಲು.

ಸುಲಭವಾಗಿ ಮತ್ತು ಹೇರಳವಾಗಿ ದೊರೆಯುವಂತಹ ಕಚ್ಚಾ ಮಾಲುಗಳನ್ನು ಮಾರುಕಟ್ಟೆಯಲ್ಲಿ ಕೊಳ್ಳಬಹುದು ; ಅವುಗಳ ವಿತರಣೆ, ಸರಬರಾಜುಗಳ ಮೇಲೆ ಯಾವ ನಿಯಂತ್ರಣವೂ ಇಲ್ಲ. ಅತಿ ಮುಖ್ಯವಾಗಿ ಬೇಕಾದ ಕಬ್ಬಿಣ ಮತ್ತು ಉಕ್ಕು, ಅದುರುಗಳು ಕೂಡ ಮಾರುಕಟ್ಟೆಯಲ್ಲಿಯೂ ರಾಜ್ಯದ ಸಣ್ಣ ಕೈಗಾರಿಕಾ ಕಾರ್ಪೊರೇಷನ್ನುಗಳ ಮೂಲಕವೂ ಸಾಕಷ್ಟು ದೊರೆಯುತ್ತವೆ. ಅವುಗಳ ಸಲುವಾಗಿ ಕಾರ್ಪೊರೇಷನ್ ದಾಸ್ತಾನು ಇಟ್ಟಿರುತ್ತದೆ.

ಸರಬರಾಜು ಕೊರತೆಯಿರುವ ದೇಶೀಯ ಕಚ್ಚಾ ಪದಾರ್ಥಗಳನ್ನು ರಾಜ್ಯ ಕೈಗಾರಿಕಾ ಡೈರಕ್ಟರುಗಳು ತಮ್ಮ ರಾಜ್ಯದಲ್ಲಿರುವ ಸಣ್ಣ ಕೈಗಾರಿಕೆಗಳಿಗೆ ಅವುಗಳ ಬೇಡಿಕೆ ಮತ್ತು ದೊರೆಯುವ ಸಾಧ್ಯತೆಗಳನ್ನು ಗಮನದಲ್ಲಿಟ್ಟುಕೊಂಡು ಹಂಚುತ್ತಾರೆ.

ಆಯಾತವಾಗಬೇಕಾದ ಕಚ್ಚಾ ಪದಾರ್ಥಗಳ ವಿಷಯದಲ್ಲಿ ಸರಕಾರವು ತನ್ನ ಆಮದು ನೀತಿಯನ್ನು ಸಡಿಲಿಸಿದುದು ಸಣ್ಣ ಕೈಗಾರಿಕೆಗಳಿಗೆ ವರ ಪ್ರಸಾದವಾಗಿದೆ.

ಆಮದಿಗಾಗಿ ಪರವಾನಗಿ ಹೊಂದಿದ ಕಚ್ಚಾ ಮಾಲುಗಳು, ಅಂದರೆ ಬಿಡಿ ಯಂತ್ರ ಭಾಗಗಳು, ಲೋಹ ಸಾಮಗ್ರಿಗಳು, ತಾಮ್ರ, ತಗಡು, ನಿಕ್ಕಲ್, ತವರ, ತಂತಿಗಳು ಮುಂತಾದ ಅಗತ್ಯವಾದ ಮತ್ತು ಉತ್ಪಾದನೆಗಾಗಿ ಸ್ವತಃ ಉಪಯೋಗಿಸಲ್ಪಡುವಂತಹ ಕಚ್ಚಾ ಮಾಲುಗಳು ಸತತವಾಗಿ ಸಣ್ಣ ಕೈಗಾರಿಕೆಗಳಿಗೆ ದೊರೆಯುವಂತಾಗಿದೆ. 1966–67 ರಲ್ಲಿ ಸುಮಾರು 78 ಕೋಟಿ ರೂ.ಗಳ ಬೆಲೆಯ ಕಚ್ಚಾ ಪದಾರ್ಥಗಳಿಗೆ ಆಯಾತ ಪರವಾನಗಿಗಳನ್ನು ಸಣ್ಣ ಕೈಗಾರಿಕಾ ಕ್ಷೇತ್ರಕ್ಕೇ ಮಂಜೂರು ಮಾಡಲಾಯಿತು. ಅದರ ಹಿಂದಿನ ವರುಷದಲ್ಲಿ 4.4 ಕೋಟಿ ರೂ.ಗಳಷ್ಟು ಮೊತ್ತದ ವಸ್ತುಗಳಿಗೆ ಮಾತ್ರ ಪರವಾನಗಿ ಕೊಡಲಾಗಿತ್ತು. ಇಷ್ಟೇ ಅಲ್ಲದೇ ತಾತ್ಕಾಲಿಕ ಪರವಾನಗಿಗಳನ್ನೂ ಲೋಹ ಸಾಮಗ್ರಿಗಳ ಆಯಾತಕ್ಕಾಗಿ ಕೊಡಲಾಗುತ್ತಿದೆ.

ಆಯಾತಕ್ಕಾಗಿ ಅನುಸರಿಸಬೇಕಾದ ಕ್ರಮ, ವಿಧಾನಗಳನ್ನು ಸಣ್ಣ ಕೈಗಾರಿಕೆಗಳ ಸೌಕರ್ಯಕ್ಕಾಗಿ ಸಡಿಲಗೊಳಿಸಲಾಗಿದೆ. ಪ್ರಾದೇಶಿಕ ನಿಯಂತ್ರಣ ಅಧಿಕಾರಿಗಳಿಗೇ ಪರವಾನಗಿಗಳನ್ನು ಸಲ್ಲಿಸಿ, ತುರ್ತಿನ ಕೈಗಾರಿಕೆಗಳು ಆರು ತಿಂಗಳಿಗೆ ಬೇಕಾದಷ್ಟು ಕಚ್ಚಾ ಪದಾರ್ಥಗಳಿಗೇ ಪರವಾನಗಿ ಹೊಂದಿ ಉಳಿದ ಆರು ತಿಂಗಳಿಗೆ ಮತ್ತೆ ಪರವಾನಗೀಯನ್ನು ಪಡೆಯಬಹುದು. ಈ ವರ್ಗದ ಕೈಗಾರಿಕೆಗಳು ಆಮದು ಮಾಡಿ ಉಪಯೋಗಿಸಿದ ಆಧಾರದಮೇಲೆ ಮತ್ತೆ ಮತ್ತೆ ಆಯಾತ ಪರವಾನಗಿಗಳನ್ನು ಪಡೆದು ತಮಗೆ ಬೇಕಾದ ಕಚ್ಚಾ ಪದಾರ್ಥಗಳನ್ನು ಕೊಳ್ಳಬಹುದು.

ಆಯಾತ ಪರವಾನಗಿ ನೀಡಲು ಸಣ್ಣ ಕೈಗಾರಿಕೆಗಳನ್ನು ಪ್ರಯಾರಿಟಿ ಮತ್ತು ನಾನ್-ಪ್ರಯಾರಿಟಿ ಎಂದು ವಿಂಗಡಿಸಲಾಗಿದೆ.

ಪ್ರಯಾರಿಟಿ ಆಧಾರದ ಸಣ್ಣ ಕೈಗಾರಿಕೆಗಳು ಆರು ತಿಂಗಳಿಗೊಮ್ಮೆ ತಮ್ಮ ಅಗತ್ಯಗಳ ಆಮದು ಪೂರೈಕೆಗಾಗಿ ಪರವಾನಿಗಿಗಳನ್ನು ಪಡೆಯಬಹುದು. ಅವುಗಳನ್ನು ಪಡೆದ ಮೇಲೆ ಮತ್ತೆ ಆಮದು ಪರವಾನಗಿಗಳಿಗೆ ಅರ್ಜಿ ಸಲ್ಲಿಸಬಹುದು.

ನಾನ್-ಪ್ರಯಾರಿಟಿ ಆಧಾರದ ಸಣ್ಣ ಕೈಗಾರಿಕೆಗಳು ಮಾತ್ರ ವರ್ಷಕ್ಕೊಮ್ಮೆ ತಮ್ಮ ಅಗತ್ಯಗಳ ಪೂರೈಕೆಗಾಗಿ ಆಮದು ಪರವಾನಿಗಿಗಳಿಗೆ ಅರ್ಜಿ ಹಾಕಬೇಕು. ಮತ್ತೊಮ್ಮೆ ಆಮದು ಪರವಾನಿಗಿಗಳಿಗೆ ಅರ್ಜಿ ಹಾಕಬೇಕಾದರೆ ಅವು ಪರವಾನಿಗಿಗಳು ಪಡೆದಿರುವ ಆಮದು ವಸ್ತುಗಳಲ್ಲಿ ಶೇಕಡ 60 ರಷ್ಟನ್ನು ಪಡೆದಿರಬೇಕು ಇಲ್ಲವೆ ತಮ್ಮ ಪರವಾನಿಗಿಗಳ ಮೌಲ್ಯದ ಮೊತ್ತದ ಶೇಕಡ 90ರಷ್ಟು ಸಾಲಪತ್ರವನ್ನು ಪಡೆದಿರಬೇಕು.

ಕಚ್ಚಾ ಸಾಮಗ್ರಿಗಳ (ಆಮದು ಮಾಡಿದ) ಕೊರತೆಯನ್ನು ಅಭ್ಯಾಸಿಸಲು ನೇಮಿಸಿದ ಸಣ್ಣ ಕೈಗಾರಿಕಾ ಮಂಡಳಿಯ ಸ್ಥಾಯೀ ಸಮಿತಿ ದೇಶದಲ್ಲಿನ ಕಚ್ಚಾ ಮಾಲಿನ ಪರಿಸ್ಥಿತಿಯನ್ನು ಕೂಲಂಕಷವಾಗಿ ಪರಿಶೀಲೀಸಿತು. 1962ರಲ್ಲಿ ಭಾರತಕ್ಕೆ ಕರೆಸಿಕೊಳ್ಳಲಾದ ಅಂತರರಾಷ್ಟ್ರೀಯ ಯೋಜನಾ ಆಯೋಗದ ಒಂದು ನಿಯೋಗವೂ ಈ ಸಮಸ್ಯೆಯ ಪೂರ್ಣ ಅಭ್ಯಾಸ ನಡೆಸಿತು. ಅದರ ವರದಿಯಂತೆ ಶೇ. 60ರಷ್ಟು ಕೈಗಾರಿಕೆಗಳು ಕಾಳ ಸಂತೆಯಲ್ಲಿ ಕಚ್ಚಾ ಮಾಲನ್ನು ಕೊಂಡು ನಿಭಾಯಿಸ

ಲಾರವೆ ತಮ್ಮ ಕಾರ್ಖಾನೆಗಳು ವಿಸ್ತರಣಾ ಕಾರ್ಯಕ್ರಮ ಗಳನ್ನೂ, ಉತ್ಪಾದನಾ ಸಾಮರ್ಥ್ಯದ ಪೂರ್ಣ ಉಪಯೋಗ ಪಡೆಯುವುದನ್ನೂ ಕೈಬಿಟ್ಟು ಕುಳಿತಿದ್ದವು. ಸರಕಾರದಿಂದ ಒದಗಿಸಲಾದ ನಿಗದಿ ಮೂಲಗಳು ದೊಡ್ಡ ಉದ್ಯಮಗಳಿಗೇ ಹೆಚ್ಚು ಅನುಕೂಲಕರವಾಗಿದ್ದು ಸಣ್ಣ ಕೈಗಾರಿಕೆಗಳಿಗೆ ಅನ್ಯಾಯವಾಗಿದೆ. ಈ ಪರಿಸ್ಥಿತಿಯನ್ನು ಸುಧಾರಿಸಲು ನೇಮಿಸಲಾದ ಲೋಕನಾಥನ್ ಸಮಿತಿಯ ಶಿಫಾರಸುಗಳು ಆಶಾದಾಯಕವಾಗಿವೆ.

ಸಣ್ಣ ಕೈಗಾರಿಕೆಗಳಿಗಾಗಿ ಶೇ. 85ರಷ್ಟು ಕಚ್ಚಾ ಮಾಲನ್ನು ತಾಂತ್ರಿಕ ಅಭಿವೃದ್ಧಿ ಇಲಾಖೆಯ ಡೈರಕ್ಟರೇಟ್ ಮಂಜೂರು ಮಾಡುತ್ತಿದ್ದರೂ. ಸಣ್ಣ ಉದ್ಯಮಗಳಿಗೆ ಬೇಕಾಗಿರುವುದರಲ್ಲಿ ಶೇ. 40ರಷ್ಟು ಭಾಗ ಕಚ್ಚಾ ಸಾಮಗ್ರಿ ಗಳು ದೊರಕುವುದೂ ದುರ್ಲಭವಾಗಿದೆ. ಕಚ್ಚಾ ಮಾಲು ಗಳನ್ನು ಕೊಳ್ಳುವುದರಲ್ಲಿ ಬೃಹತ್ ಉದ್ಯಮಗಳಿಗೂ ಸಣ್ಣ ಕೈಗಾರಿಕೆಗಳೂ ಪೈಪೋಟಿ ಇರುವುದನ್ನು ಅಧ್ಯಯನ ಸಮಿತಿಯು ಮನಗೊಂಡಿದೆ. ಲೋಕನಾಥನ್ ಸಮಿತಿಯು ಕೈಗಾರಿಕೆಗಳು ಪಡೆದಿರುವ ಉತ್ಪಾದನಾ ಶಕ್ತಿಯನ್ನು ಪರಿ ಶೀಲಿಸಿ, ಸಣ್ಣ ಅಥವಾ ಬೃಹತ್ ಕೈಗಾರಿಕಾ ಕ್ಷೇತ್ರಗಳೆಂಬ ಭೇದವನ್ನು ಮಾಡದೆ ಪೂರ್ಣ ಪ್ರಮಾಣದ ಸಿದ್ಧ ವಸ್ತುಗಳ ತಯಾರಿಕೆಯ ತುರ್ತನ್ನು ಗಮನಿಸಿ ಕೊರತೆಯಿರುವ ಅಗತ್ಯ ಕಚ್ಚಾ ಮಾಲುಗಳನ್ನು ಹಂಚುವ ಸಲಹೆ ಮಾಡಿತು.

8. ರಾಜ್ಯ ಸಣ್ಣ ಕೈಗಾರಿಕಾ ಕಾರ್ಪೊರೇಷನ್ನುಗಳು

ರಾಷ್ಟ್ರೀಯ ಸಣ್ಣ ಕೈಗಾರಿಕಾ ಕಾರ್ಪೊರೇಷನ್ನಿನ ಸಹಾಯ ನೆರವುಗಳು ಸಣ್ಣ ಕೈಗಾರಿಕೆಗಳಿಗೆ ಮತ್ತಷ್ಟು ತ್ವರಿತವಾಗಿ ದೊರೆಯುವ ಉದ್ದೇಶದಿಂದ, 1958 ರಲ್ಲಿ ಅಖಿಲ ಭಾರತೀಯ ಸಣ್ಣ ಕೈಗಾರಿಕಾ ಮಂಡಲಿಯು ದೇಶದ ಪ್ರತಿ ರಾಜ್ಯದಲ್ಲಿಯೂ ಒಂದು ಸಣ್ಣ ಕೈಗಾರಿಕಾ ಕಾರ್ಪೊರೇಷನ್ ರಚನೆಯಾಗುವಂತೆ ನಿರ್ಧರಿಸಿತು. ಆಯಾ ರಾಜ್ಯಗಳ ಅವಶ್ಯಕತೆಗಳಿಗೆ ಅನುಗುಣವಾಗಿರುವುದಲ್ಲದೆ, ಈ ರಾಜ್ಯ ಕಾರ್ಪೊರೇಷನ್ನುಗಳು ಸಾಮಾನ್ಯವಾಗಿ ಸಣ್ಣ ಕೈಗಾರಿಕೆಗಳ ಸೇವೆಯಲ್ಲಿ ತೊಡಗಿವೆ. ಅವುಗಳಲ್ಲಿ ಮುಖ್ಯವಾಗಿ ಮಾಡುವ ಕಾರ್ಯಗಳು ಹೀಗಿವೆ :

(i) ಕೈಗಾರಿಕೆಗಳಿಗೆ ಬೇಕಾದ ಕಚ್ಚಾ ಮಾಲುಗಳ ಹಂಚಿಕೆ;

(ii) ಸಣ್ಣ ಕೈಗಾರಿಕೆಗಳು ತಯಾರಿಸಿದ ವಸ್ತುಗಳ ಮಾರಾಟ :

(iii) ರಾಜ್ಯ ಹಾಗೂ ಕೇಂದ್ರ ಸರಕಾರಗಳು ಕೊಳ್ಳುವ ಕಾರ್ಯಕ್ರಮದಲ್ಲಿ ಸಣ್ಣ ಕೈಗಾರಿಕೆಗಳ ಹಿತದೃಷ್ಟಿಯಿಂದ ಭಾಗವಹಿಸುವುದು ;

(iv) ಕಂತಿನಲ್ಲಿ ದೇಶೀಯ ಯಂತ್ರಗಳ ಸರಬರಾಜು ಮಾಡುವುದು :

(v) ಕೈಗಾರಿಕಾ ಎಸ್ಟೇಟುಗಳ ನಿರ್ಮಾಣ, ಆಡಳಿತ ಮತ್ತು ನಿರ್ವಹಣೆ ಮಾಡುವುದು.

(vi) ಸಣ್ಣ ಕೈಗಾರಿಕೆಗಳ ಬಂಡವಾಳದಲ್ಲಿ ಪಾಲು ಗೊಳ್ಳುವುದು :

(vii) ಸಣ್ಣ ಕೈಗಾರಿಕೆಗಳ ನಿರ್ವಹಣೆ.

ಅತಿ ಮುಖ್ಯವಾದ ಕಚ್ಚಾ ಮಾಲುಗಳ ವಿತರಣೆ ಅಥವಾ ಹಂಚಿಕೆಯ ವಿಷಯದಲ್ಲಿ ಅನೇಕ ವೇಳೆ ಪೇಟೆಗಿಂತ ಹೆಚ್ಚು ಬೆಲೆಗೆ ಇವುಗಳನ್ನು ಮಾರಲಾಗುತ್ತಿದೆಯೆಂಬ ದೂರು ಕೈಗಾರಿಕೆಗಳಿಂದ ಕೇಳಿಬರುತ್ತಿದೆ. ಈ ರಾಜ್ಯ ಕಾರ್ಪೊರೇಷನ್ನುಗಳು ಸ್ಟೇಟ್ ಟ್ರೇಡಿಂಗ್ ಕಾರ್ಪೊರೇಷನ್ ಮತ್ತು ಮೆಟಲ್ಸ್ ಅಂಡ್ ಮಿನರಲ್ಸ್ ಕಾರ್ಪೊರೇಷನ್‌ಗಳು ಮಾಡಿದ ಸರಬರಾಜು ಮತ್ತು ಹಾಕಿದ ಬೆಲೆಗಳನ್ನು ಅವಲಂಬಿಸಿ ಸಣ್ಣ ಕೈಗಾರಿಕೆಗಳಿಗೆ ಕಚ್ಚಾ ಪದಾರ್ಥಗಳನ್ನು ಮಾರಾಟ ಮಾಡಲೇಬೇಕಾಗುತ್ತದೆ; ಅಲ್ಲದೆ ಅನಗತ್ಯವಾದ ಸರಕುಗಳನ್ನು ದಾಸ್ತಾನು ಮಾಡಲೇಬೇಕಾಗುತ್ತದೆ. ಹೀಗಾಗಿ ಸಣ್ಣ ಉದ್ಯಮಗಳಿಗೆ ಹೆಚ್ಚಿನ ನೆರವು ಇದರಿಂದ ಇಲ್ಲದಂತಾಗಿದೆ.

ಕೆಲವು ಉದ್ಯಮದಾರರು ತಮಗಾಗಿ ಮೀಸಲಾದ (ಹಂಚಿದ) ಮಾಲುಗಳನ್ನು ಕಾರ್ಪೊರೇಷನ್ನಿನಿಂದ ಹಣ ಕೊಟ್ಟು ವೇಳೆಗೆ ಸರಿಯಾಗಿ ಬಿಡಿಸಿಕೊಳ್ಳದಿರುವುದರಿಂದ ದಾಸ್ತಾನು ವೆಚ್ಚದ ಮತ್ತು ಬಂಡವಾಳದ ಮೇಲಿನ ಬಡ್ಡಿ ಮುಂತಾದ ಹೊರೆಗಳಿಗೆ ಕಾರ್ಪೊರೇಷನ್ ಗುರಿಯಾಗುತ್ತದೆ.

ಸಣ್ಣ ಕೈಗಾರಿಕೆಗಳಿಗೆ ಕಚ್ಚಾ ಮಾಲುಗಳು ಸುಲಭ ಬೆಲೆಯಲ್ಲಿ ದೊರೆಯುವಂತೆ ಹಂಚಿಕೆಯನ್ನು ಕ್ರಮಗೊಳಿಸಿ, ಖಾಸಗೀ

ವರ್ತಕರ ಬಲೆಗೆ ಬೀಳದಂತೆ ಮಾಡುವ ಉದ್ದೇಶದಿಂದಲೇ ಕೇಂದ್ರ ಸಣ್ಣ ಕೈಗಾರಿಕಾ ಮಂಡಳಿಯು ಈ ರಾಜ್ಯ ಕೈಗಾರಿಕಾ ಕಾರ್ಪೊರೇಷನ್ನುಗಳನ್ನು ಸ್ಥಾಪಿಸುವ ಯೋಜನೆಯನ್ನು ಮಾಡಿ ದುದು. ಆದರೆ ಈಗ ಕೆಲವು ಕಚ್ಚಾ ಮಾಲುಗಳ ಮೇಲೆ ಹತೋಟಿ ಯನ್ನು ಸಡಿಲಗೊಳಿಸಿದುದರಿಂದ ಈ ವಿಷಯದಲ್ಲಿ ಸಣ್ಣ ಕೈಗಾ ರಿಕಾ ಕಾರ್ಪೊರೇಷನ್ನುಗಳ ಪಾತ್ರ ಹೆಚ್ಚು ಮಹತ್ವವಿಲ್ಲವಾದರೂ, ಕೈಗಾರಿಕಾ ಕಚ್ಚಾಮಾಲುಗಳನ್ನು ಅವು ಸರಬರಾಜು ಮಾಡು ತ್ತಿರಲೇಬೇಕಾಗುವುದು.

ಸಣ್ಣ ಕೈಗಾರಿಕಾ ತಯಾರಿಕೆಗಳ ಮಾರಾಟ

ಸಣ್ಣ ಕೈಗಾರಿಕೆಗಳು ತಯಾರಿಸಿದ ವಸ್ತುಗಳನ್ನು (ಉತ್ಪಾ ದನೆಗಳನ್ನು) ಮಾರಾಟ ಮಾಡುವ ವಿಷಯದಲ್ಲಿ ಸಣ್ಣ ಕೈಗಾರಿಕಾ ಕಾರ್ಪೊರೇಷನ್‌ಗಳಿಂದ ನೆರವನ್ನು ಹೆಚ್ಚಾಗಿ ಉಪಯೋಗಿಸಿ ಕೊಳ್ಳಲಾಗುತ್ತಿಲ್ಲ. ಮಾರುಕಟ್ಟೆಗಳ ಅವಶ್ಯಕತೆಗಳನ್ನು ಅಧ್ಯ ಯನಮಾಡಿ, ಬಳಕೆ ಮತ್ತು ಬಯಕೆಗಳಿಗೆ ತಕ್ಕಂತೆ, ತಯಾರಿಕೆ ಗಳನ್ನು ನೂತನ ವಿಧಾನದಲ್ಲಿ ಮಾರಾಟ ಮಾಡಿ, ಸಣ್ಣ ಸಣ್ಣ ಉದ್ಯಮಗಳಿಗೆ ಪ್ರೋತ್ಸಾಹ ನೀಡುವುದಕ್ಕೆ ಬಹಳ ಅವಕಾಶ ವಿದೆ. ತಯಾರಿಕೆಗಳಿಗೆ ಹೆಸರಿಡುವುದು, ಬೇಡಿಕೆಗೆ ತಕ್ಕಂತೆ ಗುಣಗಳುಳ್ಳ ತಯಾರಿಕೆಗಳನ್ನು ಸೂಚಿಸುವುದು, ಮಾರಾಟ ಪ್ರಚಾರ, ಮಾರಾಟ ಕೇಂದ್ರಗಳ ಸ್ಥಾಪನೆ, ಉತ್ಪನ್ನಗಳಿಗೆ ಸಾಮಾನ್ಯ ಛಾಪುಗಳನ್ನು ನೀಡುವುದು ಮುಂತಾದ ವಿಷಯ ಗಳಲ್ಲಿ ಕಾರ್ಪೊರೇಷನ್ನುಗಳು ಸಹಾಯಕವಾಗಿರಬಹುದು.

ಸಣ್ಣ ಉದ್ಯಮ ಕ್ಷೇತ್ರದಲ್ಲಿ ಮಾರಾಟವಿಲ್ಲದೆ ಉತ್ಕಟ ಪರಿಸ್ಥಿತಿಯುಂಟಾದಾಗ ಒಂದು ಅಧ್ಯಯನ ಸಮಿತಿಯು ಸಣ್ಣ

ಕೈಗಾರಿಕೆಗಳು ತಯಾರುಮಾಡಿದ ವಸ್ತುಗಳನ್ನು ಪ್ರತಿ ಜಿಲ್ಲಾ ಕೇಂದ್ರಗಳಲ್ಲಿ ಪ್ರದರ್ಶನಾಲಯ ಅಥವಾ ಮಾರಾಟ ಕೇಂದ್ರ ಗಳಲ್ಲಿಟ್ಟುಕೊಳ್ಳುವವರಿಗೆ ಅನುಕೂಲವಾಗುವಂತೆಯೂ ಪ್ರಚಾರಕ್ಕೆ ಸಹಾಯಕವಾಗಿರುವಂತೆಯೂ ಕಾರ್ಪೊರೇಷನ್ನುಗಳ ಮೂಲಕ ಸಲಹೆ ಮಾಡಿಸುತ್ತದೆ. ತಯಾರಿಕೆಗಳ ಗುಣ ವಿಶೇಷ ಗಳ ಮಾಹಿತಿ ಮತ್ತು ಮಾರಾಟ ತಪಶೀಲುಗಳಿಂದ ಕೂಡಿದ್ದರೆ ಹೆಚ್ಚು ವ್ಯಾಪಾರಕ್ಕೆ ಈ ಕೇಂದ್ರಗಳ ಮೂಲಕ ಖಂಡಿತ ಸಹಾಯವಾಗುತ್ತದೆ.

ಕಂತಿನ ಸರಬರಾಜು ಮತ್ತು ಸರಕಾರಿ ಕೊಳ್ಳುವಿಕೆ

ಸಣ್ಣ ಕೈಗಾರಿಕೆಗಳ ತಯಾರಿಕೆಗಳಿಗೆ ಸರಕಾರದಿಂದ ಆರ್ಡರುಗಳುದೆ ೂರೆಯುವಂತೆ ಸಣ್ಣ ಕೈಗಾರಿಕಾ ಕಾರ್ಪೊರೇಷನ್ನುಗಳು ಆಂಧ್ರ, ಅಸ್ಸಾಂ, ಪಶ್ಚಿಮ ಬಂಗಾಳ, ಬಿಹಾರ್, ಮಹಾರಾಷ್ಟ್ರ, ಒರಿಸ್ಸ ಮತ್ತು ಉತ್ತರ ಪ್ರದೇಶಗಳಲ್ಲಿ ಸಹಾಯ ಮಾಡುತ್ತಿವೆ. ತಮ್ಮ ಹೆಸರಿನಲ್ಲಿಯೇ ಆರ್ಡರುಗಳನ್ನು ಪಡೆದು ಸಣ್ಣ ಉದ್ಯಮಗಳಿಂದ ಸರಬರಾಜು ಆಗುವಂತೆ ಏರ್ಪಾಡು ಮಾಡುತ್ತಿವೆ.

ಬಿಹಾರ, ಗುಜರಾತ್, ಕೇರಳ, ಮಧ್ಯಪ್ರದೇಶ, ಮಹಾರಾಷ್ಟ್ರ, ಮೈಸೂರು, ಒರಿಸ್ಸಾ, ಪಶ್ಚಿಮಬಂಗಾಳ, ಪಂಜಾಬು ಮತ್ತು ಉತ್ತರ ಪ್ರದೇಶಗಳಲ್ಲಿ ರಾಜ್ಯ ಕಾರ್ಪೊರೇಷನ್ನುಗಳು ಸಣ್ಣ ಕೈಗಾರಿಕೆಗಳಿಗೆ ಮಾರಾಟದ ನೆರವನ್ನು ನೀಡುತ್ತಿವೆ. ಸರಕಾರದ ಕೆಲವು ಯೋಜನೆಗಳನ್ನೂ ಈ ಕಾರ್ಪೊರೇಷನ್ನಿಗೆ ವರ್ಗಾಯಿಸಲಾಗಿದೆ. ಕೈಗಾರಿಕಾ ಎಸ್ಟೇಟುಗಳ ಸಂಪೂರ್ಣ ಕೆಲಸವನ್ನು ಅಸ್ಸಾಂ, ಮೈಸೂರು, ಮಧ್ಯಪ್ರದೇಶ, ಬಿಹಾರ

ಮತ್ತು ಕೇರಳ ದೇಶಗಳಲ್ಲಿ ರಾಜ್ಯ ಕಾರ್ಪೊರೇಷನ್ನುಗಳೇ ವಹಿಸಿಕೊಂಡಿವೆ.

ಕಂತಿನ ಮೇಲೆ ಯಂತ್ರಗಳ ಸರಬರಾಜು ಮಾಡುವ ಕಾರ್ಯಾಚರಣೆಯನ್ನು ಗುಜರಾತ್, ಕೇರಳ, ಮಧ್ಯಪ್ರದೇಶ ಮಹಾರಾಷ್ಟ್ರ, ಮೈಸೂರು, ಪಂಜಾಬ್, ಉತ್ತರಪ್ರದೇಶ ಮತ್ತು ಪಶ್ಚಿಮ ಬಂಗಾಳ ರಾಜ್ಯಗಳ ಸಣ್ಣ ಕೈಗಾರಿಕಾ ಕಾರ್ಪೊರೇಷನ್ನುಗಳು ವಹಿಸಿಕೊಂಡಿವೆ. ಆಂಧ್ರದಲ್ಲಿರುವ ಸಣ್ಣ ಕೈಗಾರಿಕಾ ಕಾರ್ಪೊರೇಷನ್ ಸಾಲದ ನೆರವನ್ನು ಸಹ ನೀಡುತ್ತದೆ.

ಕೆಲವು ಕಾರ್ಪೊರೇಷನ್ನುಗಳು ಸಣ್ಣ ಕೈಗಾರಿಕೆ ತಯಾರಿಕೆಗಳ ಗುಣ ನಿಖರಣೆ, (quality marking) ರಫ್ತಿನ ಅಭಿವೃದ್ಧಿ ಮೊದಲಾದ ವಿಷಯಗಳ ಬಗ್ಗೆ ನಿರ್ದೇಶನ ಹಾಗೂ ಪ್ರೋತ್ಸಾಹ ನೀಡುವ, ಹಲವು ಪ್ರಮುಖ ಕಾರ್ಯಗಳನ್ನೂ ಮಾಡುತ್ತವೆ.

ಪಕ್ಷಿನೋಟ

ಸರ್ಕಾರವು ನೀಡುತ್ತಿರುವ ಈ ಸಹಾಯ, ಸೌಲಭ್ಯಗಳಿಂದ ಸಣ್ಣ ಪ್ರಮಾಣದ ಕೈಗಾರಿಕೆಗಳ ಬೆಳವಣಿಗೆ ದಿನೇದಿನೇ ಪ್ರಗತಿ ದಾಯಕವಾಗಿ ಮುಂದುವರಿಯುತ್ತಿದೆ. ರಾಷ್ಟ್ರ ಆರ್ಥಿಕಾಭಿ ವೃದ್ಧಿಯಲ್ಲಿ ಅವು ಸಾಕಷ್ಟು ಪಾತ್ರವಹಿಸಿದೆ. ಇಡೀ ರಾಷ್ಟ್ರದಲ್ಲಿ ಕಳೆದ ವರ್ಷದ ಲೆಕ್ಕದ ಪ್ರಕಾರ ಸಣ್ಣ ಪ್ರಮಾಣದ ಕೈಗಾರಿಕೆಗಳ ತಯಾರಿಕೆಯು ಸುಮಾರು ಹನ್ನೊಂದು ಸಾವಿರ ಕೋಟಿ ರೂಪಾಯಿಗಳಿಗೂ ಮಿಗಿಲಾಗಿ ಇತ್ತು. ಈ ಸಣ್ಣ ಕೈಗಾರಿಕೆಗಳಲ್ಲಿ ಹೂಡಿರುವ ಬಂಡವಾಳದ ಮೊತ್ತ ಸುಮಾರು 1500 ಕೋಟಿ ರೂಪಾಯಿಗಳಿಗೂ ಮಿಗಿಲಾಗಿ ದೆಯೆಂದು ಗೊತ್ತಾಗಿದೆ. ಎಲ್ಲಾ ರಾಜ್ಯಗಳಲ್ಲೂ ರಿಜಿಸ್ಟರ್ ಆಗಿರುವ ಸಣ್ಣ ಕೈಗಾರಿಕೆಗಳ ಸಂಖ್ಯೆ 5 ಲಕ್ಷಕ್ಕೂ ಹೆಚ್ಚಾಗಿದೆ. ರಿಜಿಸ್ಟರ್ ಆಗಿಲ್ಲದಿರುವ ಸಣ್ಣ ಮತ್ತು ಇನ್ನೂ ಅತಿ ಸಣ್ಣ ಕೈಗಾರಿಕೆಗಳು ಸುಮಾರು 2½–3 ಲಕ್ಷಕ್ಕೇನೂ ಕಡಿಮೆ ಇಲ್ಲ ವೆಂದು ಅಂದಾಜು ಮಾಡಲಾಗಿದೆ.

ರಿಜಿಸ್ಟರ್ ಆಗಿರುವ ಸಣ್ಣ ಕೈಗಾರಿಕೆಗಳಲ್ಲಿ ಸುಮಾರು ಒಂದು ಕೋಟಿ ಜನರಿಗೆ ಉದ್ಯೋಗ ಕೊಡಲಾಗಿದೆಯೆಂದು ತಿಳಿದುಬಂದಿದೆ. ರಿಜಿಸ್ಟರ್ ಮಾಡಿಸಿಕೊಳ್ಳದೆ ಲೆಕ್ಕಕ್ಕೆ ಸಿಗದೆ ಇರುವ ಸಣ್ಣ ಕೈಗಾರಿಕೆಗಳು ಮತ್ತು ಗ್ರಾಮಾಂತರ ಪ್ರದೇಶ ಗಳಲ್ಲಿರುವ ಚಿಕ್ಕ ಉದ್ಯಮಗಳಲ್ಲಿ ಸುಮಾರು (45–50) ಲಕ್ಷ ಕ್ಕಿಂತ ಹೆಚ್ಚು ಜನರಿಗೆ ಉದ್ಯೋಗ ಕಲ್ಪಿಸಿಕೊಟ್ಟಿದೆ. ಇದರಿಂದ ಲಕ್ಷಾಂತರ ಸಂಸಾರಗಳು ತಮ್ಮ ಸುಖ ಜೀವನವನ್ನು ನಡೆಸುತ್ತಿವೆ.

ಪ್ರಚಾರೋಪನ್ಯಾಸ ಮಾಲೆ

1.	ನಗೆಯ ನೆಲೆ	ಎಸ್. ಕೆ. ರಾಮಚಂದ್ರರಾವ್
2.	ನಕ್ಷತ್ರ ಲೋಕ	ಜಿ. ಟಿ. ನಾರಾಯಣರಾವ್
3.	ಭಯ-ಸರಳ ವಿಶ್ಲೇಷಣೆ	ಎಂ. ಶಿವರಾಂ
4.	ಶ್ರೀ ಕವಿ ಲಕ್ಷ್ಮೀಶ	ಜಿ. ಎಸ್. ಸಿದ್ಧಲಿಂಗಯ್ಯ
5.	ಶಾಂತಿನಾಥ ಕವಿ	ಕಮಲಾ ಹಂಪನಾ
6.	ಉತ್ತಂಗಿ ಚನ್ನಪ್ಪ	ಸ. ಸ. ಮಾಳವಾಡ
7.	ಬಯಲಾಟಗಳು	ಚಂದ್ರಶೇಖರ ಕಂಬಾರ
8.	ನಾಟಕದಲ್ಲಿ ನವ್ಯತೆ	ಪಿ. ಲಂಕೇಶ್
9.	ದ್ರಾವಿಡ ಸಂಖ್ಯಾವಾಚಕಗಳು	ಹಂಪ. ನಾಗರಾಜಯ್ಯ
10.	ಉಪಭಾಷೆ	ಕೃಷ್ಣ ಪರಮೇಶ್ವರ ಭಟ್ಟ
11.	ಅರವಿಂದರ ವಿಚಾರಧಾರೆ	ಸಿ. ಕೆ. ವೆಂಕಟರಾಮಯ್ಯ
12.	ಪೂರ್ಣಯೋಗಿ ಶ್ರೀ ಅರವಿಂದರು	ಕೋ. ಚನ್ನಬಸಪ್ಪ
13.	ಪ್ರಾಚೀನ ಸಂಸ್ಕೃತಿ	ಎಸ್. ಕೆ. ರಾಮಚಂದ್ರರಾವ್
14.	ಪ್ರಾಚೀನ ಭಾರತದ ಆರ್ಥಿಕ ವ್ಯವಸ್ಥೆ	ಎನ್. ಜಿ. ಚಂದ್ರಶೇಖರಯ್ಯ
15.	ಸಣ್ಣ ಕೈಗಾರಿಕೆಗಳು	ಆರ್. ಎಸ್. ಆರಾಧ್ಯ
16.	ವಿವಾಹ ಪದ್ಧತಿಗಳು	ಎಸ್. ಕೆ ರಾಮಚಂದ್ರರಾವ್
17.	ಪಾನೀಯಗಳು	ಕೆ. ಎಸ್. ಲಕ್ಷ್ಮಣರಾವ್
18.	ಚಂದ್ರಲೋಕ ಯಾತ್ರೆ	ಪಿ. ಎಸ್. ವೆಂಕಟಸ್ವಾಮಿಶೆಟ್ಟಿ
19.	ಬೆಳಕಿನ ಸ್ವರೂಪ	ಬಿ. ವಿ. ನಾರಾಯಣರಾವ್
20.	ದೂರದರ್ಶನ	ಕೆ. ಶೇಷಾದ್ರಿ ಅಯ್ಯಂಗಾರ್
21.	ಸೂಕ್ಷ್ಮದರ್ಶಕಗಳು ಮತ್ತು ದೂರದರ್ಶಕಗಳು	ಕೆ. ಶೇಷಾದ್ರಿ ಅಯ್ಯಂಗಾರ್
22.	ಕುರುಡು	ಎಸ್. ಟಿ. ಪುಟ್ಟಣ್ಣ
23.	ಕಣ್ಣಿನ ರೋಗಗಳು	ಎಸ್. ಟಿ. ಪುಟ್ಟಣ್ಣ
24.	ಕ್ಷಯ	ಎಂ. ಬಸವರಾಜೆ ಅರಸು
25.	ಮೂತ್ರಪಿಂಡದ ಕೆಲವು ರೋಗಗಳು	ಎಂ. ಬಸವರಾಜೆ ಅರಸು
26.	ಉಕ್ಕು : ತಯಾರಿಕೆ ಮತ್ತು ರಚನೆ	ಕೆ. ಆರ್. ಮೋಹನ್
27.	ನೀರಾವರಿ ಸಮಸ್ಯೆಗಳು	ಕೆ. ಎನ್. ಶಿವಶಂಕರರಾವ್
28.	ಅಂತರ್ಜಲ	ಸಿ. ನಾಗಣ್ಣ
29.	ಪಂಪ	ತ. ಸು. ಶಾಮರಾಯ
30.	ದೇಹರಚನೆ ಹಾಗೂ ಮೂಳೆಗಳು	ಎಸ್. ಬಿ. ವಸಂತ ಕುಮಾರ್
31.	ಶ್ರೀನಿವಾಸ ರಾಮಾನುಜನ್	ಜಿ. ಟಿ. ನಾರಾಯಣರಾವ್
32.	ಮಹಾಕವಿ ಕುಮಾರನಾಶಾನ್	ಬಿ. ಕೆ. ತಿಮ್ಮಪ್ಪ, ಟಿ. ವೆಂಕಟ
33.	ತುಳ್ಳಲ್‌ಕವಿ ಕುಂಜನ್ ನಂಬಿಯಾರ್	ಬಿ. ಕೆ. ತಿಮ್ಮಪ್ಪ, ಟಿ. ವೆಂಕಟ
34.	ಪರಾಮಾನಸಶಾಸ್ತ್ರ	ಎಸ್. ಕೆ. ರಾಮಚಂದ್ರರಾವ್